ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 39 ಸೆಪ್ಟೆಂಬರ್ 25, 2011 ರೂ. 5/- ಪುಟ 16



ಕೋಮುವಾದ ಹಿಂಸೆ ತಡೆ ಮಸೂದೆ : ಏನಾಗಬೇಕಿದೆ ?

ಕೊಪ್ಪಳ : ಚುನಾವಣಾ ಕಣದಲ್ಲಿ ಆಮಿಷಗಳ ಸಪ್ಪಳ











ಅಡ್ವಾಣಿ ಯಾತ್ರೆ : ಭ್ರಷ್ಟಾಚಾರ ವಿರೋಧದ ಮುಸುಕಿನ ಹಿಂದೆ...!?



ರಿಲೆಯನ್ಸ್ ಅಕ್ರಮ : ತೈಲ ಸಂಶೋಧನಾ ಕ್ಷೇತ್ರದಲ್ಲಿ ಭಾರೀ ವಂಚನೆಗಳು

ಪೆಟ್ರೋಲಿಯಂ ವಲಯದಲ್ಲಿ ದುಷ್ಟಕೂಟದ ಗೋಲ್‌ಮಾಲ್‌ಗಳು

ಜನಶಕ್ತಿ
ಕನ್ನಡ ವಾರಪತ್ರಿಕೆ

ಗಣಿಗಾರಿಕೆ ವಿರುದ್ಧ ಬಳ್ಳಾರಿಯಲ್ಲಿ ಸಿಐಟಿಯು ರ್‍ಯಾಲಿ

"ಭ್ರಷ್ಟಾಚಾರದ ವಿರುದ್ಧ, ಕನಿಷ್ಠ ಕೂಲಿ ಹಾಗೂ ಕಾರ್ಮಿಕ ಕಾನೂನುಗಳ ಜಾರಿಗಾಗಿ ಹೋರಾಟ ತೀವ್ರವಾಗಲಿದೆ"

ಎ.ಕೆ.ಪದ್ಮನಾಭನ್

ಇಡೀ ದೇಶದಲ್ಲಿ ಕ್ಯಾನ್ಸರ್‌ನಂತೆ ಬೆಳೆದಿರುವ ಭ್ರಷ್ಟಾಚಾರದ ವಿರುದ್ಧ ಹಾಗೂ ಕನಿಷ್ಠಕೂಲಿ ಮತ್ತು ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಲು ಒತ್ತಾಯಿಸಿ ಹೋರಾಟ ತೀವ್ರಗೊಳ್ಳಲಿದೆ ಎಂದು ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಕಾಂ.ಎ.ಕೆ.ಪದ್ಮನಾಭನ್ ತಿಳಿಸಿದರು.

ಅವರು ಸಿಐಟಿಯು ಬಳ್ಳಾರಿ ಜಿಲ್ಲಾ ಸಮಿತಿ ಆಯೋಜಿಸಿದ್ದ ಬೃಹತ್ ರ್‍ಯಾಲಿ ಮತ್ತು ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ಸಾವಿರಾರು ಕೋಟಿ ರೂಪಾಯಿಗಳ ಹಗರಣದಲ್ಲಿ ಮುಳುಗಿವೆ. ಜನರ ಕಾರ್ಮಿಕರ ಸಮಸ್ಯೆಗಳನ್ನು ನಿರ್ಲಕ್ಷಿಸಿ ಹಣ ಮಾಡುವ ದಂಧೆಯಲ್ಲಿ ತೊಡಗಿವೆ.

ಕೇಂದ್ರ ಸರ್ಕಾರ ಕಾರ್ಮಿಕ ಕಾನೂನುಗಳ ಜಾರಿಗೆ ಗಮನ ನೀಡದೆ ಭ್ರಷ್ಟಾಚಾರ ನಡೆಸಲು ಕುಮ್ಮಕ್ಕು ನೀಡಿದೆ. ಈಗಾಗಲೇ ಭ್ರಷ್ಟಾಚಾರ ನಡೆಸಿರುವ ಕೆಲವರು ತಿಹಾರ್ ಜೈಲಿನಲ್ಲಿದ್ದಾರೆ.

ಮನಮೋಹನ್ ಸಿಂಗ್ ನೇತೃತ್ವದ ಕೇಂದ್ರ ಸರ್ಕಾರ ದೇಶದಲ್ಲಿ ನೈಸರ್ಗಿಕ ಸಂಪತ್ತಿನ ಲೂಟಿಯನ್ನು ತಡೆಯಲು ಕ್ರಮ ಕೈಗೊಳ್ಳಲು ವಿಫಲವಾಗಿದೆ. ದೇಶದ ಎಲ್ಲಾ ನೈಸರ್ಗಿಕ ಸಂಪತ್ತಿನ ಮೇಲೆ ಕೇಂದ್ರ ಸರ್ಕಾರದ ನಿಯಂತ್ರಣ ವಿರಬೇಕೆಂದು ಅವರು ಒತ್ತಾಯಿಸಿದರು.



ಅಲ್ಲದೆ ಕೇಂದ್ರ ಸರ್ಕಾರ ಕಾರ್ಮಿಕರಿಗೆ ಮೋಸ ಮಾಡುವ ನಿಟ್ಟಿನಲ್ಲಿ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಹೊರಟಿದೆ. ಅದೇ ರೀತಿ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಕುರಿತು ಲೋಕಾಯುಕ್ತರ ವರದಿ ಸಲ್ಲಿಕೆಯಾಗಿದ್ದು, ಈ ವರದಿ ಆಧರಿಸಿ ಈಗಾಗಲೇ ಅನೇಕರ ಮೇಲೆ ಕೇಸ್ ದಾಖಲಾಗಿದ್ದು, ಅದರಿಂದ ತಪ್ಪಿಸಿಕೊಳ್ಳಲು ಯಡಿಯೂರಪ್ಪ ಮತ್ತು ಇತರರು ಪ್ರಯತ್ನಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಸಿಐಟಿಯು ನೇತೃತ್ವದಲ್ಲಿ ಭ್ರಷ್ಟಾಚಾರದ ವಿರುದ್ಧ ಕಾರ್ಮಿಕರ ಕಾನೂನುಗಳ ಮತ್ತು ಕನಿಷ್ಟ ಕೂಲಿ ಜಾರಿಗಾಗಿ ಹೋರಾಟ ತೀವ್ರಗೊಳ್ಳಲಿದೆ ಎಂದು ಕರೆ ನೀಡಿದರು.

ನಂತರ ಮಾತನಾಡಿದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್‌ರವರು ರಾಜ್ಯ ಸರ್ಕಾರ ಕಾರ್ಮಿಕರಿಗೆ ಕನಿಷ್ಠ ಕೂಲಿ ಜಾರಿಗೊಳಿಸಬೇಕೆಂದು ಸಿಐಟಿಯು ನಿರಂತರ ಹೋರಾಟ ನಡೆಸುತ್ತಾ ಬಂದಿದೆ. ಆದರೆ ರಾಜ್ಯ ಬಿಜೆಪಿ ಸರ್ಕಾರ ಕಾರ್ಮಿಕರ ಈ ಬೇಡಿಕೆ ಈಡೇರಿಸುವ ಬದಲಾಗಿ ಕಾರ್ಮಿಕರನ್ನು ಜಾತಿ, ಧರ್ಮದ ಹೆಸರಿನಲ್ಲಿ ಒಗ್ಗಟ್ಟನ್ನು ಮುರಿಯಲು ಹೊರಟಿದೆ.

ಬಳ್ಳಾರಿ ಜಿಲ್ಲೆಯ ಮಂತ್ರಿಗಳು ಅಕ್ರಮ ಗಣಿಗಾರಿಕೆ ನಡೆಸಿ ಲೂಟಿ ಹೊಡೆದು ಈಗ ಇನ್ನಷ್ಟು ಲೂಟಿ ಹೊಡೆಯಲು ಮತ್ತೆ ಮಂತ್ರಿಗಳಾಗಲು ಹೊರಟಿದ್ದಾರೆ. ಇಂತಹ ಲೂಟಿಕೋರರನ್ನು ಜೈಲಿಗೆ ಕಳಿಸುವ ಬದಲು ರಾಜ್ಯದ ಮುಖ್ಯಮಂತ್ರಿಗಳಾದ ಡಿ.ವಿ.ಸದಾನಂದಗೌಡರು ಅವರ ರಕ್ಷಣೆಗೆ ನಿಂತಿರುವುದು ಬಿಜೆಪಿ ಬಣ್ಣ ಬಯಲು ಮಾಡಿದೆ ಎಂದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಇತ್ತೀಚೆಗೆ ನಿಧನರಾದ ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾಗಿದ್ದ ಎಂ.ಕೆ.ಪಂಧೆಯವರಿಗೆ ಸಭೆ ಶ್ರದ್ಧಾಂಜಲಿ ಸಲ್ಲಿಸಿತು.

ಕಾರ್ಯಕ್ರಮದಲ್ಲಿ ಯು.ಬಸವರಾಜ್, ಕೆಪಿಆರ್‌ಎಸ್ ಜಿಲ್ಲಾ ಕಾರ್ಯದರ್ಶಿ, ಕೆ.ಕೋಟೇಶ್ವರರಾವ್, ವಕೀಲರು, ಎಐಎಲ್‌ಯು ಮುಖಂಡರು, ವಿಮಾನೌಕರರ ಮುಖಂಡರಾದ ಡಿ.ಜಿ.ವಿಠಲ್ ಮಾತನಾಡಿದರು. ಭಾಸ್ಕರ ರೆಡ್ಡಿ ಸ್ವಾಗತಿಸಿದರು. ಆರ್.ಎಸ್. ಬಸವರಾಜು ಪ್ರಸ್ತಾಪಿಸಿದರು. ಸತ್ಯಬಾಬು ನಿರೂಪಿಸಿದರು. ಎಸ್.ಜಗನ್ನಾಥ್ ವಂದಿಸಿದರು. ನಾಗರತ್ನಮ್ಮ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ವಿಶ್ವನಾಥ ಸ್ವಾಮಿ, ತಿಪ್ಪಯ್ಯ, ಎಂ.ಗೋಪಾಲ್ ಇತರ ಮುಖಂಡರು ಉಪಸ್ಥಿತರಿದ್ದರು.

ವರದಿ: ಆರ್.ಎಸ್.ಬಸವರಾಜು

ಅವರ ಬೆವರು

ವಿಜ್ಞಾನ ವೈಚಾರಿಕತೆ ಮುಗಿಸಲೇ ಅವರು
ನಿರಂತರ ಸುರಿಸುತ್ತ ಬಂದವರು ಬೆವರು
ಉಳಿದುದಕೆ ಬೆವರನ್ನು ಮಾಡಿಲ್ಲ ವ್ಯರ್ಥ
ಆದರೂ ಸಾಧಿಸಲು ಆಗಿಲ್ಲ ಸ್ವಾರ್ಥ

-ವಿಡಂಬಾರಿ



ಗಣಿಗಾರಿಕೆ ವಿರೋಧಿಸಿ ಬಳ್ಳಾರಿಯಲ್ಲಿ ಸಿಐಟಿಯು ಮಹಾಸಭೆ

ಕಾರ್ಮಿಕ ಕಾನೂನುಗಳು ಕನಿಷ್ಠ ಕೂಲಿ ಕಾನೂನಿನ ಜಾರಿಗೆ ಒತ್ತಾಯಿಸಿ ಭ್ರಷ್ಟಾಚಾರ, ಬೆಲೆಏರಿಕೆ, ಅಕ್ರಮ ಗಣಿಗಾರಿಕೆ ವಿರೋಧಿಸಿ ಬಳ್ಳಾರಿಯಲ್ಲಿ ಸಿಐಟಿಯು ಮಹಾಸಭೆಯು ಆಗಸ್ಟ್ 28ರಂದು ನಡೆಯಿತು. ಇದರ ಅಂಗವಾಗಿ ಸಾವಿರಕ್ಕೂ ಹೆಚ್ಚು ಕಾರ್ಮಿಕರು ನಗರದ ಕನಕದುರ್ಗಮ್ಮ ದೇವಸ್ಥಾನದಿಂದ ರ್‍ಯಾಲಿಯನ್ನು ನಡೆಸಿದ್ದರು. ಈ ರ್‍ಯಾಲಿಗೆ ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಎ.ಕೆ.ಪದ್ಮನಾಭನ್‌ರವರು ಚಾಲನೆ ನೀಡಿದರು. ಅಲ್ಲಿಂದ ಪ್ರಾರಂಭವಾದ ರ್‍ಯಾಲಿಯು ರಾಯಲ್ ಸರ್ಕಲ್ ಮೂಲಕ ಗಾಂಧಿ ಭವನದಲ್ಲಿ ಕಾರ್ಮಿಕರು ಸಮಾವೇಶಗೊಂಡರು. ಇದಕ್ಕೂ ಮೊದಲು ಬಳ್ಳಾರಿ ಜಿಲ್ಲೆಯಲ್ಲಿರುವ ಜಿಂದಾಲ್ ಉಕ್ಕಿನ ಕಾರ್ಖಾನೆಯಲ್ಲಿ ಆಡಳಿತ ಮಂಡಳಿಯ ನಿರ್ಲಕ್ಷ್ಯದಿಂದಾಗಿ ವಿಷಾನಿಲ ಸೋರಿಕೆಯಿಂದಾಗಿ 3 ಜನ ಕಾರ್ಮಿಕರು ಮರಣ ಹೊಂದಿದ್ದು, ಇಂತಹ ಅವಘಡಗಳು ಆಗಾಗ ಸಂಭವಿಸುತ್ತಿದ್ದರೂ ಯಾವುದೇ ಸುರಕ್ಷತಾ ಕ್ರಮಗಳನ್ನು ಆಡಳಿತ ಮಂಡಳಿ ವಹಿಸದೆ ಇರುವುದನ್ನು ವಿರೋಧಿಸಿ ನೂರಾರು ಕಾರ್ಯಕರ್ತರು ಬೈಕ್ ರ್‍ಯಾಲಿಯ ಜೊತೆ ಹುತಾತ್ಮ ಜ್ಯೋತಿಯನ್ನು ತೋರಣಗಲ್ಲಿನಿಂದ ಬಳ್ಳಾರಿಯವರೆಗೆ ತಂದಿದ್ದರು. ಜ್ಯೋತಿಯನ್ನು ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಎ.ಕೆ.ಪದ್ಮನಾಭನ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್, ಕೆಪಿಆರ್‌ಎಸ್ ಜಿಲ್ಲಾ ಮುಖಂಡರಾದ ಯು.ಬಸವರಾಜ್, ಸಿಐಟಿಯು ಮುಖಂಡರಾದ ಆರ್.ಎಸ್.ಬಸವ ರಾಜು, ಜೆ.ಸತ್ಯಬಾಬು, ಕೆ.ನಾಗರತ್ನಮ್ಮ, ಹೆಚ್.ತಿಪ್ಪಯ್ಯ, ಓಬಳೇಶಪ್ಪ, ಭಾಸ್ಕರರೆಡ್ಡಿ, ಸಿ.ರಘುನಾಥ್, ಕರುಣಾನಿಧಿ, ಎಐಎಲ್‌ಯು ಮುಖಂಡರಾದ ಕೆ.ಕೋಟೇಶ್ವರರಾವ್, ಎಸ್‌ಎಫ್‌ಐ ಮುಖಂಡರಾದ ಹುಳ್ಳಿ ಉಮೇಶ್, ವಿಮಾ ಸಂಘಟನೆಯ ಟಿ.ಜಿ.ವಿಠ್ಠಲ್, ಮುಂತಾದವರು ಸ್ವಾಗತಿಸಿದರು. ಈ ರ್‍ಯಾಲಿಯಲ್ಲಿ ನೂರಾರು ಜನ ಅಂಗನವಾಡಿ ನೌಕರರು, ಬಿಸಿಯೂಟ, ಕಟ್ಟಡ ಕಾರ್ಮಿಕರು, ಹಮಾಲಿ ಕಾರ್ಮಿಕರು, ಗ್ರಾಮ ಪಂಚಾಯಿತಿ ನೌಕರರು, ಪೌರ ಕಾರ್ಮಿಕರು ಭಾಗವಹಿಸಿದ್ದರು. ಎರ್ರೆಮ್ಮ, ಮಂಜುಳ, ರೇಣುಕಾ, ಬಂಡಿಬಸವರಾಜ, ಗೋಪಾಲ, ರಾರಾವಿ ಬಸವನಗೌಡ, ಹೆಚ್.ಹುಲುಗಪ್ಪ, ರಾಜಶೇಖರಗೌಡ, ಭಾಗ್ಯಮ್ಮ, ಚಂದ್ರಕುಮಾರಿ, ಅಂಜಿನಿ, ಉಮೇಶ್‌ರವರು ರ್‍ಯಾಲಿಯ ನೇತೃತ್ವ ವಹಿಸಿದ್ದರು.

– ಯರ್ರೆಮ್ಮ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕೊಪ್ಪಳ ಉಪಚುನಾವಣೆ: ಬಿಜೆಪಿ ಕಾಂಗ್ರೆಸ್‌ಗಳಿಗೆ ಪಾಠ ಕಲಿಸುವ ಸಂದರ್ಭ

ವಿಧಾನಸಭಾ ಕ್ಷೇತ್ರವೊಂದಕ್ಕೆ ನಡೆಯುವ ಉಪ ಚುನಾವಣೆಯು ರಾಜ್ಯದ ರಾಜ ಕಾರಣದ ಮೇಲೆ ಅಂತಹ ಗಮನಾರ್ಹ ಪರಿಣಾಮವನ್ನೇನೂ ಬೀರುವುದಿಲ್ಲ. ಆದರೂ ಅದು ರಾಜ್ಯದಲ್ಲಿನ ರಾಜಕೀಯದ ಪ್ರತಿಬಿಂಬ ವಾಗಬಲ್ಲದು. ಈ ಹಿನ್ನೆಲೆಯಲ್ಲಿ ಇದೇ ಸೆಪ್ಟೆಂಬರ್ 25 ರಂದು ನಡೆಯಲಿರುವ ಕೊಪ್ಪಳ ವಿಧಾನಸಭಾ ಕ್ಷೇತ್ರದ ಚುನಾವಣೆ ಒಂದು ಗಮನಾರ್ಹವೂ ಹೌದು.

ಈ ಮರು ಚುನಾವಣೆಯನ್ನು ತಂದಿದ್ದೇ ಬಿಜೆಪಿ. ಅಧಿಕಾರದಲ್ಲಿ ಉಳಿಯುವ ಕುತಂತ್ರದ ಭಾಗವಾಗಿ ಅದು ನಡೆಸುತ್ತಾ ಬಂದ ಕುಖ್ಯಾತ 'ಆಪರೇಷನ್ ಕಮಲ' ವೆಂಬ ಅನೈತಿಕ ಪಕ್ಷಾಂತರದ ಪರಿಣಾಮದ ಫಲವಾಗಿ ಆಗಾಗ ಇಂತಹ ಚುನಾವಣೆಗಳು ನಡೆಯುತ್ತಲೇ ಬಂದಿವೆ. ಜನರ ಮೇಲೆ ಅಪಾರ ಹೊರೆ, ಸಾರ್ವಜ□ಕ ಹಣದ ನಷ್ಟವನ್ನು ಉಂಟು ಮಾಡುತ್ತಲೇ ಇದೆ. ವಿರೋಧಪಕ್ಷಗಳನ್ನು ಹಣ ಹಾಗೂ ಅಧಿಕಾರ ಆಮಿಷಗಳಿಂದ ನಾಶ ಮಾಡುವ ಅತ್ಯಂತ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳೇ ಇಂತಹ ಆಪರೇಷನ್ ಕಮಲವಾಗಿದೆ.

ಕೊಪ್ಪಳದಲ್ಲಿ ಈಗ ಬಿಜೆಪಿ ಅಭ್ಯರ್ಥಿ ಯಾಗಿರುವ ಕರಡಿ ಸಂಗಣ್ಣನವರು ಜೆಡಿ(ಎಸ್)□ಂದ ಚುನಾಯಿತರಾಗಿದ್ದರು. ಜೆಡಿ(ಎಸ್)ನ್ನು ರಾಜಕೀಯವಾಗಿ ಮುಗಿಸುವ ಹುನ್ನಾರವೇ ಆಪರೇಷನ್ ಕಮಲದ ಹಿಂದಿತ್ತು. ಈಗಲೂ ಅನೇಕ ಹಗರಣ, ಭ್ರಷ್ಟಾಚಾರಗಳು, ಪ್ರಜಾ ಪ್ರಭುತ್ವ ವಿರೋಧಿ ಕೃತ್ಯಗಳಿಂದ ಎಂದೋ ರಾಜೀನಾಮೆ ಕೊಟ್ಟು ತೊಲಗ ಬೇಕಿದ್ದ ಸರ್ಕಾರ ಲಜ್ಜಾಹೀನವಾಗಿ ಅಧಿಕಾರ ದಲ್ಲಿ ಮುಂದುವರೆಯುತ್ತಿದೆ. ಈ ಕೊಪ್ಪಳದ ಕಣದಲ್ಲಿ ಪ್ರಮುಖವಾಗಿ ಬಿಜೆಪಿ, ಜಾತ್ಯಾತೀತ ಜನತಾ ದಳ, ಕಾಂಗ್ರೆಸ್‌ಗಳ ನಡುವೆಯೇ ಸ್ಪರ್ಧೆ ಇರುವುದು. ಬಿಜೆಪಿಯು ಈ ಕ್ಷೇತ್ರವನ್ನು ಹೇಗಾದರೂ ಗೆಲ್ಲಬೇಕೆಂದು ಮತದಾರರಿಗೆ ಹಣ, ಆಮಿಷ ಒಡ್ಡುತ್ತಿದೆ. ಅಧಿಕಾರವನ್ನು ದುರ್ಬಳಕೆ ಮಾಡುತ್ತಿದೆ. ಚುನಾವಣಾ ಆಯೋಗದ ಕ್ರಮಗಳು ಹಾಗೂ ಎಚ್ಚರಿಕೆ ಯನ್ನು ಅದು □ರ್ಲಕ್ಷಿಸಿದೆ. ಅಕ್ರಮಗಳಿಂದಲೇ ಉಳಿದಿರುವ ಬಿಜೆಪಿ ಅಕ್ರಮಗಳಿಂದಲೇ ಅಧಿಕಾರದಲ್ಲಿ ಉಳಿಯಲು ಹವಣಿಸುತ್ತಿದೆ. ಜಾತಿ ಮತ್ತು ಮತೀಯ ಭಾವನೆ ದುರ್ಲಾಭ ಪಡೆಯಲು ಯತ್ನಿಸುತ್ತಿದೆ. ಭ್ರಷ್ಟತೆ, ಭ್ರಷ್ಟ ಯಡಿಯೂರಪ್ಪನವರು ರಾಜೀನಾಮೆ ಕೊಡಬೇಕಾಗಿ ಬಂದಿದ್ದೇ ಲಿಂಗಾಯತರನ್ನು ಅಧಿಕಾರದಿಂದ ತೊಲಗಿಸಲೆಂದೇ ಎಂಬ ಅದರ ಅಪಪ್ರಚಾರ ಅತ್ಯಂತ ಹೀನವಾದ ತಂತ್ರವಾಗಿದೆ. ಬಿಜೆಪಿ–ಕಾಂಗ್ರೆಸ್ ಪಕ್ಷಗಳಿಗೆ ಜನರ ಪ್ರಶ್ನೆಗಳು ಚುನಾವಣೆಯ ವಿಷಯ ಗಳಾಗಿ ಹೇಳಿಕೊಳ್ಳಲು ಸಾಧನೆಗಳಾದರೂ ಏ□ವೆ? ಸದಾ ಲೂಟಿ, ದ್ರೋಹವೇ?

ಬಿಜೆಪಿ ಪಕ್ಷದೊಳಗೆ ಹಾಗೂ ಸರ್ಕಾರದಲ್ಲಿಯೂ ಹೆಡೆ ಎತ್ತಿ ಆಡುತ್ತಿರುವ ಭಿನ್ನಮತ, ಕಿತ್ತಾಟವೂ ಕೊಪ್ಪಳದ ಚುನಾವಣಾ ಕಣದಲ್ಲಿ ಕಾಣಿಸಿಕೊಳ್ಳ ತೊಡಗಿದೆ. ಯಡಿ ಯೂರಪ್ಪ ಮತ್ತು ಅನಂತಕುಮಾರ್, ಈಶ್ವರಪ್ಪ, ಶೆಟ್ಟರ್ ಬಣ ತಮ್ಮ ಮುಖ ಉಳಿಸಿಕೊಳ್ಳಲು, ಮೇಲುಗೈ ತೋರಿಸಲು ಹವಣಿಸುತ್ತಿರುವ ಸಂಭವವಿದೆ. ಯಡಿಯೂರಪ್ಪನವರ ನೇತೃತ್ವ ದಲ್ಲೇ ಚುನಾವಣಾ ಹೋರಾಟ ನಡೆಯಲಿ ಎಂಬ ಕೆಲವು ಬಿಜೆಪಿ ನಾಯಕರ ಹೇಳಿಕೆ ಯಾಗಲೀ, ಸದಾನಂದಗೌಡರೇ ನಾಯಕತ್ವ ವಹಿಸಲಿ ಪರಿಣಾಮವಾದರೂ ಏನು? ಆಗಲಿ, ಯಡಿಯೂರಪ್ಪನವರ ಮುಖ ತೋರಿಸಿ ಓಟು ಇದು ಈಗಾಗಲೇ ಕಳಂಕಿತವಾಗಿರುವ ಬಿಜೆಪಿಯ ಅಧಃಪತನದ, ಅನೈತಿಕ ರಾಜಕಾರಣದ ಪ್ರತೀಕವೂ ಹೌದು. ಮಾನ–ಮರ್ಯಾದೆ ಇದ್ದರೆ ಜನರಲ್ಲಿ ಅದು ಕ್ಷಮೆಯಾಚಿಸಿ, ಹೊಸ ಜನಾದೇಶ ಪಡೆಯುವುದಾಗಿ ಹೇಳಬೇಕಿತ್ತು.

ಇಲ್ಲಿಯೂ ಕಾಂಗ್ರೆಸ್ ಆಂತರಿಕ–ಕಿತ್ತಾಟಗಳಿಂದ ಮುಕ್ತವೇನಲ್ಲ. ವಿರೋಧ ಪಕ್ಷವಾಗಿದ್ದು □ಷ್ಕ್ರಿಯವಾಗಿರುವ ಕಾಂಗ್ರೆಸ್, ಭ್ರಷ್ಟಾಚಾರ ಹಗರಣಗಳಿಂದ ಬಿರಿಯುತ್ತಿರುವ, ಜನವಿರೋಧಿ □ೀತಿಗಳನ್ನೇ ಅನುಸರಿಸುತ್ತಿರುವ ಕಾಂಗ್ರೆಸ್‌ಗೆ ಜನರ ಮುಂದೆ ಹೋಗಿ ಮತ ಕೇಳಲು ನೈತಿಕತೆಯಾದ ಎಲ್ಲಿದೆ?

ರಾಜ್ಯದ ಜನರು ಸಂಕಷ್ಟದಲ್ಲಿದ್ದಾರೆ. ಬರ, ನೆರೆ, ರೇಷನ್ ಕಡಿತ, ವಸತಿ ಹೀನತೆ, ಎಲ್ಲಾ ಹಂತಗಳಲ್ಲಿಯೂ ಆಡಳಿತ ಯಂತ್ರದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ. ರೈತ–ಕೂಲಿಕಾರರು, ಕಾರ್ಮಿಕರ ದುಡಿವ ಜನರ ಧ್ವ□ಗೆ, ಹೋರಾಟಕ್ಕೆ ಸ್ಪಂದನವೇ ಇಲ್ಲದೇ □ರ್ಲಕ್ಷ್ಯಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಬೆಲೆ ಏರಿಕೆಯಂತಹ □ೀತಿಗಳು ಬರೆ ಎಳೆಯುತ್ತಲೇ ಇವೆ.

ಕೊಪ್ಪಳದ ಈ ಉಪ ಚುನಾವಣೆಯಲ್ಲಿ ಭ್ರಷ್ಟ, ಹಗರಣಗಳ ಜನದ್ರೋಹಿ, ಕೋಮು ವಾದಿ ಬಿಜೆಪಿಯನ್ನು ಹಾಗೂ ಜನವಿರೋಧಿ, ಭ್ರಷ್ಟ–ಹಗರಣಗಳ ಕಾಂಗ್ರೆಸ್‌ನ್ನು ಸೋಲಿಸಿ ತಕ್ಕಪಾಠ ಹೇಳಬೇಕು. ಈ ಸ□ವೇಶದಲ್ಲಿ ಹಲವು ಮಿತಿಗಳಿದ್ದರೂ ಜಾತ್ಯಾತೀತ, ಪ್ರಜಾಸತ್ತಾತ್ಮಕ ಶಕ್ತಿಗಳ ಬೆಳವಣಿಗೆಗಾಗಿ ಜಾತ್ಯಾತೀತ ಜನತಾದಳವನ್ನು ಬೆಂಬಲಿಸಿ ಚುನಾಯಿಸಬೇಕು. ಜನರ ನಂಬಿಕೆಗಳಿಗೆ ದ್ರೋಹ ಎಸಗಿದ ಪಕ್ಷಾಂತರಿ ಗಳಿಗೆ, ಸಮಯ ಸಾಧಕರಿಗೆ ಉತ್ತರ ಹೇಳುವಂತಾಗಬೇಕು.

ಲೋಕಾಯುಕ್ತ ವರದಿ ಶೀಘ್ರ ಹಾಗೂ ದೃಢ ಕ್ರಮಕ್ಕಾಗಿ ಆಗ್ರಹಿಸಿ

ದುಂಡು ಮೇಜಿನ ಸಭೆಯ □ರ್ಣಯ

ಸೆ. 7 ರಂದು ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ವ್ಯಾಪಕ ಜನಾಂದೋಲನವನ್ನು ನಡೆಸಲು ನಿರ್ಧರಿಸಲಾಯಿತು. ಕೈಗೊಂಡ ನಿರ್ಧಾರದ ಆಧಾರದಲ್ಲಿ ಸಹಿ ಸಂಗ್ರಹಣಾ ಮನವಿಯನ್ನು ರಾಜ್ಯಪಾಲರಿಗೆ, ಲೋಕಾಯುಕ್ತರಿಗೆ ಸಲ್ಲಿಸಾಗುವುದು

ಕರ್ನಾಟಕದಲ್ಲಿ ಸುಮಾರು ಒಂದು ದಶಕಗಳ ಕಾಲ □ರಂತರ ಗಣಿ ಲೂಟಿಯ ಬಗ್ಗೆ ಲೋಕಾಯುಕ್ತರ ಎರಡನೇ ವರದಿ ಸಲ್ಲಿಕೆಯಾಗಿ ತಿಂಗಳಿಗೂ ಮೀರಿದೆ. ಆ ವರದಿಯಲ್ಲಿ ಹಾಗೂ 2008ರಲ್ಲಿ □ೀಡಿದ ಮೊದಲನೇ ವರದಿಯಲ್ಲಿ ಕರ್ನಾಟಕದ ಗಣಿಲೂಟಿಯ ಅಗಾಧತೆ, ವ್ಯಾಪಕತೆ



ಮತ್ತು ಅದರ ಹಿಂದಿನ ರಾಜಕಾರಣಿಗಳು, ಕಂಪ□ಗಳು, ಅಕ್ರಮ ನಡೆಸಿದ ವಿಧಾನಗಳು, ಅದಕ್ಕೆ ಅನುವುಮಾಡಿಕೊಟ್ಟ ಅಧಿಕಾರಶಾಹಿ ವರ್ಗ ಇವುಗಳ ಬಗ್ಗೆ ಖಚಿತ ದಾಖಲೆಗಳ ಆಧಾರದಲ್ಲಿ ನಡೆದ ತ□ಖೆಯನ್ನು ಅದರ ಆಧಾರದ ಮೇಲೆ □ರ್ದಿಷ್ಟ ಶಿಫಾರಸುಗಳನ್ನು ಸರ್ಕಾರಕ್ಕೆ, ರಾಜ್ಯಪಾಲರಿಗೆ ಸಲ್ಲಿಸಲಾಗಿದೆ. ರಾಜ್ಯದ ಜನತೆಯ ಮುಂದೆ ಇಡಲಾಗಿದೆ

ರಾಜ್ಯದ ಭೂ ಕಾಯಿದೆಗಳು, ಅರಣ್ಯ ಕಾಯಿದೆ, ಗಣಿ ಕಾಯಿದೆಗಳು, ಸಾರಿಗೆ ಕಾಯಿದೆ, ಸ್ತಾಗಾಣಿಕೆ ಕಾಯಿದೆ, ಪರಿಸರ ಕಾಯಿದೆ, ಕ್ರಿಮಿನಲ್ ಅಪರಾಧ ಗಳಿಗೆ ಸಂಬಂಧಪಟ್ಟ ಕಾಯಿದೆಗಳು ಇತ್ಯಾದಿ ಅನೇಕ ಕಾಯಿದೆಗಳನ್ನು ಯಾವುದೇ ಅಂಜಿಕೆ ಯಿಲ್ಲದೆ ಸಾವಿರಾರು ಬಾರಿ ಉಲ್ಲಂಘಿಸಿರುವು ದಲ್ಲದೆ, ಲಂಚ □ೀಡಿಕೆಯ ಮೂಲಕ ಹಾಗೂ ಸರ್ಕಾರದ ಮಂತ್ರಿಗಳು ಎನ್ನುವ ಅಧಿಕಾರದ ಮೂಲಕ ಇಡೀ ಆಡಳಿತವನ್ನೇ ತಮ್ಮ ಕೈವಶಮಾಡಿಕೊಂಡು ಪ್ರಜಾಪ್ರಭುತ್ವದ ಎಲ್ಲಾ □ೀತಿ □ಯಮಗಳನ್ನು ಗಾಳಿಗೆ ತೂರಿ ಒಂದು ವಾದರಿಂದ □ರಂಕುಶ ಪ್ರಭುತ್ವವನ್ನು ಸ್ಥಾಪಿಸಿರುವುದು ವ್ಯಕ್ತವಾಗಿದೆ. ಇವುಗಳಲ್ಲಿ ಪತ್ರಿಕೆ–ಮಾಧ್ಯಮ ರಂಗವನ್ನು ಕಲುಷಿತಗೊಳಿಸುವ □ರ್ಲಜ್ಜ ಪ್ರವೃತ್ತಿಯನ್ನು ಕಾಣಬಹುದಾಗಿದೆ. ಅಂಕೆ ಮೀರಿದ ಈ ವರ್ತನೆ ಬಳ್ಳಾರಿಯ ಲಕ್ಷಾಂತರ ಜನತೆ ಧೂಳಿನ ನಡುವಿನ ಬದುಕು, ಆರೋಗ್ಯದ ಸಮಸ್ಯೆಗಳು, ಸಂಚಾರದ ತೊಂದರೆಗಳು, ಗೂಂಡಾಗಿರಿಯ ಭಯದ ವಾತಾವರಣವನ್ನು ಅನುಭವಿಸುವ ಸಂಕಟವನ್ನು ತಂದೊಡ್ಡಿದೆ. ಬಳ್ಳಾರಿಯಿಂದ ಬಂದರುಗಳಿಗೆ ಅದಿರನ್ನು ಸಾಗಿಸುವ ಎಲ್ಲಾ ರಸ್ತೆಗಳನ್ನು ಹಾಳುಮಾಡಿ, ರಸ್ತೆ ಬದಿಯ □ವಾಸಿಗಳಿಗೆ ಅನೇಕ ಬಗೆಯ ತೊಂದರೆಗಳನ್ನು ತಂದೊಡ್ಡಿದೆ. ರಾಜ್ಯದ ಬೊಕ್ಕಸಕ್ಕೆ 16000 ಕೋಟಿಗೂ ಹೆಚ್ಚು ನಷ್ಟ ಮಾಡಿ ಶಿಕ್ಷಣ, ಆರೋಗ್ಯ ಪಡಿತರ ವ್ಯವಸ್ಥೆ ಮೊದಲಾದ ಕಾರ್ಯಕ್ರಮಗಳನ್ನು ಸೊರಗಿಸಿದೆ. ಈ ಭಷ್ಟಾಚಾರದ ಅಗಾಧ

ಪುಟ 14 ಕ್ಕೆ

ಗುಜರಾತ್ ಕೋಮುಗಲಭೆ ಪ್ರಕರಣ

ಕಾರ್ಟೂನ್ ಕಾರ್ನರ್



ಕೃಪೆ: ದಿ ಹಿಂದೂ

ಸುದ್ದಿ ಬರಬ

ಸಂಸತ್‌ನಲ್ಲಿ ಮತಕ್ಕಾಗಿ-ಲಂಚದ ಹಗರಣದಲ್ಲಿ ನಿಜವಾಗಿ ಸಿಕ್ಕಿ ಬಿದ್ದವರು ಯಾರು? ತಿಹಾರ್ ಜೈಲಿನಲ್ಲಿ ಅಮರ್‌ಸಿಂಗ್ ಒಂದು ರೀತಿಯ ಬಂಧಿ, ಕಾಂಗ್ರೆಸ್ ಶೈಲಿಯ ಸಮ್ಮಿಶ್ರ ಸರ್ಕಾರ ನಡೆಸುತ್ತಿರುವ ಪ್ರಧಾನಿ ಮನಮೋಹನ್‌ಸಿಂಗ್ ಅವರು ಇನ್ನೊಂದು ರೀತಿಯ ಬಂಧಿ. ಇಬ್ಬರೂ ಏನೋ ಸಾಧಿಸಲು ಹೋಗಿ ಕಡೆಗೂ ರಾಜಕೀಯವಾಗಿ ಎಲ್ಲವನ್ನು ಕಳೆದುಕೊಂಡಿದ್ದಾರೆ ಎಂದರೆ ಸುಳ್ಳಲ್ಲ.

ತೆರೆದ ಕಣ್ಣಿನಿಂದ ನೋಡಿದ ಸತ್ಯ

ಅಣು ಮಹತ್ವ ಮತ್ತು ಹಟಮಾರಿಯ ಪಾಡು

ಪ್ರಕಾಶ್ ಬೆಳವಾಡಿ

ಜನವರಿ 2010ರಲ್ಲಿ ಸಮಾಜವಾದಿ ಪಕ್ಷದಿಂದ ಹೊರ ನಡೆದ ಅಮರ್‌ಸಿಂಗ್ ಅವರ ಅವಸ್ಥೆ ಎಲ್ಲರಿಗೂ ಪ್ರತ್ಯಕ್ಷವಾಗಿದೆ. ಮಾಜಿ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂ ಅವರ ಉಪದೇಶ ಪಡೆದು ಸಮಾಜವಾದಿ ಪಕ್ಷ ಭಾರತ-ಅಮೇರಿಕಾದ 123 ಅಣು ಒಪ್ಪಂದದ ಪರವಾಗಿ ಮನಮೋಹನ ಸಿಂಗ್ ಅವರಿಗೆ ಬೆಂಬಲ ಕೊಡುವುದಾಗಿ ಘೋಷಿಸಿದಾಗ ಅಮರ್‌ಸಿಂಗ್ ಅವರ 'ಕಿಂಗ್ ಮೇಕರ್' ಕಿರೀಟ ಮಿಂಚಿತ್ತು ನಿಜ. ಆದರೆ ಅವರ ಸಂಕಟದ ಸಮಯದಲ್ಲಿ ಕಾಂಗ್ರೆಸ್ ನೇತಾರರು ಅವರ ಸಹಾಯಕ್ಕೇನೂ ಧಾವಿಸಿಲ್ಲ. ಈ ಕಡೆ ಹಳೆಯ ಗೆಳೆಯ ಮುಲಾಯಂ ಸಿಂಗ್ ಅವರ ಬೆಂಬಲವೂ ಇಲ್ಲ.

ಅಣು ಒಪ್ಪಂದವನ್ನು ವಿರೋಧಿಸಿದ ಎಡಪಕ್ಷಗಳು ಯುಪಿಎ-1 ಸರ್ಕಾರಕ್ಕೆ ಕೊಟ್ಟಿದ್ದ ಬೆಂಬಲ ಹಿಂಪಡೆದರೂ ಪರವಾಗಿಲ್ಲ ಎಂದು ಹಟ ಮಾಡಿದ್ದ ಮನಮೋಹನ್‌ಸಿಂಗ್ ಅವರು ತಮ್ಮ ಸರ್ಕಾರವನ್ನು ಉಳಿಸಿಕೊಂಡರು ನಿಜ. ಎಡಪಕ್ಷಗಳು ಅವರ ಕೈಬಿಟ್ಟರು, ಹೊರ ನಡೆದರು. 22 ಜುಲೈ 2008ರಂದು ಲೋಕಸಭೆಯಲ್ಲಿ ವಿಶ್ವಾಸಮತ ಯಾಚಿಸಿದ ಪ್ರಧಾನಿಗಳಿಗೆ 256-275 ಮತಗಳ ಅಂತರದಿಂದ ಜಯ ಲಭಿಸಿದ್ದೂ ನಿಜ. ಆದರೆ ಗೆದ್ದ ರೀತಿ ಕೇವಲ ನಮ್ಮ ರಾಜಕೀಯ ಪಕ್ಷಗಳನ್ನಷ್ಟೇ ಅಲ್ಲ, ಸಂಸದೀಯ ಘನತೆಯನ್ನ, ನಮ್ಮ ಪ್ರಜಾತಂತ್ರ ವ್ಯವಸ್ಥೆಯನ್ನೇ ನೈತಿಕ ಇಕ್ಕಟ್ಟಿಗೆ ಒಡ್ಡಿದೆ. ಕಳೆದ ಮಾರ್ಚ್ ತಿಂಗಳಲ್ಲಿ ವಿಕಿಲೀಕ್ಸ್ ಒಂದು ಗುಪ್ತ ಕೇಬಲ್ ಕೊಟ್ಟ ವಿವರಗಳು ಹೀಗಿದ್ದವು; ಸೋನಿಯಾ ಗಾಂಧಿಯವರ ಮನೆತನಕ್ಕೆ ಹತ್ತಿರವಾದವರು ಎಂದು ಎಣಿಸಲಾದ ಕಾಂಗ್ರೆಸ್ ಪಕ್ಷದ ಸತೀಶ್ ಶರ್ಮ ಅವರ ಸಹಾಯಕ ನಚಿಕೇತ್ ಕಪೂರ್ ಅಮೇರಿಕಾದ 'ಡಿಪ್ಲೊಮ್ಯಾಟ್'ಗಳಿಗೆ ಸರ್ಕಾರ ಲೋಕಸಭೆಯಲ್ಲಿ ಬಹುಮತ ಪಡೆಯುವುದು ಖಚಿತ ಎಂದಿದ್ದರಂತೆ. ಇದಕ್ಕಾಗಿ ಸುಮಾರು 50-60 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ಮತಗಳನ್ನು ಕೊಳ್ಳುವುದಾಗಿಯೂ ಮತ್ತು ಅಣು ಒಪ್ಪಂದಕ್ಕೆ ಬಹುಮತವನ್ನು ಕೊಡಿಸುವುದಾಗಿ ಭರವಸೆಯನ್ನೂ ಕೊಟ್ಟಿದ್ದರಂತೆ. ಎರಡು ಡಬ್ಬಿಗಳಲ್ಲಿ ಹಣ ತುರುಕಿದ್ದನ್ನು ಅಮೇರಿಕನ್ನರಿಗೆ ತೋರಿಸಿದ್ದರಂತೆ ಹಾಗೂ ಅಜಿತ್‌ಸಿಂಗ್ ಅವರ ರಾಷ್ಟ್ರೀಯ ಜನತಾ ದಳದ ನಾಲ್ಕು ಮಂದಿ ಸಂಸದರಿಗೆ ತಲಾ 10 ಕೋಟಿ ರೂಪಾಯಿಗಳನ್ನು ಆಗಲೇ ತಲುಪಿಸಿದ್ದಾಗಿದೆ ಎಂದಿದ್ದರಂತೆ.

ಎಡಪಕ್ಷಗಳಲ್ಲದೆ ಭಾಜಪವೂ ಈ ಸಂಗತಿಯನ್ನು ನಾಚಿಕೇಡು, ಸರ್ಕಾರ ತಲೆತಗ್ಗಿಸಬೇಕು, ಅಲ್ಲದೆ ಪ್ರಧಾನಿ ಮನ ಮೋಹನ್ ಸಿಂಗ್ ಅವರೂ ಇದಕ್ಕೆ ಜವಾಬು ಕೊಡಬೇಕು, ರಾಜೀನಾಮೆ ನೀಡಬೇಕು ಎಂದಿದ್ದರು. ಪ್ರಧಾನಿಗಳು ಅವರ ಜಾಯಮಾನಕ್ಕೆ ತಕ್ಕಂತೆ ಜವಾಬು ನೀಡಲಿಲ್ಲ, ಆದರೆ ಅವರು ಕಳ್ಳ ಮತಗಳಿಗೆ, ಅವು ಕಳ್ಳಮತಗಳು ಎಂದು ಸಾಬೀತದಲ್ಲಿ-ತ್ತಿರುವ ಬೆಲೆ ಅವರಿಗೆ ಈಗ ಮನವರಿಕೆಯಾಗಿರಬೇಕು. ಬಹುಮಟ್ಟಿಗೆ ಸ್ವಚ್ಛ ಹಸ್ತದ ರಾಜಕಾರಣಿಗಳಾದ ಎಡಪಂಥೀಯರನ್ನು ತೊರೆದು ಡಿಎಂಕೆ ಬೆಂಬಲದಿಂದ ಮತ್ತೆ ಯುಪಿಎ-2 ಸರ್ಕಾರವನ್ನು ರಚಿಸಿ ಅವರಿಗೆ ಸಿಕ್ಕಿದ್ದೇ 2-ಜಿ ಹಗರಣ.

ಎಂದೂ ಯಾವ ಕಾರಣಕ್ಕೂ ಮಾತಾಡಲು ಹಿಂಜರಿಯುವ ಮನಮೋಹನ್ ಅವರು ಅಣು ಒಪ್ಪಂದಕ್ಕೆ ಪಟ್ಟ ಶ್ರಮ, ಹಿಡಿದ ಪಟ್ಟು ವಿಸ್ಮಯ ಹುಟ್ಟಿಸಬೇಕು. ಇದರಿಂದ ಬೆಂಬಲ ಪಕ್ಷಗಳ ವೈರ ಮಾತ್ರವಲ್ಲ ತಮ್ಮ ಕಾಂಗ್ರೆಸ್ ಗುಂಪುಗಳಲ್ಲೂ ಕಸಿವಿಸಿ ಮೂಡಿಸಿದ್ದರಂತೆ. ಚುನಾವಣೆಯಲ್ಲಿ ಮತಗಳನ್ನು ತರಿಸಲಾರದ ಈ ಅಣು ಒಪ್ಪಂದದಿಂದ ಏನಾಗಬೇಕು, ಈ ರಗಳೆ ನಮಗೆ ಯಾಕೆ ಎಂದು ಸೋನಿಯಾ ಗಾಂಧಿಯವರ ತಕರಾರನ್ನೂ ಕಡೆಗಣಿಸಿದ ಮನಮೋಹನ್ ಅವರು, ಮಂತ್ರಿಗಿರಿ ಇಲ್ಲದೆ ಬೆಂಬಲ ಕೊಡುತ್ತಿದ್ದ ಎಡಪಕ್ಷಗಳನ್ನು ತಿರಸ್ಕರಿಸಿದ ರೀತಿಯೂ ವಿಚಿತ್ರವಾಗಿತ್ತು.


ಮತಕ್ಕಾಗಿ ಹಣ ಕೊಟ್ಟು ರಾಜಕೀಯ ಲಾಭ ಪಡೆದಿದ್ದು ಕಾಂಗ್ರೆಸ್ ಪಕ್ಷ ಎನ್ನುತ್ತಾರೆ ಭಾಜಪದ ವಕ್ತಾರರು. ಆದರೆ ಲೋಕಸಭೆಯಲ್ಲಿ ನೋಟಿನ ಕಂತೆಗಳನ್ನು ಹೊತ್ತು ಆರ್ಭಟಿಸಿದ ಸಂಸದರು ಭಾರತದ ಪ್ರಜಾಸತ್ತೆಯನ್ನು ಉಳಿಸಿದರೇನು? ಈಗ ಭ್ರಷ್ಟಾಚಾರದ ವಿರುದ್ಧ ಯಾತ್ರೆ ತೆಗೆಯಲು ಹೊರಟಿರುವ ಭಾಜಪದ ನಾಯಕ ಎಲ್.ಕೆ.ಅಡ್ವಾಣಿ ಈ ದೇಶದ ಜನರಿಗೆ ಏನನ್ನು ಪ್ರದರ್ಶಿಸಲು ಯತ್ನಿಸುತ್ತಿದ್ದಾರೆ ತಿಳಿಯದು. ಆದರೆ ಮನಮೋಹನ್ ಸಿಂಗ್ ಅವರ ಪಾಡು ವಿಚಿತ್ರವಾಗಿದೆ. ತಮ್ಮ ವರ್ಚಸ್ಸನ್ನು ಕಾಂಗ್ರೆಸ್ ಪಕ್ಷಕ್ಕೆ ಒಪ್ಪಿಸಿ ಅಣು ಒಪ್ಪಂದಕ್ಕಾಗಿ ಏನೆಲ್ಲ ಸಹಿಸಿದ್ದು ಯಾಕೆ? ಅದರಿಂದ ಲಾಭವಾದ್ದಾದರೂ ಏನು? ಜಪಾನಿನ ಸುನಾಮಿಯಿಂದ ಅವರ ಫುಕು ಶಿಮಾ ಡೈಚಿ ಅಣುಸ್ಥಾವರಗಳು ಸಿಡಿದು ವಿಶ್ವವನ್ನೇ ಬೆಚ್ಚಿಬೀಳಿಸಿವೆ. ಯೂರೋಪಿನ ರಾಷ್ಟ್ರಗಳು ಈಗ ಅಣು ತಂತ್ರಜ್ಞಾನವನ್ನು ಅನುಮಾನದಿಂದ ನೋಡುತ್ತಿವೆ. ಅಲ್ಲದೆ ಅಮೇರಿಕಾದ ವರ್ತನೆಯಿಂದ ಒಪ್ಪಂದದ ಬಗ್ಗೆಯೇ ಈಗ ಎಲ್ಲರಲ್ಲೂ ಸಂಶಯ ಮೂಡಿದೆ. ಪ್ರಧಾನಿಗಳು ಸಂಸತ್‌ನಲ್ಲಿ ಕೊಟ್ಟ ಹೇಳಿಕೆಯೇ ಬೇರೆ. ಅಮೇರಿಕಾದಲ್ಲಿ ಅಲ್ಲಿಯ ಶಾಸಕರಿಗೆ ಕೊಟ್ಟಿರುವ ಭರವಸೆಯೇ ಬೇರೆ ಎಂದು ತಿಳಿದಿದೆ. ಮತ್ತೆ ಇದರಿಂದ ನಿಜಕ್ಕೂ ಲಾಭ ಯಾರಿಗೆ?

ಅಣು ಸ್ಥಾವರಕ್ಕೆ ಅಗತ್ಯವಾಗಿ ಪೂರೈಸ ಬೇಕಾದ ತಂತ್ರಜ್ಞಾನ, ಇಂಧನ ಇತ್ಯಾದಿಗಳಿಗಾಗಿ ಇನ್ನೂ 10 ವರ್ಷಗಳಲ್ಲಿ ಸುಮಾರು ಎಂಟು ಲಕ್ಷ ಕೋಟಿ ರೂಪಾಯಿಗಳನ್ನು ಭಾರತ ತೆರಬೇಕು. ಅಂತಿಮವಾಗಿ ಪ್ರಧಾನಿಗಳ ಪಾಡು ಏನೇ ಇರಲಿ ಅಮೇರಿಕಾದ ಮುಂದೆ ಮಂಗವಾಗಿದ್ದು ನಮ್ಮ ಮೈ ಮರೆತ ಪ್ರಜಾತಂತ್ರ.

ಇದು ಸೆಪ್ಟೆಂಬರ್ 15,2011ರಂದು 'ವಿಜಯಕರ್ನಾಟಕ' ಪತ್ರಿಕೆಯ 'ಹಿಂದಿನ ಸಾಲು' ಅಂಕಣದಲ್ಲಿ ಪ್ರಕಟವಾಗಿರುವ 'ಪ್ರಕಾಶ್ ಬೆಳವಾಡಿ'ಯವರ ಬರಹ

ಕೊಡಗು ಆದಿವಾಸಿಗಳ ಬದುಕು ಬದಲಿಸಬಹುದೇ?

ಕೊಡಗು ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಅಂದಾಜು 1 ಲಕ್ಷದಷ್ಟು ಆದಿವಾಸಿಗಳಾದ ಎರವ, ಕಾಡುಕುರುಬ, ಬೆಟ್ಟ ಕುರುಬ, ಪಣಿಯ ಇನ್ನಿತರ, ಹಲವು ಪಂಗಡಗಳು ಬದುಕುತ್ತಿದ್ದು ಸ್ವಾತಂತ್ರ್ಯಕ್ಕಿಂತ ಮುಂಚಿತವಾಗಿ ಬಾಳಿ ಬದುಕುತ್ತಿರುವ ಆದಿವಾಸಿಗಳು ಸ್ವಾತಂತ್ರ್ಯ ಬಂದು 65 ವರ್ಷಗಳು ಕಳೆದರೂ ಸಹ ಬದುಕಿನ ಸ್ವಾತಂತ್ರ್ಯ ಸಿಗದೆ ಕನಿಷ್ಠ ಮೂಲಭೂತ ಸೌಕರ್ಯಗಳಾದ ವಾಸಿಸುವ ಮನೆ ಕುಡಿಯುವ ನೀರು, ನಡೆದಾಡಲು ದಾರಿ, ಆಸ್ಪತ್ರೆ ಸೌಕರ್ಯಗಳು, ರೇಷನ್ ಕಾರ್ಡ್ ವ್ಯವಸ್ಥೆ ದೊರೆಯದೇ ಅತ್ಯಂತ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ.



ಜಿಲ್ಲೆಯಲ್ಲಿ ಆದಿವಾಸಿಗಳ ಬದುಕು ಎರಡು ಮೂರು ರೀತಿಯದ್ದಾಗಿದೆ ಶೇ.40ರಷ್ಟು ಆದಿವಾಸಿ ಕುಟುಂಬಗಳು ಪ್ರಸ್ತುತ ತೋಟದ ಮನೆಯನ್ನು ಅವಲಂಬಿತರಾಗಿದ್ದು, ತೋಟದ ಮನೆಯಲ್ಲಿ ವಾಸವಿರುವ ಬಹುತೇಕ ಆದಿವಾಸಿಗಳಿಗೆ ಸರ್ಕಾರದ ಕನಿಷ್ಠ ಕೂಲಿಯಾಗಲಿ ಕಾರ್ಮಿಕ ಕಾನೂನು ಅಡಿಯಲ್ಲಿ ಸಿಗಬೇಕಾದ ಯಾವುದೇ ಸೌಲಭ್ಯಗಳನ್ನು ನೀಡದೆ ದುಡಿಸುತ್ತಿರುವುದು ಸಾಲದ ಸಮಸ್ಯೆಯಲ್ಲಿ ಬದುಕುತ್ತಿರುವುದು ಸಾಲವನ್ನು ತೀರಿಸಲು ಸಾಧ್ಯವಾಗದೆ ಬೇರೆ ಕಡೆಗಳಲ್ಲಿ ಹೆಚ್ಚಿನ ಸಂಬಳಕ್ಕೆ ದುಡಿಯಲು ಸಾಧ್ಯವಾಗದೆ ತೋಟ ಮಾಲೀಕರು ಸಾಲವಿರುವ ಕಾರ್ಮಿಕರನ್ನು ಬೇರೊಬ್ಬ ಮಾಲೀಕರಿಗೆ ವರ್ಗಾಯಿಸುವ ಪರಿಪಾಠವಿದೆ. ಈ ರೀತಿಯಲ್ಲಿ ಆದಿವಾಸಿ ಕಾರ್ಮಿಕರು ತೋಟದಿಂದ ತೋಟಕ್ಕೆ ಅಲೆಮಾರಿಗಳಾಗಿ ಜೀವಿಸುತ್ತಿರುವುದರಿಂದ ಶಾಶ್ವತ ವಿಳಾಸವಿಲ್ಲದೆ ಕನಿಷ್ಠ ರೇಶನ್ ಕಾರ್ಡ್ ಗುರುತಿನ ಚೀಟಿ ಜಾತಿ ಪ್ರಮಾಣ ಪತ್ರ ಸಿಗದೆ ಇರುವುದರಿಂದ ಸರ್ಕಾರಿ ಸೌಲಭ್ಯಗಳು ಇವರ ಕೈ ಸೇರದೆ ಇರುವುದು ಸಮಸ್ಯೆಗೆ ಕಾರಣವಾಗಿದೆ. ಮತ್ತೊಂದು ಕಡೆ ಜನತಾ ಮನೆಗಳಲ್ಲಿ ವಾಸ ಮಾಡುತ್ತಿರುವ ಆದಿವಾಸಿಗಳ ವಾಸದ ಮನೆಗಳು 40 ವರ್ಷಗಳ ಹಿಂದೆ ಮಣ್ಣಿನಿಂದ ಕಟ್ಟಿದ ಮನೆಗಳು ಅತ್ಯಂತ ದುರ್ಬಲವಾಗಿದ್ದು ಮನೆಗಳು ಕುಸಿದು ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಲೋನಿಗಳಲ್ಲಿ ವಿದ್ಯುತ್ ಸೌಲಭ್ಯಗಳು ಸಿಗದೆ ಕತ್ತಲೆಯಲ್ಲಿ ಬದುಕು ನಡೆಸಲಾಗುತ್ತದೆ. ಕಾಲೋನಿಗಳಲ್ಲಿ ವಾಸವಿರುವ ಆದಿವಾಸಿಗಳ ಆರೋಗ್ಯ ದುರ್ಬಲವಾಗಿದ್ದರೂ ಆರೋಗ್ಯ ಇಲಾಖೆಯಿಂದ ಯಾವುದೇ ಚಿಂತನೆ ನಡೆಸದಿರುವುದು ದುರಾದೃಷ್ಟವೆಂದು ಹೇಳಬಹುದು.

ಅರಣ್ಯದ ಅಂಚಿನಲ್ಲಿರುವ ಆದಿವಾಸಿಗಳ ಕುಟುಂಬಗಳು 2006ರಲ್ಲಿ ಅರಣ್ಯ ಮಸೂದೆ ಕಾಯ್ದೆಯಾಗಿ 5 ವರ್ಷಗಳು ಕಳೆದರೂ ಸಮರ್ಪಕವಾಗಿ ಭೂಮಿ ಹಂಚಿಕೆಯಾಗದೆ ಹಲವು ಕುಟುಂಬಗಳನ್ನು ಕೈಬಿಟ್ಟು ಹಕ್ಕು ಪತ್ರ ನೀಡದೆ ವಂಚಿಸಿರುವುದು. ಅರಣ್ಯವಾಸಿಗಳು ಗುಡಿಸಲು ಕಟ್ಟಿಕೊಂಡರೆ ಅರಣ್ಯ ಇಲಾಖೆ ಪೋಲಿಸ್ ಕೇಸ್‌ಗಳನ್ನು ಹಾಕುವುದು. ಅರಣ್ಯದ ಒಳಗೆ ರಸ್ತೆ, ದಾರಿದೀಪ ಕುಡಿಯುವ ನೀರಿಗೆ ಅಡಚಣೆ ಮಾಡುವುದರ ಮುಖಾಂತರ ಮೂಲ ಸೌಲಭ್ಯಗಳಿಂದ ಅವರನ್ನು ವಂಚಿಸಿರುವುದು

ಪುಟ 14 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಿಕ್ಕಬಳ್ಳಾಪುರ

ಗಸ್ಟ್ 25, 2011 ರಂದು ಚಿಕ್ಕಬಳ್ಳಾಪುರ ಲ್ಲಿ ಕೆಪಿಆರ್‌ಎಸ್, ಡಿವೈಎಫ್‌ಐ, ಎಐಎಡಬ್ಲ್ಯೂ ಯು, ಜೆಎಂಎಸ್ ಹಾಗೂ ಸಿಪಿಐ(ಎಂ) ಕ್ಷದಿಂದ ಭಾರಿ ರ್‍ಯಾಲಿ ಹಾಗೂ ಪ್ರತಿಭಟನೆ ಯನ್ನು ಹಮ್ಮಿಕೊಳ್ಳಲಾಗಿತ್ತು. ಚಿಕ್ಕಬಳ್ಳಾಪುರದ ವಾಸಿ ಮಂದಿರದಿಂದ ಹಿಡಿದು ಜಿಲ್ಲಾಧಿಕಾರಿ ಛೇರಿಯವರೆಗೂ 7 ಕಿ.ಮೀ ವರೆಗೂ ಾದಯಾತ್ರೆಯ ಮೂಲಕ ರ್‍ಯಾಲಿಯನ್ನು ಡೆಸಲಾಯಿತು. ರ್‍ಯಾಲಿಯಲ್ಲಿ ಸಾವಿರಾರು ವಸತಿ ಹಾಗೂ ನಿವೇಶನ ರಹಿತರು ಪಾಲ್ಗೊಂಡು ರಾಜ್ಯ ರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಂಬಾವುಟಗಳನ್ನು ಹಿಡಿದು ಸಾಗಿದರು. ಲಿಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಾಲ್ಗೊಂಡಿದ್ದರು, ಅದರಲ್ಲಿ ಮುಸ್ಲಿಂ ಹಿಳೆಯರಂತೂ ರಂಜಾನ್ ಪ್ರಯುಕ್ತ ುಪವಾಸವಿದ್ದೂ ರ್‍ಯಾಲಿಯಲ್ಲಿ 7 ಕಿ.ಮೀ. ಡೆದುಕೊಂಡು ಬಂದಿದ್ದು ವಿಶೇಷವಾಗಿತ್ತು. ುಮಾರು 60-70 ವರ್ಷದ ಮುದುಕ ುದುಕಿಯರು ನಡೆದುಕೊಂಡು ಬಂದಿದ್ದು ಶೇಷವಾಗಿತ್ತು. ಒಂದು ಕೈಯಲ್ಲಿ ಕೆಂಬಾವುಟ, ನ್ನೊಂದು ಕೈಯಲ್ಲಿ ಉರುಗೋಲು ಡಿದುಕೊಂಡು ರ್‍ಯಾಲಿಯಲ್ಲಿ ಉತ್ಸಾಹದಿಂದ ಾಗವಹಿಸಿದ್ದನ್ನು ನೋಡಿದರೆ ನಾವು ಎಂತಹ ೋರಾಟಕ್ಕೂ ಸಿದ್ಧ ಎಂದು ಎತ್ತಿ ೋರಿಸುವಂತಿತ್ತು. ಕೆಲವು ಂಗಸರು ಚಿಕ್ಕ ಚಿಕ್ಕ ಮಕ್ಕಳನ್ನು ತ್ತಿಕೊಂಡು ಉರಿಬಿಸಿಲಿನಲ್ಲಿ ಅಷ್ಟು ೂರ ನಡೆದುಕೊಂಡು ರ್‍ಯಾಲಿಯಲ್ಲಿ ಂದಿದ್ದರು. ಚಿಕ್ಕಬಳ್ಳಾಪುರದ ಾಗರೀಕರಿಗೆ ಈ ನಸ್ತೋಮವನ್ನು ನೋಡಿ ಚ್ಚರಿಗೊಂಡು ಕೆಂಪು ಪ್ರವಾಹವೇ ರಿದು ಹೋಗುತ್ತಿದೆ ಎಂಬಂತೆ ಾತಾಡಿಕೊಳ್ಳುತ್ತಿದ್ದರು.

ೋರಾಟ ಚರಿತ್ರೆಯ ನೆನಪು :

ಸ್ವಾಗತ ಭಾಷಣವನ್ನು ಮಾಡಿದ ಜಿಲ್ಲಾ ವೈಎಫ್‌ಐ ಕಾರ್ಯದರ್ಶಿ ಎಂ.ಪಿ. ುನಿವೆಂಕಟಪ್ಪ 30 ವರ್ಷಗಳ ಹಿಂದೆ ೋಲಾರ ಜಿಲ್ಲೆಯಾದ್ಯಂತ ನಿವೇಶನಕ್ಕಾಗಿ ಿಐ(ಎಂ) ಪಕ್ಷದಿಂದ ಹೋರಾಟ ಮಾಡಿ ದೇ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ುಂತಾದ ಕಡೆ ನಿವೇಶನಗಳನ್ನು ಪಡೆಯ ಾಗಿತ್ತು. ಈಗ ಮತ್ತೆ 30 ವರ್ಷಗಳ ನಂತರ ದೇ ಹೋರಾಟವನ್ನು ಇನ್ನಷ್ಟು ತೀವ್ರವಾಗಿ ಾಡುವ ಪರಿಸ್ಥಿತಿ ಬಂದಿದೆ. ಆದರೆ ಬಾಗೇಪಲ್ಲಿ ಾಲ್ಲೂಕಿನಲ್ಲಿ ಜಿ.ವಿ.ಶ್ರೀರಾಮರೆಡ್ಡಿರವರು ಾಸಕರಾಗಿದ್ದಾಗ ನಿವೇಶನಗಳನ್ನು ಹಂಚಿದ್ದು ಟ್ಟರೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ದುವರೆವಿಗೂ ಎಲ್ಲೂ ನಿವೇಶನಗಳನ್ನು ಂಚಿರುವ ನಿದರ್ಶನಗಳಿಲ್ಲ ಎಂದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಾತನಾಡಿದ ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಯವರು ಕಳೆದ ಫೆಬ್ರವರಿ ತಿಂಗಳಿನಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನಿವೇಶನ ಹಾಗೂ ವಸತಿ ರಹಿತರು ಆಯಾ ತಾಲ್ಲೂಕಿನ ಸಂಬಂಧಪಟ್ಟ ಗ್ರಾಮ ಪಂಚಾಯ್ತಿಗಳಲ್ಲಿ ಅರ್ಜಿಗಳನ್ನು ಹಾಕಿದರು. ನಂತರ ಏಪ್ರಿಲ್ 19ರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ತಾಲ್ಲೂಕು ಕಛೇರಿಯ ಎದುರು ಬೃಹತ್ ಪ್ರತಿಭಟನೆಯನ್ನು ನಡೆಸಿದ್ದಾರೆ. ಇದರಿಂದ ಆಯಾ ತಾಲ್ಲೂಕಿನ ಆಡಳಿತ ಒಂದು ತಿಂಗಳ ಕಾಲ ಕಾಲಾವಕಾಶ ಕೇಳಿದ್ದು, ಆದರೆ ಇದುವರೆವಿಗೂ ಯಾವುದೇ ಪ್ರಯೋಜನ ವಾಗಿಲ್ಲ. ಇನ್ನು ಸರ್ಕಾರಕ್ಕೆ ಅವರ ಮಂತ್ರಿಗಳನ್ನು ಹಾಗೂ ಸರ್ಕಾರವನ್ನು ರಕ್ಷಿಸಿಕೊಳ್ಳುವಲ್ಲೆ ಅವರು ಮಗ್ನರಾಗಿದ್ದಾರೆ. ಇನ್ನು ಬಡವರ ಕೂಗು ಕೇಳಲು ಅವರಿಗೆ ಸಮಯವೇ ಇಲ್ಲವಾಗಿದೆ.

ನಿವೇಶನ - ವಸತಿ ರಹಿತರ ಬೃಹತ್ ಪ್ರತಿಭಟನೆ

ಕೆ.ಪಿ.ಆರ್.ಎಸ್-ಡಿ.ವೈ. ಎಫ್.ಐ-ಎ.ಐ.ಎ.ಡಬ್ಲೂಯು-ಜೆ.ಎಂ.ಎಸ್- ಹಾಗೂ ಸಿ.ಪಿ.ಐ.(ಎಂ) ಹೋರಾಟ

ವರದಿ: **ಜಿ.ಮುಸ್ತಫಾ**, ಬಾಗೇಪಲ್ಲಿ

ಮುಖ್ಯಮಂತ್ರಿ ಮನೆಯ ಮುಂದೆ ಧರಣಿ ನಡೆಸಲಾಗುವುದು ಎಂದರು. ಬೆಳಗ್ಗೆಯಿಂದ ಕಚೇರಿಯಲ್ಲಿ ಇಲ್ಲದಿದ್ದ ಜಿಲ್ಲಾಧಿಕಾರಿಗಳು ಅಷ್ಟೊತ್ತಿಗೆ ಪ್ರತಿಭಟನಾಕಾರರ ಬಳಿ ಬಂದು ಜಿ.ವಿ.ಶ್ರೀರಾಮರೆಡ್ಡಿ ಹಾಗೂ 4 ಸಂಘಟನೆಗಳ ಪದಾಧಿಕಾರಿಗಳಿಂದ ಬೇಡಿಕೆಗಳ ಮನವಿ ಪತ್ರವನ್ನು ಪಡೆದುಕೊಂಡು ಮಾತನಾಡಿ ನಿಮ್ಮ ಬೇಡಿಕೆಗಳಲ್ಲಿ ಒಂದಾದ ಗ್ರಾಮ ಠಾಣಾ ವಿಚಾರದಲ್ಲಿ ಅದರ ಸಂಪೂರ್ಣ ಜವಾಬ್ದಾರಿ ಗ್ರಾಮಪಂಚಾಯ್ತಿಗಳದ್ದಾಗಿರುತ್ತದೆ. ಹಾಗಾಗಿ ಸಂಬಂಧಪಟ್ಟ ಗ್ರಾಮ ಪಂಚಾಯ್ತಿಗಳು ಎಲ್ಲಿ ಗ್ರಾಮ ಠಾಣ ಜಾಗವಿದೆಯೋ ಅಲ್ಲಿ ನಿವೇಶನ ಹಂಚಲಿಕ್ಕೆ ಆದೇಶ ನೀಡಲಾಗುವುದು. ನಂತರ ಗ್ರಾಮ ಠಾಣಾ ಹಾಗೂ ಸರ್ಕಾರಿ ಜಮೀನು

ಇವುಗಳನ್ನು ಕೊಡಲು ಬರುವುದಿಲ್ಲ. ಈ ಬಗ್ಗೆ ಸುಪ್ರೀಂಕೋರ್ಟ್ ನಿರ್ದೇಶನವಿದೆ. ಹಾಗಾಗಿ ಅವುಗಳನ್ನು ಹಂಚಲು ಆಗುವುದಿಲ್ಲ. ಅದು ಬಿಟ್ಟು ಖರಾಬು, ಗೋಮಾಳ ಇವುಗಳು ಊರ ಪಕ್ಕದಲ್ಲಿದ್ದರೆ ಉತ್ತಮ. ಅಂತಹವುಗಳನ್ನು ಖಂಡಿತ ಹಂಚಲಾಗುವುದು. ಇದಕ್ಕೆ ಜಿಲ್ಲಾಪಂಚಾಯ್ತಿ ಉಪಕಾರ್ಯದರ್ಶಿ ಎರಡು ತಿಂಗಳು ಕಾಲಾವಕಾಶ ಕೇಳಿದ್ದಾರೆ. ಇದ್ದನ್ನೆಲ್ಲಾ ಪರಿಶೀಲಿಸಲು ಎರಡು ತಿಂಗಳುಗಳು ಬೇಕಾಗುತ್ತದೆ. ಇದರ ಬಗ್ಗೆ ಇನ್ನು 15 ದಿನಗಳ ಒಳಗೆ ಸಭೆ ಕರೆದು ಚರ್ಚಿಸೋಣ ಇದಕ್ಕೆ ಸದ್ಯದಲ್ಲೆ ದಿನಾಂಕ ನಿಗದಿ ಮಾಡಿ ಸಭೆ ಕರೆಯುತ್ತೇನೆ ಎಂದು ಆಶ್ವಾಸನೆ ಕೊಟ್ಟರು. ನಂತರ 4 ಸಂಘಟನೆಗಳು ಸೇರಿ ತುರ್ತು ಸಭೆ ನಡೆಸಿ ಧರಣಿಯನ್ನು ಭರವಸೆ ಆಧಾರದಲ್ಲಿ ವಾಪಸ್ಸು ಪಡೆಯಲು ತೀರ್ಮಾನಿಸಿದವು. ಕೃಷಿ ಕೂಲಿ ಕಾರ್ಮಿಕರ ಸಂಘದ ಬಿಳ್ಳೂರು ನಾಗರಾಜ್ ಮಾತನಾಡಿ ನಮ್ಮ ನಿರಂತರ ಹೋರಾಟದ ಫಲದಿಂದಲೆ ಈ ದಿನ ಜಿಲ್ಲಾಧಿಕಾರಿಗಳು ನಮ್ಮ ಬೇಡಿಕೆಗಳನ್ನು ಈಡೇರಿಸುವ ಆಶ್ವಾಸನೆ ನೀಡಿದ್ದಾರೆ. ವಿಧಾನಸಭೆಯಲ್ಲಿ ನಮ್ಮ ಪರ ಧ್ವನಿಯೆತ್ತುವ ಶಾಸಕರು ಇಲ್ಲದಿರುವುದು ದುಃಖಕರ ಗತಿ ಎಂದರು. ಕೆ.ಪಿ.ಆರ್.ಎಸ್. ನ ಜಿಲ್ಲಾಕಾರ್ಯ ದರ್ಶಿ ಗೋಪಿನಾಥ ಮಾತನಾಡುತ್ತಾ 'ನಿವೇಶನ ಹಾಗೂ ವಸತಿ ಬಗ್ಗೆ ನಾವು ಮಾಡಿರುವ ಹೋರಾಟಕ್ಕೆ ಒಂದು ಹಂತದ ಜಯ ಸಿಕ್ಕಿದೆ. ಇದನ್ನು ನೋಡಿ ಸಹಿಸಲಾರದ ಕೆಲವು ಜನಪ್ರತಿನಿಧಿಗಳು ನಮ್ಮ ಹೋರಾಟದ ಬಗ್ಗೆ ವ್ಯಂಗ್ಯವಾಗಿ ಮಾತನಾಡುತ್ತಿದ್ದಾರೆ. ಹೋರಾಟದಿಂದ ಏನೂ ಪ್ರಯೋಜನವಿಲ್ಲ- ಅಧಿಕಾರವಿರಬೇಕು' ಎಂದು ಹೇಳುತ್ತಾರೆ. ಈ ದಿನ ಅವರುಗಳು ನೋಡಿ ಕಲಿಯಬೇಕು 'ಹೋರಾಟ ಮಾಡುವುದು ಸಾಧಿಸಿಕೊಳ್ಳುವುದಕ್ಕೆ ಅಂತ. ಸಿ.ಪಿ.ಐ.(ಎಂ) ಪಕ್ಷ ಇರುವುದು ದುಡಿಯುವ ಜನರ ಪರವಾಗಿ ಹೋರಾಟ ಮಾಡಿ ಹಕ್ಕುಗಳನ್ನು ಪಡೆಯಲು. ಆದರೆ ಅಧಿಕಾರ ಶಾಶ್ವತವಲ್ಲ' ಎಂದು ತಿಳಿಸಿದರು. ನಂತರ ಮಾತನಾಡಿದ ಜನವಾದಿ ಮಹಿಳಾ ಸಂಘದ



ಸರ್ಕಾರ ಬಡವರಿಗೆ ಭೂಮಿ ಹಂಚುವುದು ಬಿಟ್ಟು ರೈತರಿಂದ ಬಲವಂತವಾಗಿ ಕಿತ್ತುಕೊಳ್ಳುತ್ತಿದೆ. ಇದರ ಪರಿಣಾಮವೇ ಕಟ್ಟಾ ಸುಬ್ರಮಣ್ಯಂನಾಯ್ಡು ಹಾಗೂ ಅವರ ಮಗ ಜೈಲುಪಾಲಾಗಿರುವುದು. ಈ ಸರ್ಕಾರಕ್ಕೆ ನಾವು ಕೇಳುತ್ತಿರುವುದು ಗ್ರಾಮ ಠಾಣಾ ಸರ್ಕಾರಿ ಜಮೀನನ್ನು ಬಡವರಿಗೆ ನಿವೇಶನಗಳನ್ನಾಗಿ ಹಂಚಿ. ಅದು ಆಗಲಿಲ್ಲವೆಂದರೆ ಸರ್ಕಾರ ದಿಂದಲೇ ಜಮೀನು ಖರೀದಿಸಿ ಬಡವರಿಗೆ ನಿವೇಶನಗಳನ್ನು ಹಂಚಬೇಕು. ಇದಕ್ಕೆ ಸರ್ಕಾರದಲ್ಲಿ ಕಾನೂನು ಸಹ ರೂಪಿಸಲಾಗಿದೆ. ಅದರ ಪ್ರಕಾರ ಒಂದು ಎಕರೆಗೆ ಹಳ್ಳಿಗಳಲ್ಲಿ ಆದರೆ 3 ಲಕ್ಷ ಪಟ್ಟಣದಲ್ಲಾದರೆ 5 ಲಕ್ಷ ಕೊಟ್ಟು ಜಮೀನನ್ನು ಖರೀದಿಸಬಹುದು. ಆದರೆ ಇದು ಯಾವುದೂ ಸರ್ಕಾರ ಮಾಡುತ್ತಿಲ್ಲ. ಹಾಗಾಗಿ ನಾವು ಸುಮ್ಮನೇ ಹೋಗುವುದಿಲ್ಲ. ಯಾವುದೇ ಒಂದು ಖಚಿತ ತೀರ್ಮಾನವಾಗುವರೆಗೂ ಇಲ್ಲಿಂದ ಹೋಗಲು ಸಾಧ್ಯವಿಲ್ಲ. ಒಂದು ವೇಳೆ ನಮ್ಮ ಈ ಬೇಡಿಕೆಗಳು ಈಡೇರದಿದ್ದಲ್ಲಿ ಮುಂದಿನ ಹಂತದ ಹೋರಾಟವಾಗಿ ಬೆಂಗಳೂರಿನಲ್ಲಿ

ಇಲ್ಲದ ಕಡೆ ತಮ್ಮ ಜಮೀನು ಕೊಡಲು ಖಾಸಗಿ ವ್ಯಕ್ತಿಗಳು ಮುಂದೆ ಬಂದರೆ ಅದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಹಣ ಬಿಡುಗಡೆ ಮಾಡಿಕೊಡಲಾಗುವುದು. ಇದಕ್ಕೆ ಸಂಬಂಧಪಟ್ಟ ತಾಲ್ಲೂಕು ಅಧಿಕಾರಿಗಳ ಬಳಿ ಚರ್ಚಿಸಿ ಸಮಯ ನಿಗದಿಗೊಳಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಗುಂಡುತೋಪು ಸರ್ಕಾರಿ ಜಮೀನು

ಪುಟ 10 ಕ್ಕೆ

ಲೋಕಾಯುಕ್ತ ವರದಿ ಅಕ್ಟೋಬರ್ 31: ಬಳ್ಳಾರಿಯಲ್ಲಿ ರಾಜ್ಯ ಮಟ್ಟದ ರ್‍ಯಾಲಿ

ಅಕ್ರಮ ಗಣಿಗಾರಿಕೆ-ಸಾಗಾಣಿಕೆಗೆ ಸಂಭಂದಿಸಿದ ಕರ್ನಾಟಕ ಲೋಕಾಯುಕ್ತರ ವರದಿಯನ್ನು ಕೂಡಲೇ ಒಪ್ಪಿ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಇದೇ ಅಕ್ಟೋಬರ್ 31 ರಂದು ಬಳ್ಳಾರಿಯಲ್ಲಿ ರಾಜ್ಯ ಮಟ್ಟದ ಪ್ರತಿಭಟನಾ ಸಭೆ ಸಂಘಟಿಸಲು ಪ್ರಮುಖ ಎಡ ಪಕ್ಷಗಳಾದ ಸಿ.ಪಿ.ಐ(ಎಂ) ಮತ್ತು ಸಿ.ಪಿ.ಐ ನಿರ್ಧರಿಸಿವೆ.ಅಕ್ಟೋಬರ್ 27ಕ್ಕೆ ಲೋಕಾಯುಕ್ತರು ವರಧಿ ಸಲ್ಲಿಸಿ ಮೂರು ತಿಂಗಳಾಗಲಿದೆ ಎಂಬುದು ಗಮನಾರ್ಹ.

ಅಂದು ನಗರದಲ್ಲಿ ಬೃಹತ್ ರ್‍ಯಾಲಿ ಬಹಿರಂಗ ಸಭೆ ನಡೆಯಲಿವೆ .ಈ ಸಭೆಯಲ್ಲಿ ಅಖಿಲ ಭಾರತ ನಾಯಕರು ಪಾಲ್ಗೊಳ್ಳಲಿದ್ದಾರೆ. ಅಲ್ಲದೇ ಕೆಲವು ಪ್ರಮುಖ ಬುದ್ಧಿಜೀವಿಗಳು, ಪ್ರಗತಿಪರ ಜನಸಂಘಟನೆಗಳ ಮುಖಂಡರನ್ನು ಆಹ್ವಾನಿಸಲಾಗುವುದು.

ಅಸಮಾನತೆಯ ಬಗ್ಗೆ ಹಝಾರೆ ತಂಡ ಮೌನ

ಭ್ರಷ್ಟಾಚಾರ ಮೂಲ ಕಾರಣಗಳು ಡಿವೈಎಫ್ಐ ವಿಚಾರ ಸಂಕಿರಣ

ಭ್ರಷ್ಟಾಚಾರವನ್ನು ನಿಯಂತ್ರಿಸಲು ಜನ ಲೋಕಪಾಲ ಮಸೂದೆ ಜಾರಿಯಾಗ ಬೇಕೆಂದು ಆಗ್ರಹಿಸುತ್ತಿರುವ ಅಣ್ಣಾ ಹಝಾರೆ ತಂಡ, ಜನರ ನಡುವೆ ಇರುವ ಬೃಹದಾಕಾರದ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯ ಬಗ್ಗೆ ಮೌನ ವಹಿಸಿದೆ. ಆರ್ಥಿಕ, ಸಾಮಾಜಿಕ ಅಸಮಾನತೆಯೂ ಭ್ರಷ್ಟಾಚಾರದ ಒಂದು ಮುಖ; ಹಣದ ಕೊಡುಕೊಳ್ಳುವಿಕೆ ಮಾತ್ರ ಭ್ರಷ್ಟಾಚಾರ ಅಲ್ಲ. ಅಣ್ಣಾ ಹೋರಾಟಕ್ಕೆ ದೊಡ್ಡ ಬೆಂಬಲ ಸಿಕ್ಕಿದ್ದು ಕಾರ್ಪರೇಟ್ ಜಗತ್ತಿನಿಂದ. ಈ ದೇಶದ ಹಸಿವು, ಜಾತ್ಯಾತೀತತೆ, ಸಾಂಕ್ರಾಮಿಕ ರೋಗ, ಬಡತನದ ಬಗ್ಗೆ ಮಾತನಾಡದೆ ಇರುವವರ ಹೋರಾಟವನ್ನು ಏಕೆ ಬೆಂಬಲಿಸಬೇಕು ಎಂಬುದಾಗಿ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್.ದ್ವಾರಕಾನಾಥ್ ಪ್ರಶ್ನಿಸಿದರು. ಅವರು ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿಯ ಸಹಮತ ಮತ್ತು ಸಾಮಾಜಿಕ ನ್ಯಾಯವೇದಿಕೆ ಇವರೊಡನೆ ಸಂಯುಕ್ತವಾಗಿ ಸಪ್ಟೆಂಬರ್ 10 ರಂದು ಮಂಗಳೂರಿನಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿದರು.



ವಾ.ಉ.

ಚಿಂತಕ ಪ್ರೊ.ಕೆ.ಫಣಿರಾಜ್ ಮಾತನಾಡಿ, ವಿಶಾಖ ಪಟ್ಟಣದಲ್ಲಿ ನೈಸರ್ಗಿಕ ಅನಿಲಗಳ ಮಾರಾಟದಲ್ಲಿ ಅಂಬಾನಿ ನಡೆಸಿದ ಹಗರಣಕ್ಕೆ ಹೋಲಿಸಿದರೆ 2 ಜಿ ಸ್ಪೆಕ್ಟ್ರಮ್ ಕೂಡಾ ಸಣ್ಣ ಹಗರಣ. ಅಂಬಾನಿ ಹಗರಣ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಭ್ರಷ್ಟಾಚಾರ ಜಾಗೃತಿ ಬಗ್ಗೆ ಎಲ್.ಕೆ.ಅದ್ವಾನಿಯವರೂ ರಥ ಯಾತ್ರೆ ಹೊರಡುವವರಿದ್ದಾರೆ. ಈ ಹಿಂದೆ ಜೆ.ಪಿ.ಚಳುವಳಿ ಮತ್ತು ಮಂಡಲ ಆಯೋಗದ ಶಿಫಾರಸುಗಳನ್ನು ನಿಸ್ತೇಜಗೊಳಿಸಲು ಹುಟ್ಟಿ ಹಾಕಲಾದ ಮೀಸಲಾತಿ ವಿರೋಧಿ ಭಾವೋದ್ರೇಕವನ್ನು ಬಳಸಿಕೊಂಡು ಎಲ್.ಕೆ.ಅದ್ವಾನಿ ಯವರು ಹೊರಡಿಸಿದ ರಥಯಾತ್ರೆ ಎಂಥ ಕ್ಷೋಭೆಯನ್ನು ಉಂಟು ಮಾಡಿದೆ ಎಂಬ ಅನುಭವ ನೆಮ್ಮೆಲ್ಲರಿಗಿದೆ. ಭ್ರಷ್ಟಾಚಾರ ಜಾಗೃತಿ ರಥಯಾತ್ರೆಯೂ ಅಂಥದ್ದೇ ದುರುದ್ದೇಶದಿಂದ ಕೂಡಿದೆ ಎಂದು ಅವರು ಎಚ್ಚರಿಕೆ ನೀಡಿದರು.

ಕಾರ್ಮಿಕ ಮುಖಂಡ ಸುನಿಲ್ ಕುಮಾರ್ ಬಜಾಲ್, ಸಾಮಾಜಿಕ ಕಾರ್ಯಕರ್ತೆ ಪ್ರೊ.ರೀಟಾ ನೊರೊನ್ಹಾ,



ಪ್ರಾಧ್ಯಾಪಕರಾದ ಪ್ರೊ.ಜಾನ್‌ಫೆರ್ನಾಂಡೀಸ್, ಡಾ.ನಿಕೇತನ, ಪ್ರೊ.ಐವಾನ್ ಡಿ'ಸಿಲ್ವಾ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಪ್ರೊ.ಉದಯ ಕುಮಾರ್ ಇರ್ವತ್ತೂರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಬಾಂಬು ಸ್ಫೋಟಕ್ಕೆ ಕುಂದಾಪುರ ಡಿವೈಎಫ್ಐನಿಂದ ಪ್ರತಿಭಟನೆ:

ಹೊಸದಿಲ್ಲಿಯ ಹೈಕೋರ್ಟಿನ ಆವರಣದಲ್ಲಿ ನಡೆದ ಬಾಂಬು ಸ್ಫೋಟವನ್ನು ಖಂಡಿಸಿ ಡಿವೈಎಫ್ಐ ಕುಂದಾಪುರ ತಾಲೂಕು ಸಮಿತಿ ಆಶ್ರಯದಲ್ಲಿ

ಸಪ್ಟೆಂಬರ್ 7 ರಂದು ಪ್ರತಿಭಟನಾ ಸಭೆ ನಡೆಸಲಾಯಿತು. ಈ ಸಂದರ್ಭ ಮೋಂಬತ್ತಿ ಬೆಳಗಿದ ಪ್ರತಿಭಟನಾಕಾರರು ದೇಶದ ಏಕತೆ ಸಮಗ್ರತೆಯನ್ನು ಕಾಪಾಡುವ ಘೋಷಣೆ ಕೂಗಿದರು.

ಪ್ರತಿಭಟನೆಯಲ್ಲಿ ಡಿವೈಎಫ್ಐ ತಾಲೂಕು ಅಧ್ಯಕ್ಷ ಸುಬ್ರಹ್ಮಣ್ಯ ಪಡು ಕೋಣೆ, ಅಶ್ರಫ್ ಕುಮಾರ್, ರಾಜೇಶ್ ವಿ. ಸುರೇಶ್ ಕಲ್ಲಾಗರ, ಅಶೋಕ್ ಹಟ್ಟಿ ಯಂಗಡಿ, ಗಣೇಶ್ ಕಲ್ಲಾಗರ, ಉದಯ ಟೈಲರ್, ಸಂತೋಷ್ ಹೆಮ್ಮಾಡಿ, ಕಾರ್ಮಿಕ ಮುಖಂಡ ಎಚ್.ನರ ಸಿಂಹ, ಸಮುದಾಯ ಸಂಘಟನೆಯ ಕೆ.ಎಂ.ಬಾಲಕೃಷ್ಣ, ಪ್ರಭಾಕರ ನೇರಳಕಟ್ಟೆ ಮುಂತಾದವರು ಭಾಗವಹಿಸಿದ್ದರು.

ಉಡುಪಿಯಲ್ಲಿ ನಿವೇಶನ ರಹಿತರಿಂದ ಪ್ರತಿಭಟನೆ

ಕಳೆದ ಆಗಸ್ಟ್ 25,26,27 ರಂದು ಉಡುಪಿ ಜಿಲ್ಲೆಯ ನಿವೇಶನ ರಹಿತರು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಕೆಲವೇ ದಿನಗಳಲ್ಲಿ ಮತ್ತೊಮ್ಮೆ ಪ್ರತಿಭಟನೆ ಉಡುಪಿಯಲ್ಲಿ ನಡೆದಿದೆ.

ಸಪ್ಟೆಂಬರ್ 7 ರಂದು ನಡೆದ ಪ್ರತಿಭಟನೆಗೆ ತಾಲೂಕು ಸಂಘವು ನೇತೃತ್ವ ನೀಡಿತ್ತು. 45 ಗ್ರಾಮಗಳ ನೂರಾರು ನಿವೇಶನ ರಹಿತರು ನಗರದ ಬೈಲೂರು ಕಾಂಪ್ಲೆಕ್ಸ್‌ನಿಂದ ಉಡುಪಿ ತಾಲೂಕು ಕಚೇರಿ ವರೆಗೆ ಮೆರವಣಿಗೆ ನಡೆಸಿ, ತಾಲೂಕು ಕಚೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ನಿವೇಶನ ರಹಿತರ 1560 ಅರ್ಜಿಗಳನ್ನು ತಹಶೀಲ್ದಾರರಿಗೆ ಸಲ್ಲಿಸಲಾಯಿತು.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ತಾಲೂಕು ಸಮಿತಿ ಸಂಚಾಲಕ ದೋಗು ಸುವರ್ಣ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಮಾತನಾಡಿದರು. ವಿವಿಧ ಸಂಘಟನೆಗಳ ಮುಖಂಡರಾದ ಕೆ.ಶಂಕರ್, ಪಿ.ವಿಶ್ವನಾಥ ರೈ, ವಿ.ಎಸ್.ಆಚಾರ್ಯ, ಎಸ್.ವಿಠಲ ಪೂಜಾರಿ, ರಮೇಶ್ ಮೆಂಡನ್, ಕವಿರಾಜ್, ಸಾಯಿರಾ ಸುಗಂಧಿ ಮೊದ ಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜೆಡಿ(ಎಸ್)ಗೆ–ಸಿಪಿಐ(ಎಂ) ಬೆಂಬಲ

ಕೊಪ್ಪಳ ವಿಧಾನಸಭಾ ಕ್ಷೇತ್ರದ ಮರು ಚುನಾವಣೆಯಲ್ಲಿ, ಪ್ರಜಾಪ್ರಭುತ್ವ ವಿರೋಧಿ ಭ್ರಷ್ಟ ಕೋಮುವಾದಿ, ಬಿಜೆಪಿ ಹಾಗೂ ಭ್ರಷ್ಟ ಜನದ್ರೋಹಿ ಕಾಂಗ್ರೆಸ್ ಪಕ್ಷಗಳನ್ನು ಸೋಲಿಸಬೇಕೆಂದು ಅದಕ್ಕಾಗಿ ಜಾತ್ಯಾತೀತ ಜನತಾದಳಕ್ಕೆ ಮತ ನೀಡಬೇಕೆಂದೂ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಜನತೆಗೆ ಕರೆ ನೀಡಿದೆ.

ಇದೇ ಸೆಪ್ಟೆಂಬರ್ 14,15ರಂದು ಬೆಂಗಳೂರಿನಲ್ಲಿ ಜರುಗಿದ ರಾಜ್ಯ ಸಮಿತಿಯ ಸಭೆಯು ಇಂದಿನ ರಾಜಕೀಯ ಸಂದರ್ಭದ ಬಗ್ಗೆ ವಿವರವಾಗಿ ಚರ್ಚಿಸಿ ಈ ನಿರ್ಧಾರ ಪ್ರಕಟಿಸಿತು. ಅದನ್ನು ಅನುಸರಿಸಿ ಚುನಾವಣೆಯಲ್ಲಿ ಪ್ರಚಾರಾಂದೋಲನ ನಡೆಸಲು ನಿರ್ಧರಿಸಲಾಗಿದೆ.

ಅಕ್ಟೋಬರ್ 2ಕ್ಕೆ ಪ್ರತಿಭಟನಾ ಧರಣಿ: ಪೂರ್ವಭಾವಿಯಾಗಿ ಸಹಿ ಸಂಗ್ರಹ, ಜಿಲ್ಲೆಗಳಲ್ಲಿ ಸಮಾವೇಶ–ಸಭೆಗಳು

ದುಂಡು ಮೇಜಿನ ಸಭೆಯಲ್ಲಿ ನಿರ್ಧರಿಸಿದಂತೆ ಲೋಕಾಯುಕ್ತ ವರದಿಯನ್ನು ಸರ್ಕಾರ ಒಪ್ಪಿಕೊಂಡು, ಮುಂದಿನ ಕ್ರಮ ವಹಿಸಲು ಆಗ್ರಹಿಸಿ, ರಾಜ್ಯದಾದ್ಯಂತ ಆಂದೋಲನವನ್ನು ನಡೆಸಲು ತೀರ್ಮಾನಿಸಲಾಗಿದೆ.

ಮಹಾತ್ಮಗಾಂಧಿ ಜಯಂತಿಯಾದ ಅಕ್ಟೋಬರ್ 2 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ಬಳಿ ವಿಶಾಲವಾದ ಪ್ರತಿಭಟನಾ ಧರಣಿ. ಅದೇ ದಿನ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಧರಣಿ–ಸಭೆಗಳು

ಇದಕ್ಕೆ ಪೂರ್ವಭಾವಿಯಾಗಿ :

ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ಸಭೆಗಳು, ಸಮಾವೇಶಗಳ ಮೂಲಕ ಜಾಗೃತಿ–ಪ್ರಚಾರಾಂದೋಲನ ನಡೆಸುವುದು. ಇದರಲ್ಲಿ ಖ್ಯಾತ ಚಿಂತಕರು, ಜನ ಸಂಘಟನೆಗಳ ಮುಖಂಡರು ಭಾಗವಹಿಸುವರು.

ಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯಕ್ಕೆ ನಾಡಿನ ಗಣ್ಯರು, ವಿವಿಧ ಸಂಘಟನೆಗಳಿಂದ ಸಹಿ ಸಂಗ್ರಹಿಸುವುದು. ಅಕ್ಟೋಬರ್ 2 ರಂದು ರಾಜ್ಯಪಾಲರು, ಲೋಕಾಯುಕ್ತರು ಹಾಗೂ ಸರ್ಕಾರಕ್ಕೆ ನೀಡುವುದು.

ಮಂಗಳೂರಿನಲ್ಲಿ ಪಿಂಚಣಿದಾರರ ಸಂಘದಿಂದ ಕಾ.ಮೇರಿ ದೇವಾಸಿಯಾ ಸಂಸ್ಮರಣೆ

60ರ ದಶಕದಲ್ಲಿ ರಾಜ್ಯದ ಸರಕಾರೀ ನೌಕರರನ್ನು ಸಂಘಟಿಸಿ, ರಾಜ್ಯ ಸರ್ಕಾರೀ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಅಧ್ಯಕ್ಷೆಯಾಗಿದ್ದು, ನೌಕರರ ಸವಲತ್ತುಗಳಿಗಾಗಿ ಮುಷ್ಕರವೇ ಮೊದಲಾದ ಹೋರಾಟಗಳಿಗೆ ನೇತೃತ್ವ ನೀಡಿ, ಅದಕ್ಕಾಗಿಯೇ ಸೇವೆಯಿಂದ ವಜಾಗೊಂಡರೂ ಬಿಡದೆ ನ್ಯಾಯಾಲಯ ದಲ್ಲೂ ಹೋರಾಡಿದ ಕಾ.ಮೇರಿ ದೇವಾಸಿಯಾ ಅವರ 18ನೇ ಸಂಸ್ಮರಣ ದಿನವನ್ನು ಮಂಗಳೂರಿನಲ್ಲಿ ನಿವೃತ್ತ ಸರ್ಕಾರಿ ನೌಕರರ ಸಂಘವು ಸಪ್ಟೆಂಬರ್ 13 ರಂದು ಆಚರಿಸಿತು.

ನಿವೃತ್ತ ಸರ್ಕಾರಿ ನೌಕರ ಹಾಗೂ ಪ್ರಸ್ತುತ ಮಂಗಳೂರು ಸಮುದಾಯದ ಕಾರ್ಯದರ್ಶಿಯಾಗಿರುವ ವಾಸುದೇವ ಉಚ್ಚಿಲ ಅವರು ಮೇರಿ ದೇವಾಸಿಯಾ ಅವರು ನೌಕರರ ಹೋರಾಟಕ್ಕೆ ಸಮರಶೀಲ ಗುಣವನ್ನು ಒದಗಿಸಿದ ಬಗೆಯನ್ನು ವಿವರಿಸಿದರು. ಇನ್ನೊಬ್ಬ ನಿವೃತ್ತ ಸರ್ಕಾರಿ ನೌಕರರ ಸಂಘದ ಕಾರ್ಯಕರ್ತರೂ ಪ್ರಸ್ತುತ ನ್ಯಾಯವಾದಿಯೂ ಆಗಿರುವ ಆನಂದ ಉಳ್ಳಾಲ್ ಅವರು, ಹಿಂದಿನ ಸಮರಶೀಲತೆಯನ್ನು ನೌಕರ ಸಂಘವು ಕಳೆದು ಕೊಂಡುದರಿಂದ, ಹಳೆಯ ಪಿಂಚಣಿ ಕ್ರಮಕ್ಕೆ ಬದಲಾಗಿ ಭದ್ರತೆ ಒದಗಿಸದ ಹೊಸ ಪಿಂಚಣಿ ನೀತಿಯನ್ನು ಸರ್ಕಾರಿ ನೌಕರರು ಸ್ವೀಕರಿಸಬೇಕಾಯಿತು ಎಂದು ವಿಷಾದಿಸಿದರು. ಸಂಘದ ಅಧ್ಯಕ್ಷ ಡಾ.ಸೂರ್ಯನಾರಾಯಣ ಮಯ್ಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಜೆ.ಯಾದವ ಸ್ವಾಗತಿಸಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಶ್ರೀಯುತ ಅಡ್ವಾಣಿ ಮತ್ತೊಂದು ರಥಯಾತ್ರೆ ನಡೆಸುತ್ತಾರಂತೆ– ಈ ಬಾರಿಯದ್ದು ಭ್ರಷ್ಟಾಚಾರದ ವಿರುದ್ಧವಂತೆ. ಕರ್ನಾಟಕದಲ್ಲಿ, ಛತ್ತಿಸಗಡದಲ್ಲಿ ಮತ್ತು ಉತ್ತರಾಖಂಡದಲ್ಲಿ ಬಿಜೆಪಿ ಸರಕಾರಗಳು ಭ್ರಷ್ಟಾಚಾರದಲ್ಲಿ ಗಳಿಸಿದ 'ಸಾಧನೆ'ಗಳ ಜತೆಗೇ, ಈ ಹೊಸ ಯಾತ್ರೆ ವಾಜಪೇಯಿ ಸರಕಾರವನ್ನು ನಡುಗಿಸಿದ ಹತ್ತು-ಹಲವು ಹಗರಣಗಳ ಸರಣಿಯನ್ನು, ಅಷ್ಟೇ ಅಲ್ಲ, ದೊಡ್ಡ ಪ್ರಮಾಣದಲ್ಲಿ ದೇಶದಲ್ಲಿನ ಕಪ್ಪು ಹಣವನ್ನು ಬಿಳಿಮಾಡುವ ಮಾರಿಶಸ್ ಮಾರ್ಗವನ್ನು ತೆರೆದುಕೊಟ್ಟದ್ದು ಕೂಡ ಅದೇ ಸರಕಾರ ಎಂಬುದನ್ನು ದೇಶ ಮತ್ತೆ ನೆನಪಿಸಿಕೊಳ್ಳುವಂತಹ ಹೊಸದೊಂದು ಪ್ರಹಸನವಾಗಲಿದೆ. ಆದರೆ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಮುಸುಕಿನಲ್ಲಿ ಕೋಮುವಾದೀ ಧ್ರುವೀಕರಣ ತೀಕ್ಷ್ಣಗೊಳ್ಳುವ ಪರಿಸ್ಥಿತಿಯನ್ನು ದೇಶ ಮತ್ತೊಮ್ಮೆ ಕಾಣಲು ಬಿಡಬೇಕೇ?

ಭ್ರಷ್ಟಾಚಾರದ ವಿರುದ್ಧ ಹೋರಾಟದ ಮುಸುಕಿನಲ್ಲಿ ಕೋಮುವಾದೀ ಧ್ರುವೀಕರಣ

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಸೆಪ್ಟೆಂಬರ್ 15,2011ರ ಸಂಪಾದಕೀಯ


ಶ್ರೀಯುತ ಎಲ್.ಕೆ.ಅಡ್ವಾಣಿ ಮತ್ತೊಮ್ಮೆ ರಥಯಾತ್ರೆ ನಡೆಸುವ ಆಶಯವನ್ನು ಸಾರಿದ್ದಾರೆ. ಇದು 1992ರಲ್ಲಿ ಕೋಮುವಾದಿ ರಕ್ತಪಾತದ ಹೆಜ್ಜೆ ಗುರುತುಗಳನ್ನು ದೇಶಾದ್ಯಂತ ಮೂಡಿಸಿ ಸಾಗಿದ ಅವರ ಕುಖ್ಯಾತ ಯಾತ್ರೆಯ ನಂತರದ ಆರನೇ ಯಾತ್ರೆಯಾಗಲಿದೆ. ಯಾವುದೇ ಕೆಲಸವನ್ನು ಪುನರಾವರ್ತಿಸಿದಂತೆ ಅದರ ಪ್ರತಿಫಲಗಳು ಕಡಿಮೆಯಗುತ್ತಾ ಹೋಗುತ್ತವೆ ಎಂಬುದೊಂದು ನಿಯಮವಿದೆ–ಅಡ್ವಾಣಿಯವರ ವಿಷಯದಲ್ಲಿ ಅದು ಇನ್ನಷ್ಟು ತೀವ್ರವಾಗಿ ಕೆಲಸ ಮಾಡಿದೆ. ಆದರೂ ಧೃತಿಗೆಡದೆ ಅವರು ಇನ್ನೊಂದು ಯಾತ್ರೆಯನ್ನು ಪ್ರಕಟಿಸಿದ್ದಾರೆ.

ಸಪ್ಟೆಂಬರ್ 1992ರಲ್ಲಿ ಅವರು 'ಮಂದಿರ್ ವಹೀಂ ಬನಾಯೇಂಗೆ'(ಮಂದಿರ ಅಲ್ಲೇ ಕಟ್ಟುತ್ತೇವೆ) ಎಂಬ ಸಮರಘೋಷದೊಂದಿಗೆ ಆರಂಭಿಸಿದ ಯಾತ್ರೆ, ಅಂತಿಮವಾಗಿ, ಬಾಬ್ರಿ ಮಸೀದಿಯ ಧ್ವಂಸಕ್ಕೆ ಕಾರಣವಾಗಿ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರದ ಇತಿಹಾಸದಲ್ಲಿ ಅತ್ಯಂತ ಕರ್‍ರಗಿನ ಮಸಿಯನ್ನು ಬಳಿದು ಹೋಯಿತು. ಆ ರಥಯಾತ್ರೆ ಸಾಗಿದ ದಾರಿಯೆಲ್ಲಾ ರಕ್ತಸಿಕ್ತ. ಎರಡು ತಿಂಗಳೊಳಗೆ, ಡಿಸೆಂಬರ್ ವೇಳೆಗೆ ಕೋಮುಘರ್ಷಣೆಗಳಲ್ಲಿ ಸುಮಾರು ಒಂದು ಸಾವಿರ ಜನತೆಯ ಸಾವಿನ ಸುದ್ದಿಗಳು ಮಾಧ್ಯಮಗಳಲ್ಲಿ ವರದಿಯಾದವು. ಇನ್ನೂ ಸಾವಿರಾರು ಮಂದಿ ಗಂಭೀರವಾಗಿ ಗಾಯಗೊಂಡು ತಮ್ಮ ಮನೆ–ಮಾರುಗಳಿಂದ ಹೊರಗಟ್ಟಲ್ಪಟ್ಟರು. ಭಾರತದ ವಿಭಜನೆಯ ಸಮಯದ ಭೀಕರತೆಯನ್ನು ಕಣ್ಣಾರೆ ಕಂಡ, ಅದನ್ನು ತನ್ನ ಕೃತಿ 'ತಮಸ್'ನಲ್ಲಿ ಸೆರೆ ಹಿಡಿದ ಭಾರತದ ಹೆಸರಾಂತ ಸಾಹಿತಿ ಭೀಷಮ್ ಸಾಹ್ನಿಯವರು ಆಗಲೂ ಕಾಣದ ರೀತಿಯ ಭಯ ತನ್ನನ್ನು ಅಡ್ವಾಣಿಯವರ ರಥಯಾತ್ರೆಯ ಅವಧಿಯಲ್ಲಿ ಕಾಡುತ್ತಿತ್ತು ಎಂದಿದ್ದರು.

'2011ರ ಭಾರತ' ಅಂದಿನ '1992ರ ಭಾರತ'ಕ್ಕಿಂತ ಸಂಪೂರ್ಣ ಭಿನ್ನವಾಗಿದೆ ಎಂದು ವಾದಿಸುವವರು ಇತ್ತೀಚೆಗೆ ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಯಲ್ಲಿ ಸಿಪಿಐ(ಎಂ) ಮಂಡಿಸಿದ ಟಿಪ್ಪಣಿಯಲ್ಲಿ ಹೇಳಿದ ಸಂಗತಿಗಳನ್ನು ಗಮನಿಸುವುದೊಳ್ಳೆಯದು. ದೇಶದಲ್ಲಿನ ಕೋಮುವಾದಿ ಸನ್ನಿವೇಶ ಗಮನಾರ್ಹವಾಗಿ ಉತ್ತಮಗೊಂಡಿದೆ ಎಂಬ ಪ್ರಚಾರದ ರಾಗಮಾಲಿಕೆಯ ನಿಜಸ್ವರೂಪವನ್ನು ಅದು ಬಯಲಿಗೆಳೆದಿದೆ. ಗೃಹ ಮಂತ್ರಾಲಯವೇ ನೀಡಿರುವ ಅಂಕಿ–ಅಂಶಗಳನ್ನು ಉದ್ಧರಿಸುತ್ತಾ "2009ರಲ್ಲಿ 791 ಕೋಮುವಾದಿ ಘಟನೆಗಳು ಸಂಭವಿಸಿವೆ, ಇವುಗಳಲ್ಲಿ 119 ಸಾವುಗಳು ಆಗಿವೆ ಮತ್ತು 2342 ಮಂದಿ ಗಾಯಗೊಂಡಿದ್ದಾರೆ. 2010ರಲ್ಲಿ, 658 ಘಟನೆಗಳಲ್ಲಿ 111 ಸಾವುಗಳು ಮತ್ತು 1971 ಮಂದಿಗೆ ಗಾಯಗಳು ಆಗಿವೆ. ಇವು ಗೃಹ ಮಂತ್ರಾಲಯ ನೀಡಿರುವ ಅಂಕಿ–ಅಂಶಗಳು. 2005ರಿಂದ 2009ರ ನಡುವೆ ಕೋಮುವಾದಿ ಹಿಂಸಾಚಾರದಲ್ಲಿ ಪ್ರತಿವರ್ಷ ಸರಾಸರಿ 130 ಮಂದಿ ಸತ್ತಿದ್ದಾರೆ, 2200 ಮಂದಿ ಗಾಯಗೊಂಡಿದ್ದಾರೆ." ಎಂದು ಅದರಲ್ಲಿ ಹೇಳಲಾಗಿದೆ.

ಪಟ್ಟ ಸಿಗಲೇ ಇಲ್ಲ!

ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಿ, 1992ರ ಯಾತ್ರೆಯ ನಂತರ ಪಡೆದಂತೆ ಅದರಿಂದ ರಾಜಕೀಯ ಫಲಗಳನ್ನು ಗಳಿಸಬಹುದು ಎಂಬುದು ಶ್ರೀಯುತ ಅಡ್ವಾಣಿ ಮತ್ತು ಆರೆಸ್ಸೆಸ್/ಬಿಜೆಪಿಯ ನಿರೀಕ್ಷೆ. ಈ ಕುಖ್ಯಾತ ಯಾತ್ರೆ ಬಾಬ್ರಿ ಮಸೀದಿಯ ಧ್ವಂಸಕ್ಕೆ ಕಾರಣವಾಯಿತಷ್ಟೇ ಅಲ್ಲ, ನಮ್ಮ ಜಾತ್ಯಾತೀತ ರಾಜಕೀಯ ವ್ಯವಸ್ಥೆಯನ್ನು ಆಳವಾಗಿ ವಿಷಮಯಗೊಳಿಸಿತು. ಆದರೆ ಅದು ಬಿಜೆಪಿಯನ್ನು ಅಧಿಕಾರಪೀಠಕ್ಕೇರಿಸಿತು; 1996ರಲ್ಲಿ ಒಂದು 13 ದಿನಗಳ ಸರಕಾರವನ್ನು, 1998ರಲ್ಲಿ ಒಂದು 13 ತಿಂಗಳ ಸರಕಾರವನ್ನು ಅದು ರಚಿಸಲು ಸಾಧ್ಯವಾಯಿತು. 1999ರಲ್ಲಿ ಅದು ರಚಿಸಿದ ಸರಕಾರವಷ್ಟೇ ಪೂರ್ಣಾವಧಿ ಪೂರೈಸುವುದು ಸಾಧ್ಯವಾಯಿತು. ಆದರೆ, ಈ ಎಲ್ಲ ಮೂರು ಸಂದರ್ಭಗಳಲ್ಲೂ ಶ್ರೀಯುತ ಅಡ್ವಾಣಿಯವರಿಗೆ ಪ್ರಧಾನಮಂತ್ರಿ ಪಟ್ಟ ಸಿಗದೆ ಕಿರಿಕಿರಿಯುಂಟಾಗಿತ್ತು. ಬಿಜೆಪಿಯ ಮಿತ್ರಪಕ್ಷಗಳಿಗೆ ಶ್ರೀಯುತ ಅಡ್ವಾಣಿಯವರ- ಕರ್ಕಶ ಕೋಮುವಾದಕ್ಕೆ ಪ್ರತಿಯಾಗಿ ಶ್ರೀಯುತ ವಾಜಪೇಯಿಯವರೇ ಆಗಬಹುದು ಎಂದನಿಸಿತ್ತು.



ಕೃಪೆ: ದಿ ಹಿಂದೂ

ಪಾಪ, ಶ್ರೀಯುತ ಅಡ್ವಾಣಿಯವರಿಗೆ ಅಂತಹುದೇ ಸ್ಥಿತಿ ಮತ್ತೊಮ್ಮೆ ಬರುವಂತಿದೆ. 2014 ರ ಚುನಾವಣೆಗಳಲ್ಲಿ ಬಿಜೆಪಿ ಒಂದು 'ಸಾಮೂಹಿಕ ನಾಯಕತ್ವ'ದ ಆಧಾರದಲ್ಲಿ ಸ್ಪರ್ಧಿಸಲಿದೆ ಎಂದು ಅದರ ಅಧ್ಯಕ್ಷರು ಪ್ರಕಟಿಸಿದ ಬೆನ್ನ ಹಿಂದೆಯೇ ರಥಯಾತ್ರೆಯ ಪ್ರಕಟಣೆಯೂ ಬಂದಿತು. ಈ ಯಾತ್ರೆಯ ಪ್ರಕಟಣೆಯ ಮೂಲಕ ಶ್ರೀಯುತ ಅಡ್ವಾಣಿ ಈ ಅಧ್ಯಕ್ಷೀಯ ನಿರ್ದೇಶನವನ್ನು ಕಸದ ಬುಟ್ಟಿಗೆ ಹಾಕಿರುವಂತೆ ಕಾಣುತ್ತದೆ. ಪ್ರಧಾನಮಂತ್ರಿಗಳ ಹುದ್ದೆಯ ಸ್ಪರ್ಧೆಯಲ್ಲಿ ತಾನೇಕೆ ಹಿಂದುಳಿಯಬೇಕು ಎಂದು, ಅದಕ್ಕಾಗಿ ದೈಹಿಕವಾಗಿ ಅರ್ಹರಾಗಿರಲು, ಸ್ವತಃ ಬಿಜೆಪಿ ಅಧ್ಯಕ್ಷರು, ಮಾಧ್ಯಮಗಳ ವರದಿಗಳ ಪ್ರಕಾರ, 'ಬೇರಿಯಾಟ್ರಿಕ್ ಸರ್ಜರಿ' ಅಂದರೆ ಬೊಜ್ಜು ಕರಗಿಸುವ ಶಸ್ತ್ರಚಿಕಿತ್ಸೆ ಮಾಡಿಸಿ ಕೊಂಡಿದ್ದಾರೆ. ವಿಪರೀತ ಬೊಜ್ಜು ಇರುವ ವ್ಯಕ್ತಿಗಳಿಗೆ ಮಾತ್ರವೇ ಶರೀರದ ತೂಕ ತಗ್ಗಿಸಲು ಈ ಶಸ್ತ್ರಚಿಕಿತ್ಸೆಯ ಸಲಹೆ ನೀಡಲಾಗುತ್ತದೆ. ಇಂತಹ ಸಂದರ್ಭ ಏರ್ಪಟ್ಟರೆ, ಸಂಸತ್ತಿನಲ್ಲಿ ಎರಡೂ ಸದನಗಳ ಪ್ರತಿಪಕ್ಷ ನಾಯಕರುಗಳು ಗಂಭೀರ ಸ್ಪರ್ಧಿಗಳು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಹುಚ್ಚು ಸ್ಪರ್ಧೆ

ಈ ನಡುವೆ ಗುಜರಾತದ ಮುಖ್ಯಮಂತ್ರಿ ನರೇಂದ್ರ ಮೋದಿ, ಸುಪ್ರಿಂ ಕೋರ್ಟಿನ ನಿರ್ಣಯವನ್ನು ಉದ್ದೇಶಪೂರ್ವಕವಾಗಿಯೇ ತಪ್ಪಾಗಿ ಅರ್ಥೈಸಿ, ಇದು 2002ರ ಗುಜರಾತಿನ ಕೋಮುವಾದಿ ಹತ್ಯಾಕಾಂಡದಲ್ಲಿ ತಾನು ಸಂಪೂರ್ಣ ದೋಷಮುಕ್ತ ಎಂದೇ ನ್ಯಾಯಾಲಯ ಪ್ರಮಾಣಪತ್ರ ನೀಡಿದೆ ಎಂಬಂತೆ ವ್ಯಾಖ್ಯಾನಿಸುತ್ತಿದ್ದಾರೆ. ಆದರೆ, ತದ್ವಿರುದ್ಧವಾಗಿ, ಸುಪ್ರಿಂಕೋರ್ಟ್ ವಿಚಾರಣಾ ನ್ಯಾಯಾಲಯಕ್ಕೆ ಕೋರ್ಟು ನೇಮಿಸಿದ ಸಲಹೆಗಾರರ(ಅಮೈಸ ಕ್ಯುಅರಿ) ವರದಿ ಮತ್ತು ವಿಶೇಷ ತನಿಖಾ ದಳದ ವರದಿ ಸೇರಿದಂತೆ ಎಲ್ಲ ಸಾಮಗ್ರಿಗಳನ್ನು ಒಪ್ಪಿಸಿ, ಅವನ್ನು ಸಾಕ್ಷ್ಯಗಳಾಗಿ ಪರಿಗಣಿಸಿ ಗುಲ್ಬರ್ಗಾ ಸೊಸೈಟಿಯ ವಿಚಾರಣೆಯನ್ನು ತ್ವರಿತವಾಗಿ ನಡೆಸಬೇಕು ಎಂದು ನಿರ್ದೇಶನ ನೀಡಿದೆ. ಹೀಗೆ ಈ ಸಂಗತಿ ಶ್ರೀಯುತ ಮೋದಿಯ ವಿರುದ್ಧ ಎಫ್‌ಐಆರ್ ಹಂತವನ್ನು ದಾಟಿ ಹೋಗಿದೆ. ಈಗಿರುವ ಪ್ರಶ್ನೆ ಈ ಆರೋಪಗಳ ಒಂದು ವಿಚಾರಣೆಯಷ್ಟೇ. ಆದರೆ, ಶ್ರೀಯುತ ಮೋದಿಯವರು ತನ್ನ ಈ ವ್ಯಾಖ್ಯಾನದ ಆಧಾರದಲ್ಲಿ ಅಣ್ಣಾ ಹಝಾರೆಯವರಂತೆ ರಾಷ್ಟ್ರೀಯ ಗಮನವನ್ನು ಸೆಳೆಯುವ ನಿರೀಕ್ಷೆಯಿಂದ ಮೂರು ದಿನಗಳ ಉಪವಾಸ ಮುಷ್ಕರ ನಡೆಸುವುದಾಗಿ ಪ್ರಕಟಿಸಿದ್ದಾರೆ. ಇದು ರಾಷ್ಟ್ರೀಯ ರಾಜಕಾರಣಕ್ಕೆ ಪ್ರವೇಶ ಬಯಸುವ

ಪುಟ 12 ಕ್ಕೆ

ಪೆಟ್ರೋಲ್ ಬೆಲೆ ಏರಿಕೆ ಕೂಡಲೇ ಹಿಂಪಡೆಯಲು ಆಗ್ರಹ

ಪೆಟ್ರೋಲ್ ಬೆಲೆಯನ್ನು ಲೀಟರಿಗೆ ರೂ.3.14 ಪೈಸೆ ಮತ್ತೆ ಹೆಚ್ಚಳ ಮಾಡಿದ ಕೇಂದ್ರ ಸರ್ಕಾರದ ಕ್ರಮವನ್ನು ಸಿಪಿಐ(ಎಂ) ಖಂಡಿಸಿದೆ.

ದೇಶದಲ್ಲಿ ಹಣದುಬ್ಬರ ಎರಡಂಕಿ ಇರುವಾಗ ಮೂರನೇಯ ಬಾರಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರು ತತ್ತರಿಸುತ್ತಿರುವಾಗ ಈ ವರ್ಷದಲ್ಲೇ ಮೂರು ಬಾರಿ ಹೆಚ್ಚಳ ಮಾಡಲಾಗಿದೆ. ಈ ಬಗೆಗಿನ ನಿರ್ಲಕ್ಷ್ಯತನದ ಕ್ರಮಗಳು ಹಣದುಬ್ಬರ ಹಾಗೂ ಬೆಲೆ ಏರಿಕೆಯ ಮೇಲೆ ಸಾಗರೋಪಾದಿಯಲ್ಲಿ ಪರಿಣಾಮ ಬೀರಲಿವೆ.

ಬೆಲೆ ಏರಿಕೆ ಮತ್ತು ಹಣದುಬ್ಬರಕ್ಕೆ ಮೂಲ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವೇ ಹೊಣೆಯೆಂಬುದನ್ನು ದೇಶದ ಜನತೆ ಕಾಣುತ್ತಿದ್ದಾರೆ. ಪೆಟ್ರೋಲ್ ದರ ಹೆಚ್ಚಳವನ್ನು ಈ ಕೂಡಲೇ ಹಿಂತೆಗೆದುಕೊಳ್ಳಬೇಕು ಮತ್ತು ಬೆಲೆಏರಿಕೆಯ ಮೇಲೆ ಆಡಳಿತಾತ್ಮಕ ನಿರ್ಬಂಧಗಳನ್ನು ಹಾಕಬೇಕೆಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗ್ರಹಿಸಿದೆ.

ಇದು ದೇಶದ ನಿಸರ್ಗ ಸಂಪತ್ತಿನ ನಿರ್ಲಜ್ಜ, ನಿರ್ದಯ ಲೂಟಿ
ಇದನ್ನು ಸಹಿಸಲಾಗದು, ಇದನ್ನು ಸಹಿಸಬಾರದು.

ತೈಲ ಸಂಶೋಧನಾ ಕ್ಷೇತ್ರದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ಬಾರಿ ಅಕ್ರಮ-ವಂಚನೆ

ಬೇಕಿದೆ ರಿಲಯನ್ಸ್ ಕಂಪನಿ ವಿರುದ್ಧ ಕ್ರಮ ಮತ್ತು ಪೆಟ್ರೋಲಿಯಂ ನೀತಿ ಪರಾಮರ್ಶೆ

ಜಯ

ಕೇಂದ್ರ ಸರ್ಕಾರವು ಭೂಗರ್ಭದಲ್ಲಿ ಶೋಧನೆ ಮೂಲಕ ತೈಲ ಮತ್ತು ಅನಿಲವನ್ನು ಆವಿಷ್ಕಾರ ಮಾಡಿ ಹೊರತೆಗೆಯಲು 'ಹೊಸ ಶೋಧನಾ ಪರವಾನಗಿ ನೀತಿಯನ್ನು' ಜಾರಿಗೆ ತಂದು ಖಾಸಗಿ ಕಂಪನಿಗಳಿಗೆ ಅವಕಾಶ ನೀಡಿದೆ. ಆಂಧ್ರ ಪ್ರದೇಶದ ಕೃಷ್ಣಾ ಗೋದಾವರಿ ಎಂಬ ತೈಲನೆಲೆಯ ಶೋಧನಾ ಕಾರ್ಯದ ಗುತ್ತಿಗೆ ರಿಲಯನ್ಸ್ ಕಂಪನಿಗೆ ದೊರೆತಿತ್ತು. ಈ ಕಂಪನಿ ಜೊತೆ ಉತ್ಪಾದನಾ ಹಂಚಿಕೆ ಒಪ್ಪಂದ ಮಾಡಿಕೊಂಡ ಸರ್ಕಾರ ಅದರ ಪ್ರಕಾರ ಶೋಧನಾ ಪ್ರದೇಶದಲ್ಲಿ ತೈಲ ಆವಿಷ್ಕಾರ ಮಾಡಿದ ಪ್ರದೇಶವನ್ನು ಈ ಕಂಪನಿಯು ತನ್ನ ಬಳಿ ಇಟ್ಟುಕೊಂಡು ಅದರಲ್ಲಿ ತೈಲ ತೆಗೆಯಲು (ಇತರೆ ಕಂಪನಿಗಳಿಗೆ ಉಪಗುತ್ತಿಗೆ ನೀಡಿಯೂ) ತೈಲ ತೆಗೆಯುವ ಕಾರ್ಯ ಮಾಡಬೇಕಾಗಿತ್ತು. ಕಂಪನಿಯು ತೈಲವನ್ನು ಆವಿಷ್ಕಾರ ಮಾಡಿ ಭೂಗರ್ಭದಿಂದ ಹೊರತೆಗೆಯಲು ತಗಲುವ ಅಭಿವೃದ್ಧಿ ವೆಚ್ಚದ ಆಧಾರದ ಮೇಲೆ ಕಚ್ಚಾ ತೈಲದ ಬೆಲೆಯನ್ನು ಕೇಂದ್ರ ಸರ್ಕಾರ ನಿಗದಿಪಡಿಸುತ್ತದೆ. ಆದರೆ ತನ್ನ ಬಂಡವಾಳ ಅಥವಾ ಅಭಿವೃದ್ಧಿ ವೆಚ್ಚವನ್ನು ಹೆಚ್ಚಾಗಿ ತೋರಿಸುತ್ತಾ ಸರ್ಕಾರಕ್ಕೇ ಲಾಭವಿಲ್ಲದಂತೆ ಮಾಡಿ ಇಡೀ ಪೆಟ್ರೋಲಿಯಮ್ ಲಾಭಾಂಶವನ್ನು ತನ್ನ ಜೇಬಿಗೆ ಇಳಿಸುತ್ತಿರುವ ರಿಲಯನ್ಸ್ ಕಂಪನಿ ಮತ್ತು ಇದಕ್ಕೆ ಅವಕಾಶ ಕಲ್ಪಿಸಿರುವ ಕೇಂದ್ರ ಸರ್ಕಾರದ ಗೋಸುಂಬೆ ನೀತಿಯ ದುರಾಚಾರಗಳನ್ನು ಸಿಎಜಿ ವರದಿ ಬಯಲಿಗೆಳೆದಿದೆ.

ಯುಪಿಎ ಸರ್ಕಾರದ ಆಳ್ವಿಕೆಯಲ್ಲಿ ಸರ್ಕಾರದ ನೀತಿ ನಿರೂಪಕರು ಮತ್ತು ದೊಡ್ಡ ಬಂಡವಾಳಗಾರರ ನಡುವಿನ ಅಕ್ರಮಗಳು ಮತ್ತಷ್ಟು ಬಲಗೊಂಡಿರುವುದನ್ನು ಸಮುದ್ರ ತೀರ & ಸಾಗರೋತ್ತರ ತೈಲ ಮತ್ತು ಅನಿಲ ಸಂಪತ್ತಿನ ಹೈಡ್ರೋಕಾರ್ಬನ್ ಉತ್ಪಾದನಾ ಹಂಚಿಕೆ ಒಪ್ಪಂದದ ಕುರಿತಾಗಿ ಸಿಎಜಿ (ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್) ವರದಿಯು ಬಹಿರಂಗಗೊಳಿಸಿದೆ. ರಿಲಯನ್ಸ್ ಕಂಪನಿಯು ನಡೆಸುತ್ತಿರುವ ಕೆಜಿ-ಡಿ6 ಭೂಗರ್ಭ ಜಲ ಬ್ಲಾಕ್ ನ ಲೆಕ್ಕಪರಿಶೋಧನೆಯು ಕೆಳಕಂಡ ದುರ್ವ್ಯವಹಾರಗಳಿಂದ ಸರ್ಕಾರಕ್ಕೆ ಉಂಟಾಗಿರುವ ಗಣನೀಯ ನಷ್ಟಗಳನ್ನು ಬಯಲಿಗೆಳೆದಿದೆ.

- ಅತಿ ಹೆಚ್ಚು ಪೆಟ್ರೋಲಿಯಂ ಲಾಭಾಂಶವನ್ನು ಪಡೆಯಲು ರಿಲಯನ್ಸ್ ಕಂಪನಿಯು ಬಂಡವಾಳ ವೆಚ್ಚವನ್ನು ಲೆಕ್ಕದಲ್ಲಿ ಹೆಚ್ಚಾಗಿ ತೋರಿಸಿದೆ.
- ಸ್ಪರ್ಧಾತ್ಮಕ ಟೆಂಡರ್ ಇಲ್ಲದೆ ರಿಲಯನ್ಸ್ ಕಂಪನಿಯು ಉಪ ಗುತ್ತಿಗೆಗಳನ್ನು ಇತರೆ ಖಾಸಗಿ ಕಂಪನಿಗಳಿಗೆ ನೀಡಿದ್ದರಿಂದ ವೆಚ್ಚ ಹೆಚ್ಚಳಗೊಂಡಂತಾಯಿತು.
- ಉತ್ಪಾದನಾ ಹಂಚಿಕೆ ಒಪ್ಪಂದವನ್ನು ಉಲ್ಲಂಘಿಸಿ, 2009 ರ ನಂತರ ರಿಲಯನ್ಸ್ ಕಂಪನಿಯು ಶೇ. 5ರಷ್ಟು ಏರಿಯಾ ಬದಲು ಇಡೀ 7645 ಚದುರ ಕಿ.ಮೀ ಶೋಧನಾ ಏರಿಯಾವನ್ನು ತನ್ನ ಸುಪರ್ದಿಯಲ್ಲಿ ಇಟ್ಟುಕೊಂಡಿದೆ.

ಉತ್ಪಾದನಾ ಸಾಮರ್ಥ್ಯ ಹೆಚ್ಚಳಗೊಳ್ಳದಿದ್ದರೂ ಮೊದಲ ಹಂತದಲ್ಲಿಯೇ ಈ ತೈಲ ಬ್ಲಾಕ್‌ನ ಬಂಡವಾಳ ವೆಚ್ಚವನ್ನು ಕಂಪನಿಯು ರೂ. 10,800 ಕೋಟಿಯಿಂದ ರೂ. 24,750 ಕೋಟಿಗೆ ಅಂದರೆ ಶೇ. 117 ಏರಿಸಿಕೊಂಡಿದೆಯೆಂದು ಸಿಎಜಿ ಸ್ಪಷ್ಟವಾಗಿ ವರದಿಯಲ್ಲಿ ತಿಳಿಸಿದೆ.

ರಿಲಯನ್ಸ್ ಕಂಪನಿಯು ದೊಡ್ಡ ಖರೀದಿ ಗುತ್ತಿಗೆಗಳನ್ನು "ಒಂದೇ ಫೈನಾನ್ಸಿಯಲ್ ಅರ್ಜಿ



ಪಡೆದು, ವ್ಯಾಪ್ತಿ/ಪ್ರಮಾಣ/ನಮೂನೆಗಳನ್ನು ಪ್ರಧಾನವಾಗಿ ಪರಿಷ್ಕರಿಸಿರುವುದರಿಂದ, ಆರ್ಥಿಕ ಬಿಡ್ ತೆರೆದ ನಂತರ ಸರಬರಾಜು ಪ್ರಮಾಣದ ಆದೇಶದಲ್ಲಿ ಗಣನೀಯ ಏರುಪೇರು ಮಾಡಿರುವುದರಿಂದ ಭರಿಸಿದ ವೆಚ್ಚ ಹಿಂಪಡೆಯುವ ಮತ್ತು ಭಾರತ ಸರ್ಕಾರ ಹೂಡಿರುವ ಹಣಕಾಸಿನ ಮೇಲೆ ಕೆಟ್ಟ ಪರಿಣಾಮ ಬೀರಿದೆ" ಎಂದೂ ಸಿಎಜಿ ವರದಿ ತಿಳಿಸಿದೆ. ಒಂದೇ ಕಂಪನಿಯಿಂದ ಪಡೆದಿದ್ದ ಫೈನಾನ್ಸಿಯಲ್ ಅರ್ಜಿಯ ಪ್ರಕರಣವೊಂದರಲ್ಲಿ ಗುತ್ತಿಗೆ ಕೆಲಸವೊಂದಕ್ಕೆ ಮೂಲ ಅಂದಾಜು ವೆಚ್ಚ ರೂ. 1350 ಕೋಟಿ ಗಳಿಗೆ ವಿರುದ್ಧವಾಗಿ ರಿಲಯನ್ಸ್ ಕಂಪನಿಯು ರೂ. 4,960 ಕೋಟಿ ಗುತ್ತಿಗೆಯನ್ನು ಅಕೆರ್ ಗುಂಪಿನ ಕಂಪನಿಗೆ 10 ವರ್ಷಗಳ ಕಾಲ ಲೀಸ್ ಆಧಾರದಲ್ಲಿ ನೀಡಿದೆ. ರಿಲಯನ್ಸ್ ಕಂಪನಿಯು 10 ಏಕ ಫೈನಾನ್ಸಿಯಲ್ ಅರ್ಜಿಗಳಲ್ಲಿ ಅಕೆರ್ ಗುಂಪಿಗೆ ಅಂತಹ 8 ಗುತ್ತಿಗೆ ಕೆಲಸಗಳನ್ನು ನೀಡಿದ್ದು, ತನ್ನ ಬಂಡವಾಳ ವೆಚ್ಚವನ್ನು ಹೆಚ್ಚಳಗೊಳಿಸಲು ಅದು ಇಂತಹ ಒಳ-ಒಪ್ಪಂದ ಗಳನ್ನು ಮಾಡಿಕೊಂಡಿರುವುದು ಎದ್ದು ಕಾಣುತ್ತದೆ.

ಸಿಎಜಿಯು ಗಮನಿಸಿರುವ ಮತ್ತೊಂದು ಪ್ರಮುಖ ಅಂಶವೆಂದರೆ ಹೈಡ್ರೋಕಾರ್ಬನ್ಸ್ ಪ್ರಧಾನ ನಿರ್ದೇಶಕರು ಮತ್ತು ಪೆಟ್ರೋಲಿಯಂ ಸಚಿವಾಲಯ ಗಳೊಂದಿಗೆ ಅಕ್ರಮ ನಡೆಸಿ ರಿಲಯನ್ಸ್ ಕಂಪನಿಯು ಶೋಧನಾ ಏರಿಯಾವನ್ನೆಲ್ಲಾ ಆವಿಷ್ಕಾರ ಏರಿಯಾ ಎಂದು ಪರಿಗಣಿಸಿ ಕಂಪನಿಯು ಇಟ್ಟುಕೊಳ್ಳಲು ಬಿಟ್ಟಿರುವುದು. ಉತ್ಪಾದನಾ ಹಂಚಿಕೆ ಒಪ್ಪಂದದ ಪ್ರಕಾರ, ರಿಲಯನ್ಸ್ ಕಂಪನಿಯು ಮೊದಲ ಹಂತದಲ್ಲಿ ಶೋಧನಾ ಏರಿಯಾದ ಶೇ. 25ರಷ್ಟು ಪ್ರದೇಶವನ್ನು ಬಿಡಬೇಕಾಗಿತ್ತು, ಎರಡನೇ ಹಂತದಲ್ಲಿ ಶೇ. 50ರಷ್ಟು ಮತ್ತು ಮೂರನೇ ಹಂತದಲ್ಲಿ ತಾನು ತೈಲ ಬಾವಿ ಮುಚ್ಚದಿರುವ ಅಥವಾ ತೈಲ ಬಾವಿ ಅಭಿವೃದ್ಧಿಪಡಿಸದಿರುವ ಎಲ್ಲ ಪ್ರದೇಶಗಳನ್ನು ಸರ್ಕಾರಕ್ಕೆ ವಾಪಸು ಬಿಡಬೇಕಾಗಿತ್ತು. ಇದಕ್ಕೆ ಬದಲಾಗಿ, ಒಪ್ಪಂದವನ್ನು ಉಲ್ಲಂಘಿಸಿ ಈ ಯಾವುದೇ ಏರಿಯಾಗಳನ್ನು ರಿಲಯನ್ಸ್ ಬಿಟ್ಟುಕೊಡದೆ ಕೆಜಿ ಡಿ6 ಬ್ಲಾಕ್‌ನ ಇಡೀ 7645 ಚದುರ ಕಿ.ಮೀ ಶೋಧನಾ ಪ್ರದೇಶದ ಶೇ. 100 ರಷ್ಟನ್ನು ತಾನೇ ಇಟ್ಟುಕೊಳ್ಳಲು ಅವಕಾಶ ನೀಡಲಾಗಿದೆ. ಹೀಗೆ ಖಾಸಗಿ ಕಂಪನಿಗಳು ಶೋಧನಾ ಏರಿಯಾವನ್ನು ಇಟ್ಟುಕೊಳ್ಳಲು ಬಿಟ್ಟುಕೊಟ್ಟರೆ, ಸರ್ಕಾರದ ಹೊಸ ಶೋಧನಾ ಪರವಾನಗಿ ನೀತಿಯ ಉದ್ದೇಶಗಳಾದ ಭಾರತದ ಹೈಡ್ರೋಕಾರ್ಬನ್ ಸಂಪನ್ಮೂಲಗಳನ್ನು ಕಾಲ ನಿಗದಿಯೊಳಗೆ ಮತ್ತು ತ್ವರಿತವಾಗಿ ಅಭಿವೃದ್ಧಿಪಡಿಸುವ ಕಾರ್ಯಗಳಿಗೆ ಎಳ್ಳುನೀರು ಬಿಟ್ಟಂತೆಯೇ ಸರಿ.

ರಾಜಧನಗಳು ಹೆಚ್ಚಳಗೊಂಡಿರುವುದು ಉತ್ಪಾದನೆಯಲ್ಲಿನ ಹೆಚ್ಚಳವಾಗಿದೆಯೆಂದು ತಿಳಿಸುವಾಗಲೇ ಪೆಟ್ರೋಲಿಯಮ್ ಲಾಭಾಂಶವು 2009-10ರಲ್ಲಿ ರೂ. 5926 ಕೋಟಿಯಿಂದ 2010-11ರಲ್ಲಿ ರೂ. 3,610 ಕೋಟಿಗೆ ಇಳಿದಿರುವುದನ್ನು ಸಿಎಜಿ ವರದಿ ತೋರಿಸಿದೆ. ಇದು ಉತ್ಪಾದನಾ ಹಂಚಿಕೆ ಒಪ್ಪಂದಗಳನ್ನು ನಿರ್ವಹಿಸುವಾಗ ಎಲ್ಲವೂ ಸರಿಯಾಗಿ ನಡೆಯುತ್ತಿಲ್ಲವೆಂಬುದನ್ನು ತೋರಿಸುತ್ತಾ ಇದರ ಸಂಪೂರ್ಣ ಮಾಪನ ಮತ್ತು ಮಾರ್ಪಾಟಿಗೆ ಕರೆ ನೀಡಿದೆ. ಪನ್ನಾ ಮುಕ್ತ ತೈಲಪ್ರದೇಶ ಮತ್ತು ಕೈರ್ನ್ ಎನರ್ಜಿ ಕಂಪನಿಯ ಹೊಂದಿರುವ ತೈಲಪ್ರದೇಶಕ್ಕೆ ಸಂಬಂಧಿಸಿದಂತೆಯೂ ಇಂಥದೇ ಕರ್ಮಕಾಂಡಗಳು ಕಂಡುಬರುತ್ತಿದ್ದು, ಇದು ಇಡೀ ಹೊಸ ಶೋಧನಾ ಪರವಾನಗಿ ನೀತಿ ಮತ್ತು ಅದನ್ನು ಅನುಷ್ಠಾನಗೊಳಿಸುತ್ತಿರುವ ಪರಿಯನ್ನೇ ಪ್ರಶ್ನಿಸುವಂತೆ ಮಾಡಿದೆ.

ಸಿಎಜಿ ವರದಿಯ ಆಧಾರದಲ್ಲಿ ಕೆಳಕಂಡ ತತ್‌ಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಪಕ್ಷ ಆಗ್ರಹಿಸಿದೆ.

- ಉತ್ಪಾದನಾ ಹಂಚಿಕೆ ಒಪ್ಪಂದವನ್ನು ಸಂಪೂರ್ಣ ಉಲ್ಲಂಘಿಸಿ ರಿಲಯನ್ಸ್ ಕಂಪನಿಯು ಇಟ್ಟುಕೊಂಡಿರುವ ಶೇ. 95ರಷ್ಟು ಶೋಧನಾ ಏರಿಯಾವನ್ನು ವಾಪಸು ಪಡೆಯಬೇಕು.
- ಗುತ್ತಿಗೆ ಕೆಲಸಗಳನ್ನು ಒಳ-ಒಪ್ಪಂದದ ಮೂಲಕ ಗುತ್ತಿಗೆ ಬೆಲೆ ಏರಿಕೆ ಮಾಡಿ ಇಡೀ ಪೆಟ್ರೋಲಿಯಂ ಲಾಭಾಂಶವನ್ನು ದರೋಡೆ ಮಾಡುತ್ತಿರುವ ರಿಲಯನ್ಸ್ ಕಂಪನಿಗೆ ದಂಡ ವಿಧಿಸುವುದು.
- ಮಾಜಿ ಹೈಡ್ರೋಕಾರ್ಬನ್ಸ್ ಪ್ರಧಾನ ನಿರ್ದೇಶಕರು ಮತ್ತು ಇತರೆ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಬೇಕು.
- ಪೆಟ್ರೋಲಿಯಮ್ ಸಚಿವಾಲಯದ ಪಾತ್ರದ ಬಗ್ಗೆ ತನಿಖೆ ನಡೆಸಬೇಕು.
- ಅಂತಹ ದುರ್ಬಳಕೆಗಳನ್ನು ನಿಯಂತ್ರಿಸಲು ಹೈಡ್ರೋಕಾರ್ಬನ್ಸ್ ಹಂಚಿಕೆ ಒಪ್ಪಂದಗಳಿಗೆ ಪ್ರಮುಖ ತಿದ್ದುಪಡಿ ತರಬೇಕು.
- ಹೊಸ ಶೋಧನಾ ಪರವಾನಗಿ ನೀತಿಯನ್ನು ಪರಾಮರ್ಶೆಗೆ ಒಳಪಡಿಸಬೇಕು.

ದೇಶದ ಐಕ್ಯತೆ, ಸಮಗ್ರತೆಗೆ, ಜನ ಸಮುದಾಯಗಳ ನೆಮ್ಮದಿಯುತ ಬದುಕಿಗೆ ಮಾರಕವಾದ ಕೋಮುವಾದದ ತೀವ್ರತೆ ಕಮ್ಮಿಯಾಗಿದೆ ಎಂದು ಯಾರು ಭಾವಿಸಬಾರದು. ಅದು ಇಂದಿಗೂ ಗಂಭೀರ ಅಪಾಯ ಎಂದಿದ್ದಾರೆ ಪ್ರಕಾಶ್ ಕಾರಟ್. ಸೆಪ್ಟೆಂಬರ್ 10ರಂದು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಸಮಗ್ರತೆ ಮಂಡಳಿ ಸಭೆಯಲ್ಲಿ ಸಿ.ಪಿ.ಐ. (ಎಂ) ಪ್ರಧಾನ ಕಾರ್ಯದರ್ಶಿ ಕಾರಟ್ ಮಂಡಿಸಿದ ಅಭಿಪ್ರಾಯಗಳು.

ಕೋಮುಹಿಂಸೆ ತಡೆ ಮಸೂದೆ : ಏನಾಗಬೇಕಿದೆ?

ಅನು: ವಿಶ್ವ ಕುಂದಾಪುರ

ರಾಷ್ಟ್ರೀಯ ಸಮಗ್ರತೆ ಮಂಡಳಿ ಸಭೆ 2008 ಅಕ್ಟೋಬರ್‌ನಲ್ಲಿ ನಡೆದಿದ್ದು ಸುಮಾರು ಮೋರು ವರ್ಷಗಳ ನಂತರ ಸಮಾವೇಶಗೊಂಡಿದೆ. ರಾಷ್ಟ್ರೀಯ ಸಮಗ್ರತೆ ಮಂಡಳಿ (ಎನ್.ಐ.ಸಿ.)ಯು ರಾಷ್ಟ್ರೀಯ ಸಮಗ್ರತೆ ಮತ್ತು ಕೋಮುವಾದದ ಸಮಸ್ಯೆಯನ್ನು ನಿರ್ವಹಿಸುವಲ್ಲಿ ಪರಿಣಾಮಕಾರಿ ಸಂಸ್ಥೆಯಾಗಿ ಉಳಿದಿಲ್ಲ ಎನ್ನುವುದನ್ನು ಆರಂಭದಲ್ಲೇ ವಿಷಾದದಿಂದ ಹೇಳಬೇಕಾಗಿದೆ.

ಕೋಮುವಾದಕ್ಕೆ ಸಂಬಂಧಿಸಿದ ವಿಚಾರಗಳು ಮತ್ತು ಕೋಮು ಘರ್ಷಣೆಗಳನ್ನು ಮಟ್ಟಹಾಕುವ ಕ್ರಮಗಳನ್ನು ಮತ್ತೆ ನಾವಿಲ್ಲಿ ಚರ್ಚಿಸಲಿದ್ದೇವೆ. ಅಲ್ಪಸಂಖ್ಯಾತರ ವಿರುದ್ಧದ ತಾರತಮ್ಯಗಳು, ನಾಗರಿಕ ಅಶಾಂತಿಯ ನಿರ್ವಹಣೆ ಮತ್ತು ಧರ್ಮ ಹಾಗೂ ಜಾತಿ ಆಧಾರದಲ್ಲಿ ಯುವಜನತೆಯನ್ನು ವಿಚಾರಪೂರ್ಣ ಗೊಳಿಸುವುದು ಅಜೆಂಡಾದಲ್ಲಿರುವ ಇತರ ವಿಷಯಗಳಾಗಿವೆ.

2. ಕೋಮುವಾದವು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಆಯಾಮಗಳನ್ನು ಹೊಂದಿದೆ.ಇಲ್ಲಿರುವ ಯಾರೇ ಆದರೂ ಕೋಮುವಾದವು ನಿವಾರಣೆಯಾಗಿದೆ ಎಂದಾಗಲೀ ಅಥವಾ ಅದು ಗಣನೀಯವಾಗಿ ಕಡಿಮೆಯಾಗಿದೆ ಎಂದಾಗಲೀ ವಾದಿಸುತ್ತಾರೆ ಎಂದು ನಾನು ಭಾವಿಸುವುದಿಲ್ಲ. ಘಟಿಸುತ್ತಿರುವ ಕೋಮು ಸಂಘರ್ಷದ ಪ್ರಕರಣಗಳೇ ಅನಾರೋಗ್ಯದ ಸೂಚಕವಾಗಿದೆ. 2009ರಲ್ಲಿ 791 ಕೋಮು ಘರ್ಷಣೆಗಳು ನಡೆದಿದ್ದು ಅವುಗಳಲ್ಲಿ 119 ಜನರು ಪ್ರಾಣ ಕಳೆದುಕೊಂಡಿದ್ದಾರೆ ಹಾಗೂ 2,342 ಜನರು ಗಾಯಗೊಡಿದ್ದಾರೆ. 2010ರಲ್ಲಿ 658 ಕೋಮು ಗಲಭೆಗಳಾಗಿದ್ದು '111 ಪ್ರಾಣಗಳನ್ನು ಆಹುತಿ ತೆಗೆದುಕೊಂಡಿವೆ. 1,971 ಮಂದಿ ಗಾಯಗೊಂಡಿದ್ದಾರೆ. ಇವುಗಳು ಸ್ವತಃ ಗೃಹ ಖಾತೆ ಒದಗಿಸಿರುವ ಮಾಹಿತಿಯಾಗಿದೆ. 2005ರಿಂದ 2009ರ ನಡುವೆ ಕೋಮು ಗಲಭೆಗಳಲ್ಲಿ ಪ್ರತಿ ವರ್ಷ ಸರಾಸರಿ 130 ಮಂದಿ ಅಸುನೀಗಿದ್ದಾರೆ ಹಾಗೂ 2,200 ಜನರು ಗಾಯಗೊಂಡಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಕೋಮು ಗಲಭೆಗಳ ಸಂಖ್ಯೆ ಸ್ವಲ್ಪ ಇಳಿಮುಖವಾದರೂ ತೃಪ್ತಿ ಪಟ್ಟುಕೊಳ್ಳುವಂಥದ್ದೇನೂ ಇಲ್ಲ.

3. ರಾಷ್ಟ್ರೀಯ ಸಮಗ್ರತೆಯನ್ನು ನಾಶ ಮಾಡುವ ಹಾಗೂ ಗಣರಾಜ್ಯದ ಜಾತ್ಯತೀತ ತಳಪಾಯವನ್ನು ದುರ್ಬಲಗೊಳಿಸುವ ಕೋಮುವಾದ ಮುಂದುವರಿಯುತ್ತಿರುವುದಕ್ಕೆ ಕೋಮುವಾದಿ ಸಿದ್ಧಾಂತ ಹಾಗೂ ಕೋಮುವಾದಿ ರಾಜಕಾರಣದ ಆಚರಣೆಯೇ ಕಾರಣವಾಗಿದೆ. ಅದಕ್ಕೆ ಧಾರ್ಮಿಕ ಮೂಲಭೂತವಾದ ಇಂಬುಕೊಟ್ಟಿದೆ. ಸಾಮಾಜಿಕ



ಮತ್ತು ಆರ್ಥಿಕ ಸಮಸ್ಯೆಗಳಿಗೆ ಧಾರ್ಮಿಕ ಲೇಪವನ್ನು ನೀಡಲಾಗುತ್ತಿದೆ. ಹೀಗಾಗಿ, ಕೋಮುವಾದದ ವಿರುದ್ಧ ಹೋರಾಟ ನಡೆಸಲು ಈ ಕೆಳಗಿನ ಅಂಶಗಳು ಅಗತ್ಯವಾಗುತ್ತವೆ:

ಅ). ಎಲ್ಲಾ ರೀತಿಯ ಕೋಮುವಾದಿ ಸಿದ್ಧಾಂತ ಮತ್ತು ರಾಜಕೀಯದ ವಿರುದ್ಧ ಸಂಘರ್ಷ: ಕೋಮುವಾದದ ನೆಲೆಯಲ್ಲಿ ಜನರನ್ನು ಅಣಿನೆರೆಯಿಸುವುದರಿಂದ ರಾಜಕೀಯದ ಜಾತ್ಯತೀತ ಸ್ವರೂಪವು ನಾಶವಾಗುತ್ತಿದೆ. 1992ರಲ್ಲಿ ಅಯೋಧ್ಯೆ ವಿಷಯದ ಮೇಲೆ ನಡೆಸಲಾದ ಈ ರೀತಿಯ ರಾಜಕಾರಣದಿಂದ ಉಂಟಾದ ಘೋರ ಪರಿಣಾಮವನ್ನು ನಾವು ಕಂಡಿದ್ದೇವೆ. ರಾಷ್ಟ್ರೀಯತೆಯ ಸೋಗಿನ ಈ ರಾಜಕಾರಣವು ಬಹುಸಂಖ್ಯಾತ ಕೋಮುವಾದವಲ್ಲದೆ ಇನ್ನೇನೂ ಅಲ್ಲ. ಅಲ್ಪಸಂಖ್ಯಾತ ಕೋಮುವಾದ ಕೂಡ ಇದೇ ಧೋರಣೆಯನ್ನು ಪ್ರತಿಫಲಿಸುತ್ತಿದ್ದು ಜಾತ್ಯತೀತತೆಯನ್ನು ದುರ್ಬಲಗೊಳಿಸುತ್ತದೆ. ರಾಜಕೀಯ ಪಕ್ಷಗಳು ಎಲ್ಲಾ ಬಗೆಯ ಕೋಮುವಾದಿ ರಾಜಕಾರಣವನ್ನು ಕೈಬಿಡುವವರೆಗೂ ಕೋಮುವಾದದ ಸಮಸ್ಯೆ ಇದ್ದೇ ಇರುತ್ತದೆ.

ಆ). ಶಿಕ್ಷಣ ಸಂಸ್ಥೆಗಳು ಮತ್ತು ಇತರೆ ಸರಕಾರಿ ಸಂಸ್ಥೆಗಳ ಮೂಲಕ ಕೋಮುವಾದಿ ಸಿದ್ಧಾಂತವನ್ನು ಎತ್ತಿಹಿಡಿಯುವುದು ಕೆಲವು ರಾಜ್ಯಗಳಲ್ಲಿ ಕಂಡುಬಂದಿರುವ ಪ್ರವೃತ್ತಿಯಾಗಿದೆ. ಇಂಥ ಎಲ್ಲಾ ರೀತಿಯ ಜಾತ್ಯತೀತ–ವಿರೋಧಿ ಹಾಗೂ ಕೋಮುವಾದಿ ಪ್ರವೃತ್ತಿಗಳನ್ನು ನಿಯಂತ್ರಿಸಬೇಕಾಗಿದೆ. ಅಲ್ಪಸಂಖ್ಯಾತರ ವಿರುದ್ಧ ದ್ವೇಷಮಯ ಭಾಷಣ ಮಾಡುವುದನ್ನು ಮತ್ತು ಅಲ್ಪಸಂಖ್ಯಾತರನ್ನು ರಾಕ್ಷಸರಂತೆ ಚಿತ್ರಿಸುವ ಪ್ರವೃತ್ತಿಯನ್ನು ಕಾನೂನುಬಾಹಿರಗೊಳಿಸಬೇಕು ಮತ್ತು ಅದಕ್ಕಾಗಿ ಅಗತ್ಯಬಿದ್ದಾಗಲೆಲ್ಲ ಕ್ರಮಗಳನ್ನು ಕೈಗೊಳ್ಳಬೇಕು.

ಇ). ಭಯೋತ್ಪಾದನೆ: ಧಾರ್ಮಿಕ ಉಗ್ರವಾದ ಮತ್ತು ಕೋಮು ದ್ವೇಷ ಭಾರತದಲ್ಲಿ ಭಯೋತ್ಪಾದನೆಯ ಪ್ರಮುಖ ಮೂಲಗಳಾಗಿವೆ.

ಧಾರ್ಮಿಕ ಉಗ್ರವಾದ ಮತ್ತು ಕೋಮುವಾದವೇ ಭಯೋತ್ಪಾದನೆಯ ಸೃಷ್ಟಿಮೂಲಗಳು ಎಂಬುದು ನಮಗೆ ತಿಳಿದಿರುವಾಗ "ಭಯೋತ್ಪಾದಕರಿಗೆ ಧರ್ಮವಿಲ್ಲ" ಎಂಬ ವಿಶ್ಲೇಷಣೆಗಷ್ಟೇ ನಾವು ಸೀಮಿತಗೊಳಿಸಿಕೊಳ್ಳಬಾರದು. ಭಾರತದಲ್ಲಿ ಕೋಮುವಾದಕ್ಕೂ ಭಯೋತ್ಪಾದನೆಗೂ ನಿಸ್ಸಂಶಯವಾಗಿ ನೇರ ಸಂಬಂಧವಿದೆ.

ಇತ್ತೀಚಿನ ವರ್ಷಗಳಲ್ಲಿ ಧಾರ್ಮಿಕ ಉಗ್ರವಾದವು ಭಯೋತ್ಪಾದಕ ಹಿಂಸಾಚಾರಗಳಿಗೆ ಇಂಬುಕೊಡುತ್ತಿರುವುದನ್ನು ನಾವು ಕಂಡಿದ್ದೇವೆ. ಕೆಲವು ಮುಸ್ಲಿಂ ಉಗ್ರಗಾಮಿ ಗುಂಪುಗಳಿಗೆ ಇದುವೇ ಚಾಲಕ ಶಕ್ತಿಯಾಗಿದೆ. ಇದೇ ವರ್ಷ ಜುಲೈನಲ್ಲಿ ಮುಂಬಯಿಯಲ್ಲಿ ನಡೆದ ಸ್ಫೋಟಗಳು ಮತ್ತು ಸೆಪ್ಟಂಬರ್‌ನಲ್ಲಿ ದೆಹಲಿ ಹೈಕೋರ್ಟ್ ಆವರಣದಲ್ಲಿ ನಡೆದ ಸ್ಫೋಟಗಳಂಥ ಹೇಯ ಆಕ್ರಮಣಗಳು ಈ ಶಕ್ತಿಗಳು ಇನ್ನೂ ಅಪಾಯಕಾರಿಯಾಗಿ ಮುಂದುವರಿಯುತ್ತಿವೆ ಎನ್ನುವುದಕ್ಕೆ ದೃಷ್ಟಾಂತವಾಗಿವೆ. ಭಯೋತ್ಪಾದನೆಯನ್ನು ಯಾವುದೇ ಒಂದು ಸಮುದಾಯದೊಂದಿಗೆ ಸಮೀಕರಿಸುವುದು ಹಾಗೂ ಕೋಮುವಾದಿ ನೆಲೆಯಲ್ಲಿ ಆ ಸಮುದಾಯವನ್ನು ಗುರಿಯಾಗಿಸುವುದು ತಪ್ಪಾಗುತ್ತದೆ: ಮಾಲೆಗಾಂವ್, ಮೆಕ್ಕಾ ಮಸೀದಿ, ಅಜ್ಮೇರ್ ಷರೀಫ್ ಮತ್ತು ಸಮಝೋತಾ ಎಕ್ಸ್‌ಪ್ರೆಸ್ ಭಯೋತ್ಪಾದಕ ದಾಳಿಗಳ ಬಗ್ಗೆ ಮುನ್ನಡೆಸಿದ ತನಿಖೆಗಳು ಈ ಪ್ರಕರಣಗಳಲ್ಲಿ ಕೆಲವು ಉಗ್ರ ಹಿಂದುತ್ವವಾದಿ ಸಂಘಟನೆಗಳ ಕೈವಾಡವಿರುವುದನ್ನು ಬಹಿರಂಗಪಡಿಸಿವೆ. ಕೋಮುವಾದ ಮತ್ತು ಧಾರ್ಮಿಕ ಉಗ್ರವಾದವನ್ನು ದೃಢವಾಗಿ ತಡೆದಾಗಲಷ್ಟೇ ಭಯೋತ್ಪಾದನೆಯನ್ನು ಎದುರಿಸುವ ಹೋರಾಟವನ್ನು ಯಶಸ್ವಿಯಾಗಿ ಮುಂದಕ್ಕೊಯ್ಯಬಹುದಾಗಿದೆ.

ಈ). ಕೋಮು ಹಿಂಸಾಚಾರ ಮಸೂದೆ: ಕೋಮು ಹಿಂಸಾಚಾರವನ್ನು ತಡೆಗಟ್ಟುವಲ್ಲಿ ಆಡಳಿತಾತ್ಮಕ ಮತ್ತು ಕಾನೂನು ಕ್ರಮಗಳಿಗೆ ಹೆಚ್ಚಿನ ಬಲ ಒದಗಿಸಲಿಕ್ಕಾಗಿ ಹಾಗೂ ಈ ರೀತಿಯ ಹಿಂಸಾಚಾರ ನಡೆಸಿದವರಿಗೆ ಶಿಕ್ಷೆ ವಿಧಿಸುವ ಪ್ರಕ್ರಿಯೆಯನ್ನು ಶೀಘ್ರಗೊಳಿಸಲಿಕ್ಕಾಗಿ ಕೋಮು ಹಿಂಸಾಚಾರಕ್ಕೆ ಸಂಬಂಧಿಸಿ ಒಂದು ಕಾನೂನನ್ನು ರೂಪಿಸುವುದು ಅಗತ್ಯವಾಗಿದೆ. ಇಂಥ ಹಿಂಸಾಚಾರಗಳಲ್ಲಿ ನೊಂದವರಿಗೆ ಪರಿಹಾರ ಮತ್ತು ಪುನರ್‌ವಸತಿಗಾಗಿಯೂ ಈ ಕಾನೂನಿನಲ್ಲಿ ಅವಕಾಶ ಇರಬೇಕು. ಕೋಮು ಗಲಭೆಗಳನ್ನು ದೃಢವಾಗಿ ಬಗ್ಗುಬಡಿಯುವ ವಿಚಾರದಲ್ಲಿ ಆಡಳಿತ ಮತ್ತು ಪೊಲೀಸರನ್ನು ಹೊಣೆಗಾರರನ್ನಾಗಿ ಮಾಡುವುದೂ ಅಗತ್ಯ.

ಈ ರೀತಿ ಮಾಡುವಾಗ ಎರಡು ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಈ ಕಾನೂನು "ಕೋಮು ಗಲಭೆ"ಗಳನ್ನಷ್ಟೇ ಕೇಂದ್ರೀಕರಿಸಬೇಕು. ಇತರ ಯಾವುದೇ ರೀತಿಯ ಗಲಭೆಗಳನ್ನು ಅದರ ವ್ಯಾಪ್ತಿಗೆ ತರಬಾರದು. ಎರಡನೆಯದಾಗಿ, ಕಾನೂನು ಮತ್ತು ಸುವ್ಯವಸ್ಥೆ ಪಾಲನೆ ಹಾಗೂ ಪೊಲೀಸ್ ವ್ಯವಸ್ಥೆ ರಾಜ್ಯಗಳ ಪ್ರಾಥಮಿಕ ಹೊಣೆಗಾರಿಕೆ ಎಂಬ ಒಕ್ಕೂಟ ತತ್ವವನ್ನು ಈ ಕಾನೂನು

ಪುಟ 12ಕ್ಕೆ

ಜನಸಂಸ್ಕೃತಿ ನಿರ್ವಚನೆ : ವಿಚಾರ ಸಂಕಿರಣ

ಪುಟ 16 ರಿಂದ

"ಇಪ್ಟಾ ಚಳುವಳಿಯ ಇತಿಹಾಸ ಮತ್ತು ಮಹತ್ವದ" ಬಗ್ಗೆ ವಿವರಗಳನ್ನು ಬಿಚ್ಚಿಟ್ಟವರು ಸಮುದಾಯದ ಹಿರಿಯ ನಾಯಕ ವಾಸುದೇವ ಉಚ್ಚಿಲ. 1940 ರ ದಶಕದಲ್ಲಿ ಅದರ ಉಗಮ, 1950 ರ ದಶಕದಲ್ಲಿ ಅದರ ಪ್ರಭಾವಶಾಲಿ ವಿಕಾಸ, ಅದು ದೇಶದ ಸಾಂಸ್ಕೃತಿಕ ರಾಜಕೀಯ ಕ್ಷೇತ್ರಗಳಲ್ಲಿ ಬೀರಿದ ಪರಿಣಾಮಗಳನ್ನು ಉಚ್ಚಿಲ ವಿವರಿಸಿದರು. ಇಪ್ಟಾದ ವಿಶಿಷ್ಟ ಸಾಧನೆಗಳು ಮತ್ತು ವೈಫಲ್ಯಗಳ ಹಿಂದಿರಬಹುದಾದ ಕಾರಣಗಳನ್ನೂ ಅವರು ವಿವರವಾಗಿ ಚರ್ಚಿಸಿದರು. ಈಗ ಬಹುವಾಗಿ ಸಾಂಸ್ಕೃತಿಕ ಸೈದ್ಧಾಂತಿಕ ಕ್ಷೇತ್ರಗಳಲ್ಲಿ ಚರ್ಚೆಯಲ್ಲಿರುವ ಪೋಸ್ಟ್ ಮಾಡರ್ನಿಸಂನ ಪರಿಚಯ ಮಾಡುತ್ತಾ, "ಜನಸಂಸ್ಕೃತಿಯ ಮೇಲೆ ಪೋಸ್ಟ್ ಮಾಡರ್ನಿಸಂನ ಸೈದ್ಧಾಂತಿಕ ಪ್ರಭಾವ" ದ ಬಗ್ಗೆ ತಮ್ಮ ವಿಚಾರಗಳನ್ನು ಮುಂದಿಟ್ಟವರು ವಿಮರ್ಶಕ ಚಿಂತಕ ಡಾ. ಎಂ.ಜಿ.ಹೆಗಡೆ. ಪೋಸ್ಟ್ ಮಾಡರ್ನಿಸಂನಂತಹ ಕ್ಲಿಷ್ಟ ಸಿದ್ಧಾಂತದ ಹಲವು ಆಯಾಮಗಳನ್ನು ಸರಳವಾಗಿ ಪರಿಣಾಮಕಾರಿ ಉದಾಹರಣೆಗಳೊಂದಿಗೆ ವಿವರಿಸಿದರು. ವ್ಯಂಗ್ಯಮಿಶ್ರಿತ ಆದರೂ ಗಂಭೀರ ದಾಟಿಯಲ್ಲಿ ಪೋಸ್ಟ್ ಮಾಡರ್ನಿಸಂ ಸಿದ್ಧಾಂತದ ಸಾಂಸ್ಕೃತಿಕ ರಾಜಕೀಯ ದಾಳಿಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಬಿಂಬಿಸಿದರು.

ಈ ನಾಲ್ಕೂ ಪ್ರಬಂಧಗಳ ಬಗ್ಗೆ ಬಿಸಿ–ಬಿಸಿ ಚರ್ಚೆ ನಡೆಯಿತು. "ಹೊಸ ಸಾಹಿತ್ಯಿಕ ಚಳುವಳಿಯ ಆವಶ್ಯಕತೆ" ಬಗ್ಗೆ ಪ್ರಬಂಧ ಮಂಡಿಸುವುದಲ್ಲದೆ ಅಧಿವೇಶನದ ಅಧ್ಯಕ್ಷೀಯ ಭಾಷಣವನ್ನು ಮಾಡಿದವರು ಶಿವಾನಂದ ಸಾಸ್ವೆಹಳ್ಳಿಯವರು. ಬಂಡಾಯ ಚಳುವಳಿಯಲ್ಲಿ ಭಾಗವಹಿಸಿದ್ದು ಅದರ ಪ್ರಬಲ ಸಮರ್ಥಕರಾಗಿದ್ದೂ, ಬಂಡಾಯ ಚಳುವಳಿಯ ಸಾಧನೆ ಮತ್ತು ಪ್ರಭಾವ ಕುಗ್ಗಿದ್ದರ ಮೂಲ ಕಾರಣಗಳ ಬಗ್ಗೆ ತೀಕ್ಷ್ಣವಾದ ವಿಶ್ಲೇಷಣೆ ಜತೆ ತಮ್ಮ ಅನ್ನಿಸಿಕೆಗಳನ್ನು ಅತ್ಯಂತ ನಿರ್ಮಮತೆಯಿಂದ ಮಂಡಿಸಿದರು. ಯಾವುದೇ ಇಸಂ ಅಥವಾ ಸಾಹಿತ್ಯ ಚಳುವಳಿಗಳು ಇಲ್ಲ ಎಂದು ಸಂಭ್ರಮಿಸುತ್ತಿರುವುದು ಒಂದು ಭ್ರಮಾತ್ಮಕ ಧೋರಣೆ ಮತ್ತು ಅದೇ ಒಂದು ಇಸಂ ಎಂದು ಅವರು ಹೇಳಿದರು.



ಆಧುನಿಕತೆಯನ್ನು ಹಾಗೂ ಎಲ್ಲ ಶೋಷಣೆ, ತುಳಿತ, ದಮನಗಳಿಂದ ಮಾನವನನ್ನು ಬಿಡುಗಡೆಗೊಳಿಸುವ ಎಲ್ಲ ಸಾಮಾಜಿಕ–ಸಾಂಸ್ಕೃತಿಕ ಹೋರಾಟಗಳನ್ನು ಶಂಕಿಸುವ–ಪ್ರಶ್ನಿಸುವ ಆಧುನಿಕೋತ್ತರ ವಾದವನ್ನು ಎದುರಿಸಲು ಹಾಗೂ ಆಧುನಿಕತೆಯ ವಿಕಲ್ಪಗಳನ್ನು ವಿಸ್ಮೃತಿಗಳನ್ನು ಗುರುತಿಸುವ ನೆಪದಲ್ಲಿ ಆಧುನಿಕತೆಯ ವೈಚಾರಿಕ ಪ್ರಗತಿಪರ ನೆಲೆಗಳನ್ನೆ ಕತ್ತರಿಸುವ ವಸಾಹತೋತ್ತರ ಚಿಂತನೆಗಳನ್ನು ಎದುರಿಸಲು, ಮತ್ತು ಸೆಕ್ಯುಲರಿಜಂ ಎನ್ನವ ಕಲ್ಪನೆಯಾಗಲಿ ರಿಲಿಜಿಯನ್ ಆಗಲಿ ನಮ್ಮದಲ್ಲ ಎನ್ನುವ ಬೌದ್ಧಿಕ ವಿತಂಡವಾದಗಳನ್ನು ಎದುರಿಸಲು, ಬಹುಸಂಸ್ಕೃತಿಗಳಲ್ಲಿ ಅಂತಸ್ಥವಾಗಿರುವ ಜೀವಪರ ಹಾಗೂ ಚಲನಶೀಲ ಜೀವಧಾತುಗಳನ್ನು ಒಗ್ಗೂಡಿಸಿ ಹೊಸ ಬದುಕನ್ನು ಕಟ್ಟುವ ಹಂಬಲದಲ್ಲಿ ಸಾಂಸ್ಕೃತಿಕ ಚಳುವಳಿಯೊಂದನ್ನು ರೂಪಿಸುವಂತಹ ಹೊಸ ಸಾಹಿತ್ಯ ಚಳುವಳಿ ಇಂದಿನ ಅಗತ್ಯವಾಗಿದೆ ಎಂದು ಅವರು ಬಲವಾಗಿ ಪ್ರತಿಪಾದಿಸಿದರು. ಮುಖ್ಯ ಅಧಿವೇಶನದ ನಿರ್ವಹಣೆ ಮಾಡಿದವರು ಸಮುದಾಯದ ಉಪಾಧ್ಯಕ್ಷೆ ಡಾ. ಮೀನಾಕ್ಷಿ ಬಾಳಿ ಅವರು.

ಜನಸಂಸ್ಕೃತಿ ಎಂದರೇನು ?

ಆ ಮೇಲೆ ನಡೆದ ಕಾರ್ಯಾಗಾರದಲ್ಲಿ ಸಮುದಾಯದ ರಾಜ್ಯ ಸಮನ್ವಯ ಸಮಿತಿ ರಚಿಸಿದ ಉಪಸಮಿತಿ ತಯಾರಿಸಿದ ಒಂದು ಕರಡು ಹೇಳಿಕೆಯನ್ನು ಮಂಡಿಸಲಾಯಿತು. ಉಪಸಮಿತಿಯ ಪರವಾಗಿ ವಸಂತರಾಜ್ ಕರಡು ಹೇಳಿಕೆಯನ್ನು ಮಂಡಿಸಿದರು. ಈ ಮೊದಲು ಜನಸಂಸ್ಕೃತಿ ನಿರ್ವಚನೆ ಬಗ್ಗೆ ಒಂದು ಪ್ರಶ್ನಾವಳಿಯನ್ನು ಸಾಂಸ್ಕೃತಿಕ ಅಧ್ಯಯನ ಮಾಡಿರುವ ಪರಿಣತರು, ಪ್ರಗತಿಪರ ಚಿಂತಕರು, ವಿವಿಧ ಸಾಂಸ್ಕೃತಿಕ ಕ್ಷೇತ್ರಗಳ ಪರಿಣತರು, ಪ್ರಗತಿಪರ ಚಳುವಳಿಯ ನಾಯಕರು/ಕಾರ್ಯಕರ್ತರು ಮತ್ತು ಸಮುದಾಯದ ನಾಯಕರಿಗೆ ಕೊಡಲಾಗಿತ್ತು. ಇದಕ್ಕೆ ಬಂದ ಪ್ರತಿಕ್ರಿಯೆ ಮತ್ತು ಉಪಸಮಿತಿಯಲ್ಲಿ ನಡೆದ ಚರ್ಚೆಯ ಆಧಾರದ ಮೇಲೆ ಕರಡು ಹೇಳಿಕೆಯನ್ನು ತಯಾರಿಸಲಾಗಿತ್ತು. ಸಾಂಸ್ಕೃತಿಕ ಚಳುವಳಿಯ ಪ್ರಧಾನ ಆಶಯವನ್ನು ವಿಷದ ಪಡಿಸುವುದು; ಅದರ ಪ್ರಮುಖ ಚಟುವಟಿಕೆ–ಕಾರ್ಯಕ್ರಮಗಳಿಗೆ ದಾರಿದೀಪವಾಗುವುದು; ಜನಸಂಸ್ಕೃತಿಯ ಮೇಲೆ ಆಳುವ ಸಂಸ್ಕೃತಿ ಕಾಲದಿಂದ ಕಾಲಕ್ಕೆ ನಡೆಸಿದ ದಾಳಿಯ ಸ್ವರೂಪ ಗುರುತಿಸುವುದು; ಜನಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಮಾರಕವಾಗುವ ಸಿದ್ಧಾಂತಗಳು, ಶಕ್ತಿಗಳು ಮತ್ತು ಅಂಶಗಳನ್ನು ಗುರುತಿಸುವುದು –ಈ ಕರಡು ಹೇಳಿಕೆಯ ಪ್ರಮುಖ ಉದ್ದೇಶಗಳು.

ಕರಡು ಹೇಳಿಕೆಯಲ್ಲಿ – ಸಾಂಸ್ಕೃತಿಕ ಸನ್ನಿವೇಶ, ಜನಸಂಸ್ಕೃತಿ ಎಂದರೇನು, ಸಾಂಸ್ಕೃತಿಕ ದಾಳಿಯ ಸ್ವರೂಪ, ಸಾಂಸ್ಕೃತಿಕ ಚಳುವಳಿಯ ರೂಪುರೇಷೆಗಳು ಎಂಬ ನಾಲ್ಕು ವಿಭಾಗಗಳಿದ್ದವು. 'ಜನಸಂಸ್ಕೃತಿ ಎಂದರೇನು?' ವಿಭಾಗದಲ್ಲಿ 'ಜನ' ಮತ್ತು 'ಸಂಸ್ಕೃತಿ'ಯ ನಿರ್ದಿಷ್ಟ ವ್ಯಾಖ್ಯೆಯ ನಂತರ ಇತರ ಸಮಾನಾಂತರ (ಜನಪರ, ಜನಪ್ರಿಯ, ಜಾನಪದ ಮುಂತಾದ) ಪರಿಕಲ್ಪನೆಗಳ ಜತೆ ವ್ಯತ್ಯಾಸ ಮತ್ತು ಸಂಬಂಧಗಳನ್ನು ಗುರುತಿಸಲಾಗಿದೆ. **"ದುಡಿಯುವ ಜನ ಈಗಿನ ಆಳುವ ವರ್ಗಗಳ ಆಳ್ವಿಕೆ ಕೊನೆಗೊಳಿಸಲು ಹೂಡುವ ಐಕ್ಯ ಹೋರಾಟದ ಮತ್ತು ಹೊಸ ಸಮಾಜ ಕಟ್ಟುವ ಪ್ರಕ್ರಿಯೆಯಲ್ಲಿ, ಹಲವು ಸಂಸ್ಕೃತಿಗಳ ಬಹುತ್ವ ಮತ್ತು ಸಮಾನತೆ ಮಾನ್ಯ ಮಾಡುವ, ಎಲ್ಲಾ ಹಿಂದಿನ ಮತ್ತು ಇಂದಿನ ಸಂಸ್ಕೃತಿಗಳ ಉತ್ತಮವಾದ ಮತ್ತು ಪ್ರಸ್ತುತವಾದ ಅಂಶಗಳನ್ನು ತೆಗೆದುಕೊಳ್ಳುವ, ಎಲ್ಲಾ ಪ್ರತಿಗಾಮಿ ಅಂಶಗಳನ್ನು ತಿರಸ್ಕರಿಸುವ, ಎಲ್ಲಾ ದುಡಿಯುವ ಜನರಿಗೆ ಸಾಮಾನ್ಯವಾದ ಒಂದು ಸಂಸ್ಕೃತಿ ಹೊರ ಹೊಮ್ಮುತ್ತದೆ ಎಂಬ ಆಶಯ ಜನಸಂಸ್ಕೃತಿಯ ಪರಿಕಲ್ಪನೆಯ ಮೂಲ ಆಧಾರ."** ಎಂದು ಕರಡು ಜನಸಂಸ್ಕೃತಿಯನ್ನು ಪ್ರಧಾನವಾಗಿ ನಿರ್ವಚಿಸಿದೆ.

ದುಡಿಯುವ ಜನತೆಯ ಮೇಲೆ ಆಳುವ ವರ್ಗಗಳ ಯಜಮಾನ ಸಂಸ್ಕೃತಿಯ ಸಾಂಸ್ಕೃತಿಕ ದಾಳಿಗಳಲ್ಲಿ ಈಗಿನ ಸಂದರ್ಭದಲ್ಲಿ ಪ್ರಮುಖವಾದವು.

ಕೋಮುವಾದ, ಪೋಸ್ಟ್ ಮಾಡರ್ನಿಸಂನ ಸೈಧ್ಧಾಂತಿಕ ದಾಳಿ, ಮಾಧ್ಯಮಗಳಿಂದ 'ಒಪ್ಪಿಗೆಯ ಸಾಮೂಹಿಕ ಉತ್ಪಾದನೆ' ಎಂದು ಕರಡು ಗುರುತಿಸುತ್ತದೆ. ಹಿಂದಿನ ಪ್ರಮುಖ ಸಾಂಸ್ಕೃತಿಕ ಚಳುವಳಿಗಳಾದ–ಕರ್ನಾಟಕದ ವಚನ–ತತ್ವಪದಕಾರರ ಚಳುವಳಿ, ಪ್ರಗತಿಶೀಲ ಲೇಖಕರ ಸಂಘ–ಇಪ್ಟಾ, ಫ್ಯಾಸಿಸ್ಟ್ ವಿರೋಧಿ ಸಾಹಿತಿ–ಕಲಾವಿದರ ಅಂತರ್ರಾಷ್ಟ್ರೀಯ ರಂಗ–ಇವುಗಳಿಂದ ಕಲಿಬಹುದಾದ ಅಂಶಗಳನ್ನು ಗುರುತಿಸುತ್ತಾ, ಹೊಸ ಸಾಂಸ್ಕೃತಿಕ ಚಳುವಳಿಯ ರೂಪುರೇಷೆಗಳನ್ನು ಹೇಳಿಕೆ ಗುರುತಿಸುತ್ತದೆ.

ಕರಡು ಹೇಳಿಕೆಯ ಮೇಲಿನ ಮಂಥನದಲ್ಲಿ ಸತೀಶ ಕುಲಕರ್ಣಿ, ದು.ಸರಸ್ವತಿ, ಎಂ.ಲೋಕೇಶ, ವೀರಣ್ಣ ಮಡಿವಾಳ ಮತ್ತು ಹಲವು ಪ್ರತಿನಿಧಿಗಳು ಭಾಗವಹಿಸಿ ಕರಡು ಹೇಳಿಕೆಯ ಬಗ್ಗೆ ತಮ್ಮ ಅನ್ನಿಸಿಕೆಗಳು ಮತ್ತು ಸಲಹೆ–ಸೂಚನೆಗಳನ್ನು ಮಂಡಿಸಿದರು. ಚರ್ಚೆಯ ಮತ್ತು ಎರಡು ದಿನಗಳ ಇಡೀ ಕಾರ್ಯಕ್ರಮದ ಸಾರಾಂಶವನ್ನು ಡಾ.ಮೀನಾಕ್ಷಿ ಬಾಳಿ ಮುಂದಿಟ್ಟರು. ಇದು ಜನಸಂಸ್ಕೃತಿ ನಿರ್ವಚನೆಯ ಪ್ರಕ್ರಿಯೆಯ ಆರಂಭ. ಇನ್ನೂ ಇಂತಹ ಹಲವು ಸಂವಾದಗಳ ಮೂಲಕ ಅದು ಚಲನಶೀಲವಾಗಿರುತ್ತದೆ ಎಂಬ ಪ್ರೊ. ಹುಡಗಿ ಅವರ ಸ್ಫೂರ್ತಿದಾಯಕ ಸಮರೋಪ ಭಾಷಣ ಮತ್ತು 'ಎಲ್ಲಿಂದ ಬಂದಿರೆಂದು ಕೇಳಬಹುದು..' ಸಮುದಾಯ ಗೀತೆಯೊಂದಿಗೆ ಎರಡು ದಿನಗಳ ಕಾರ್ಯಕ್ರಮ ಅರ್ಥಪೂರ್ಣವಾಗಿ ಮುಕ್ತಾಯವಾಯಿತು. ಮೊದಲ ದಿನದ ರಾತ್ರಿ ಹಾಡುಗಳು ಮತ್ತು ದು.ಸರಸ್ವತಿ ಪ್ರಸ್ತುತ ಪಡಿಸಿದ 'ಹೆಂಗುಸ್ರ ರಾಮಾಯಣ'ದ ಏಕವ್ಯಕ್ತಿ ಪ್ರದರ್ಶನದ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮ ಇತ್ತು.


ನಿವೇಶನ – ವಸತಿ ರಹಿತರ ಬೃಹತ್ ಪ್ರತಿಭಟನೆ

ಪುಟ 5 ರಿಂದ

ಪವಿತ್ರಾರವರು ಜಿಲ್ಲಾಧಿಕಾರಿಗಳು ಕೊಟ್ಟಿರುವ 2 ತಿಂಗಳ ಅವಧಿ ನಂತರ ಏನು ಕ್ರಮ ಕೈಗೊಳ್ಳದಿದ್ದರೆ ಈ ಹೋರಾಟವನ್ನು ಮತ್ತೆ ಮುಂದುವರಿಸಲು ತಾವು ಬೆಂಬಲ ಕೊಡಬೇಕೆಂದು ಕರೆ ಕೊಟ್ಟರು. ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷರಾದ ಬಿ.ಸಾವಿತ್ರಮ್ಮನವರು ಮಾತನಾಡಿ ಬೇಡಿಕೆ ಕಾಲಮಿತಿಯಲ್ಲಿ ಈಡೇರದಿದ್ದರೆ ಹೋರಾಟದ ಮೂಲಕ ಒತ್ತಡ ಹೇರೋಣವೆಂದರು. ನಂತರ ಡಿ.ವೈ.ಎಫ್.ಐ. ಜಿಲ್ಲಾಧ್ಯಕ್ಷರಾದ ಚೆನ್ನರಾಯಪ್ಪ ಮಾತನಾಡಿದರು. ಓ.ಓಬಳರಾಜು ಹಾಗೂ ಅವರ ಕಲಾತಂಡ ಕ್ರಾಂತಿ ಗೀತೆಗಳು, ಹಾಡುಗಳ ನೇತೃತ್ವವನ್ನು ವಹಿಸಿತ್ತು. ಡಿ.ಸಿ. ಕಛೇರಿಯ ಪಕ್ಕದಲ್ಲಿ ಪ್ರತಿಭಟನಾಕಾರರು ಅಡುಗೆಯನ್ನು ಮಾಡಿದರು. ನಂತರ ಎಲ್ಲರೂ ಡಿ.ಸಿ. ಕಛೇರಿ ಎದುರುಗಡೆ ಊಟವನ್ನು ಮಾಡಿದರು. ಈ ಹೋರಾಟದಲ್ಲಿ ಜಿಲ್ಲಾ ಪಂಚಾಯ್ತಿ ಸದಸ್ಯರಾದ ನಾರಾಯಣಮ್ಮ, ಸಿ.ಪಿ.ಐ.(ಎಂ) ಮುಖಂಡರಾದ ಸಿದ್ದಗಂಗಪ್ಪ, ಅಕ್ರಂ, ರವಿಚಂದ್ರರೆಡ್ಡಿ, ಸಿ.ಸಿ.ಅಶ್ವತ್ಥಪ್ಪ, ವೈ.ಆರ್. ವೆಂಕಟೇಶಬಾಬು, ಡಿ.ಸಿ.ಶ್ರೀನಿವಾಸ್, ರಘುನಾಥರೆಡ್ಡಿ, ಮುಸ್ತು, ಅಶ್ವತ್ಥಪ್ಪ, ಜಿ.ಕೃಷ್ಣಪ್ಪ, ರಾಮಲಿಂಗಪ್ಪ, ಗುಡಿಬಂಡೆ ಜಯರಾಮರೆಡ್ಡಿ, ಅಶ್ವತ್ಥರೆಡ್ಡಿ, ಹೆಚ್.ಆರ್.ರಾಮನಾಥ, ಚಿಕ್ಕಬಳ್ಳಾಪುರದ ಮುನಿಕೃಷ್ಣಪ್ಪ, ಶ್ರೀನಿವಾಸ ಹಾಗೂ ಗೋಪಿ, ಮಂಜುನಾಥರೆಡ್ಡಿ, ಗೋವರ್ಧನಾಚಾರಿ, ಕೆ.ಪಿ. ಆರ್.ಎಸ್., ಡಿ.ವೈ.ಎಫ್.ಐ,. ಜೆ.ಎಂ.ಎಸ್., ಎ.ಐ. ಎ.ಡ್ಬ್ಲ್ಯೂಯು.ನ ಅಧ್ಯಕ್ಷರು ಹಾಗೂ ಕಾರ್ಯ ದರ್ಶಿಗಳು ಮುಂತಾದವರು ಪಾಲ್ಗೊಂಡಿದ್ದರು.

*

ಹಿನ್ನೆಲೆ
ಕನ್ನಡ ವಾರಪತ್ರಿಕೆ




ಆರ್.ರಾಮಕೃಷ್ಣ

ಬಿಜೆಪಿ ದರ್ಬಾರ್

'ಆಪರೇಷನ್ ಕಮಲ'ದ ಬೆನ್ನೆಲುಬಾಗಿ ಕಾರ್ಯ ನಿರ್ವಹಿಸಿದ ಬಿಜೆಪಿ ಪಕ್ಷದ ಮಹಾತ್ಮರು. ಅದೇ '24 ಕ್ಯಾರಟ್ ಚಿನ್ನ'ದ ಇಟ್ಟಿಗೆಗಳಾದ.... ಜನಾರ್ಧನ ರೆಡ್ಡಿಗಾರು ಮತ್ತು ಅವರ ಓಬಳಾಪುರಂ ಮೈನಿಂಗ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸ ರೆಡ್ಡಿಗಾರು ಅವರುಗಳು ಹೈದರಾಬಾದ್‌ನ ಚಂಚಲಗುಡ ಜೈಲಿನಲ್ಲಿ ಕಂಬಿಗಳ ಸಂಖ್ಯೆ ಗುಣಿಸುತ್ತಾ ಕುಳಿತಿರುವುದು ನಮಗೆಲ್ಲಾ ಗೊತ್ತೆ ಇದೆ. ಕರುಣಾಕರ ರೆಡ್ಡಿಗಾರು, ಸೋಮಶೇಖರ ರೆಡ್ಡಿಗಾರು, ಶ್ರೀರಾಮುಲುಗಾರು ಅವರುಗಳಿಗೂ ಸಿ.ಬಿ.ಐ. ನೋಟೀಸ್ ನೀಡಿದೆ. ಇರಲಿ. ಶ್ರೀಕೃಷ್ಣ ಜನ್ಮಸ್ಥಾನದಲ್ಲಿಯೇ ಶಾಶ್ವತವಾಗಿ ನೆಲೆಯೂರಲು ಬೇಕಾದ ಸಕಲ ಅರ್ಹತೆಗಳಿದ್ದಾಗಲೂ ಈ ಪುಣ್ಯಾತ್ಮರ ಮಹಾತ್ಮೆ, ಮಹಾನ್ ಲೀಲೆಗಳೆನ್ನೆಲ್ಲಾ ಮುಚ್ಚಿಟ್ಟು "...ಮಹಾನ್ ದೈವಭಕ್ತರಾದ 'ಜಿಜೆಆರ್ ಸರ್.' ಅವರು ತಮ್ಮ ದೈವಭಕ್ತಿಯಿಂದಾಗಿಯೇ ಜೀವನದಲ್ಲಿ ಉನ್ನತಿಯನ್ನು ಸಾಧಿಸಿದರು..." ಅಂತಲೂ ...ಹರಿಶ್ಚಂದ್ರ, ಮಹಾತ್ಮ ಗಾಂಧಿ,.. .ಮುಂತಾದವರ ಪರಂಪರೆಯ ವಾರಸುದಾರರರಾದ ಇವರಿಗೆ 'ವಿಧಿ ವಿಪರೀತ'ದಿಂದ ಈಗಿನ ಈ ಸ್ಥಿತಿ ಬಂದು ಬಿಟ್ಟಿದೆ ಎಂದು ನೊಂದುಕೊಂಡು 'ಹೀಗೂ ಉಂಟೆ' ಖ್ಯಾತಿಯ ಟಿ.ವಿ.ಚಾನೆಲ್ ದುಖ:ಪೂರಿತ 'ವಾರೆಂಟ್' ಹೊರಡಿಸುತ್ತಿರುವ ಹೊತ್ತಲ್ಲಿ ಇತ್ತ ನಮ್ಮ ಸದಾನಂದ ಗೌಡರ ಬಿಜೆಪಿ ದರ್ಬಾರ್‌ನಲ್ಲಿ ಏನೇನಾಗಿದೆ ನೋಡೋಣ. 'ಕನ್ನಡ ಪ್ರಭ' ಪತ್ರಿಕೆಯು ಹೊರಗುಳಿದಿರುವ ವಿವಿಧ ಪ್ರಕರಣಗಳು ಸರ್ಕಾರದ ನೀತಿಗಳ ದರ್ಶನ ಮಾಡಿಸುತ್ತಿವೆ.

ಕೊಪ್ಪಳದ ಸೌಭಾಗ್ಯ

ಕೊಪ್ಪಳದ ವಿಚಾರ ಈಗ ಎಲ್ಲೆಡೆ ಸಪ್ಪಳ ಮಾಡುತ್ತಿದೆ. ಅಲ್ಲೀಗ ವಿಧಾನ ಸಭಾ ಕ್ಷೇತ್ರದ ಉಪಚುವಣೆ. ಅದೂ ಆಪರೇಷನ್ ಕಮಲದ ಕೃಪೆಯೇ. 'ಆಪರೇಷನ್' ಮಾಡಿ ಜೆಡಿ(ಎಸ್)ನ



ಕೊಪ್ಪಳ : ಮರು ಚುನಾವಣೆ

'ಆಗ ಆಪರೇಷನ್ ಕಮಲ'
ಈಗ ಕ್ಷೇತ್ರಕ್ಕೆ 150 ಕೋಟಿ ರೂ. ಆಮಿಷ

ಕರಡಿ ಸಂಗಣ್ಣ ಅವರನ್ನು ಕಮಲ ಪಾಳಯಕ್ಕೆ ಸೆಳೆದುಕೊಂಡಿರುವುದರಿಂದ ಈ ಚುನಾವಣೆ. ಜನರ ತೆರಿಗೆ ಹಣದಿಂದ ತುಂಬಲಾಗುವ ಸರ್ಕಾರದ ಖಜಾನೆಗೆ ಅಪರೇಷನ್ ಕಮಲದ ಕೊಡುಗೆ ಇದು. ಇರಲಿ. ಈಗ ಕೊಪ್ಪಳ ಜನರಿಗೆ ಒದಗಿ ಬಂದಿರುವ ಭಾಗ್ಯದ ಕುರಿತು ನೋಡೋಣ.

ಕಳೆದ ವಿಧಾನ ಸಭಾ ಚುನಾವಣೆ ನಡೆದು ಮೂರು ವರ್ಷದ ಮೇಲಾಗಿದೆ. ಮೂರು ವರ್ಷಗಳಲ್ಲಿ ಸಿಗದ, ವಿಳಾಸವೇ ಇಲ್ಲದಂತೆ ನಾಪತ್ತೆಯಾಗಿದ್ದ ಹಲವು ಸೌಭಾಗ್ಯಗಳು ಈಗ ಕೊಪ್ಪಳದ ಜನರಿಗೆ ಒದ್ದುಕೊಂಡು ಬರುತ್ತಿವೆ. ಕೊಪ್ಪಳದ ಜನ ಎಂದರೆ ಇಡೀ ಜಿಲ್ಲೆಯ ಜನ ಅಂತ ನೀವು ಮತ್ತೆ ತಪ್ಪಾಗಿ ಭಾವಿಸಬಾರದು. ಸೌಭಾಗ್ಯ ಬರೀ ಕೊಪ್ಪಳ ವಿಧಾನ ಸಭಾ ಕ್ಷೇತ್ರದ ಜನರಿಗೆ. ಚುನಾವಣೆ ಇರೋದು ಅಲ್ಲಿ ಮಾತ್ರ ತಾನೆ ?

ಕರಡಿ ಸಂಗಣ್ಣ ವಿರೋಧ ಪಕ್ಷದ ಶಾಸಕರಾಗಿದ್ದಾಗ ಬರೀ ದೌರ್ಭಾಗ್ಯವನ್ನೇ ಅನುಭವಿಸಿತು ಈ ಕ್ಷೇತ್ರ, ಅವರು ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡಿ ಬಿಜೆಪಿ ಸೇರುತ್ತಿದ್ದಂತೆ ಅಗೋ 150 ಕೋಟಿ ರೂಪಾಯಿಗಳ ಯೋಜನೆ ಮಂಜೂರು.

ಕೊಪ್ಪಳದ ಜನರಿಗೆ ವಾಜಪೇಯಿ ವಸತಿ ಯೋಜನೆ, ರಂಗಮಂದಿರ, ಹೈಮಾಸ್ ಬೀದಿ ದೀಪಗಳು, ಹಮಾಲರಿಗೆ ಪ್ರತ್ಯೇಕ ವಸತಿ ಯೋಜನೆ ಇನ್ನೂ ಏನೇನೋ ಬೇಕೆಂಬುದು ಸರ್ಕಾರಕ್ಕೆ ಈಗ ಜ್ಞಾನೋದಯವಾಯಿತು ನೋಡಿ. ಕೊಪ್ಪಳ ಕ್ಷೇತ್ರದ ದೇವಾಲಯಗಳ ಮೇಲೆ ಭಕ್ತಿ ಉಕ್ಕಿ ಹರಿಯುತ್ತಿದೆ. ಹಾಗಾಗಿ ಖಜಾನೆಯಿಂದ ಹುಲಗಮ್ಮ .ದೇವಾಲಯದ ಯಾತ್ರಿ ನಿವಾಸದ ನಿರ್ಮಾಣಕ್ಕೆ 1.5 ಕೋಟಿ...ಸೇರಿ ವಿವಿಧ ಇತರ ದೇವಾಲಗಳಿಗೆ ಒಟ್ಟಾರೆ 2 ಕೋಟಿ ದಾಟಿದ ಕೊಡುಗೆಗಳು...ಮರ್ದಾನ ಗೈಬ ದರ್ಗಾಕ್ಕೂ 50 ಲಕ್ಷ....

ಇಗೋ ನೋಡಿ ಸಿಂಗಲಾಟೂರು ಏತ ನೀರಾವರಿಗೂ ಕಾಲುವೆ ನಿರ್ಮಾಣದ ಯೋಜನೆಗೆ 42 ಕೋಟಿ...ಅಮ್ಮಮ್ಮ ನೀರಾವರಿ ಯೋಜನೆಗಳೂ ಚುನಾವಣೆ, ಉಪ ಚುನಾವಣೆಗಳ ಕಾಲದ ಆಟದ ಕಾಲ್ಚೆಂಡುಗಳು...

ಮೂರು ವರ್ಷಗಳ ಅವಧಿಯಲ್ಲಿ ಬಡವರಿಗೆ ಒಂದೇ ಒಂದು ಮನೆಯನ್ನೂ ಕಟ್ಟಿಕೊಡದ ಸರ್ಕಾರ ಈಗ ಕ್ಷೇತ್ರದಲ್ಲಿ 6000 ಮನೆ ಕಟ್ಟಿಸಿ ಕೊಡಲು ಹೊರಟಿದೆ ಎಂದರೆ ಮುಂದೆ ಇರುವ ಸು. ಒಂದೂವರೆ ವರ್ಷದ ಅವಧಿಯಲ್ಲಿ ಇನ್ನೂ ಒಂದೆರಡು ಸಾರಿ ಈ ಉಪ ಚುನಾವಣೆಗಳು ಬರಲಿ ಎಂದು ಜನ ಬಯಸಬೇಕು. ಆಹಾ ಬಿಜೆಪಿ ದರ್ಬಾರ್‌ನ ಸೊಗಸೇ !!

★

ಸಾವಯವ ಕೃಷಿಕನ ಮನೆ ಊಟವೂ ಗ್ರಾಮಾಭಿವೃದ್ಧಿಯ ನಾಗಲೋಟವೂ

ಕೊಪ್ಪಳ ಉಪ ಚುನಾವಣೆ ಕಾಲಕ್ಕೆ ಜನರ ಪಾಲಿಗೆ ಹರಿದು ಬಂದಿರುವ ಸೌಭಾಗ್ಯಗಳು ಮತ್ತು ಭರವಸೆಯ ಮಹಾಪೂರವನ್ನು ಅವಲೋಕಿಸಿದ ಮೇಲೆ ಬೀದರ್ ಜಿಲ್ಲೆಯ ಈ ಸಾವಯವ ಕೃಷಿಕ ಕುಟುಂಬದ ಕತೆ ಕೇಳಲೇಬೇಕು.

ರಾಜ್ಯದ ಬಿಜೆಪಿ ದರ್ಬಾರ್‌ನಲ್ಲಿ ಸಾವಯವ ಕೃಷಿಗೆ, ಕೃಷಿಕರಿಗೆ ಸಿಗುತ್ತಿರುವ ಮರ್ಯಾದೆ ನಿಮಗೆ ಗೊತ್ತೆ ಇದೆ. ರಾಜ್ಯದ ಮತ್ತು ದೇಶದ ಕೃಷಿ ರಂಗದ ಸಕಲ ಸಮಸ್ಯೆಗಳಿಗೂ ಸಾವಯವ ಕೃಷಿಯೇ ಪರಿಹಾರ ಅಂತ ನಮ್ಮ ಯಡಿಯೂರಪ್ಪನವರು ಬೊಬ್ಬೆ ಹೊಡೆದು ಪ್ರತಿ ತಿಂಗಳೂ ಒಂದು ದಿನ ರಾಜ್ಯದ ಸಾವಯವ ಕೃಷಿಕರ ಮನೆಯಲ್ಲಿ ಉಳಿದು ಹೋಗದಸ್ತಾಗಿ

ಪುಟ 14ಕ್ಕೆ

'ಮಠ' ಕ್ಕೆ ದಾರಿಮಾಡಲು 189 ಕೋಟಿ ರೂಪಾಯಿ

ಯಡಿಯೂರಪ್ಪನವರ ಕಾಲದ ಬಿಜೆಪಿ ದರ್ಬಾರ್ ಇದು. (ಈಗಲೂ ಅವರದೇ ಅನ್ನಿ.) ರಾಜ್ಯದ ಅದರಲ್ಲೂ ದಕ್ಷಿಣ ಕರ್ನಾಟಕದ ವಿವಿಧ ಮಠಗಳಿಗೆ ಸಂಪರ್ಕ ಕಲ್ಪಿಸುವ, ಮಠಗಳ ಸುತ್ತ ಮುತ್ತಲ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಯಡಿಯೂರಪ್ಪನವರು ಎರಡು ವರ್ಷಗಳಲ್ಲಿ (2008–2010) ರಾಜ್ಯ ಸರ್ಕಾರದ ಖಜಾನೆಯಿಂದ ಧಾರೆ ಎರೆದಿರುವ ಹಣ ಎಷ್ಟು ಗೊತ್ತೆ ? ಕೇವಲ 189 ಕೋಟಿ ರೂಪಾಯಿಗಳು. ಹೇಗೂ ಇದು ಅಭಿವೃದ್ಧಿಪರ ಸರ್ಕಾರ ಆದ್ದರಿಂದ ಯಾರೂ ಈ ಬಗ್ಗೆ ತಕರಾರು ಮಾಡುವಂತೆಯೇ ಇಲ್ಲ ಬಿಡಿ. ಬಲು ಸೊಗಸಾಗಿ ನಡೆದಿದೆ ಅಭಿವೃದ್ಧಿ.

ಇದರಲ್ಲಿ ಗಮನಿಸಬೇಕಾದ ಎಷ್ಟೋ ಮುಖ್ಯ ಸಂಗತಿಗಳಿವೆ. ನಿಜಕ್ಕೂ ಒಂದು ಜನಪರವಾದ ಯೋಜನೆಯಾದರೆ ಅದು ಅಂಗೀಕರವಾಗಲು ಎಷ್ಟೋಂದು ಕ್ರಮಗಳು. ಅಂದಾಜು ಪಟ್ಟಿ ತಯಾರಿಕೆ, ಚರ್ಚೆ, ಹಣಕಾಸು ಇಲಾಖೆ ಅಕ್ಷೇಪ, ಸರ್ಕಾರಕ್ಕೆ ಇಚ್ಚಾಶಕ್ತಿ, ಮನಸ್ಸು ಇದ್ದರೆ ಸಮರ್ಥನೆ, ಅಂಗೀಕಾರ, ಆಮೇಲೆ ಇಲ್ಲವೂ ನೆಟ್ಟಗಿದ್ದರೆ ಅಷ್ಟಿಷ್ಟು ಜಾರಿ.

ಈ ಮಠಾಭಿವೃದ್ಧಿಯ ಕಾಮಗಾರಿಗಳಲ್ಲಿ ಆಗಿರುವುದನ್ನು ನೋಡಿ. ಯೋಜನೆಯ ಅಂದಾಜುಪಟ್ಟಿ ತಯಾರಿಸಿರುವುದು ಇಲಾಖೆಯ ಸಂಬಂಧಿಸಿದ ಅಧಿಕಾರಿಗಳಲ್ಲ. ಸ್ವತಃ ಮಠಗಳು. ಯೋಜನೆಯ ಗುತ್ತಿಗೆ ಯಾರಿಗೆ ಹೋಗಬೇಕು....ಅದಕ್ಕೆ ಕ್ರಮವೇನು ಉಹುಂ ಕ್ರಮ ಗಿಮ ಎಲ್ಲ ಇಲ್ಲ. ಇದು ಮಠಾಭಿವೃದ್ಧಿಯ ಕೈಂಕರ್ಯವಲ್ಲವೇ ? ಮಠಾಧೀಶರು ಯಾರ ಮೇಲೆ ಕೃಪೆ ತೋರುವರೋ ಅವರ ಜೋಳಿಗೆಗೆ ಯೋಜನೆಯ ಗುತ್ತಿಗೆ.

ಇದಕ್ಕೆಲ್ಲ ಹಣಕಾಸು ಇಲಾಖೆ ಆಕ್ಷೇಪ ಎತ್ತಿದರೆ...ಉಹುಂ ಜಗ್ಗುವುದಿಲ್ಲ. ಇದು ಮಠಾಧೀಶರಿಗೋಸ್ಕರವೇ ಇರುವ, ಮಠಾಧೀಶರಿಂದಲೇ ನಡೆಯುವ, ಮಠಾಧೀಶಪರ, ಮಠಪರ ಸರ್ಕಾರ. ಆದ್ದರಿಂದ ಸ್ವತಃ ಮುಖ್ಯಮಂತ್ರಿಗಳೇ ಹಣಕಾಸು ಇಲಾಖೆಯ ಬಾಯಿ ಮುಚ್ಚಿಸಿ ಹಣ ಬಿಡುಗಡೆ ಮಾಡಿಸುತ್ತಾರೆ.

ಮಠಗಳ ಸುತ್ತಮುತ್ತಲ ರಸ್ತೆಗಳು ಚೆನ್ನಾಗಿರಬೇಕಾದದ್ದು ಬಹಳ ಮುಖ್ಯ ಬಿಡಿ. ಮೊನ್ನೇ ಏನಾಯ್ತು ನೋಡಿ. ನಮ್ಮ ಪುಟ್ಟಪರ್ತಿ ಸಾಯಿ ಬಾಬಾರವರು ಕಾಲವಾದ ಮೇಲೆ ಅಲ್ಲಿ ಸರಿಯಾದ ರಸ್ತೆ ಇದ್ದುದರಿಂದಲೇ ಲಾರಿ, ಕಾರು, ಜೀಪು ಯಾವುದು ಬೇಕೋ ಅದರಲ್ಲಿ ಹೇರಳವಾದ ಹಣದ ರಾಶಿ, ದುಡ್ಡು, ಕಾಸು, ನಗ, ನಾಣ್ಯ ಚಿನ್ನ, ಬೆಳ್ಳಿ, ವಜ್ರವೈಡೂರ್ಯ ಎಲ್ಲವನ್ನು ಬೇಗ ಬೇಗ ಸಾಗಿಸಲು ಸಾಧ್ಯವಾಯಿತು. ಇಲ್ಲದಿದ್ದರೆ ಪಾಪ ಏನೇನು ಅನಾಹುತ ಆಗುತ್ತಿತ್ತೋ ಏನೋ !! ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರವೇ. ನಮ್ಮ ರಾಜ್ಯದ ಹಲವು ಮಠಗಳೂ ಇವೇ ಕೆಟಾಗರಿಯಲ್ಲಿರುವಾಗ ರಸ್ತೆ, ಒಳ್ಳೆಯ ರಸ್ತೆ, ಖಂಡಿತ ಬೇಕೇ ಬೇಕಲ್ಲವೇ?

ಕುರ್ಚಿ ಹಿಡಿದವರಿಗೆ ಕಷ್ಟ ಬಂದಾಗಲೆಲ್ಲ ಹೋಗಿ ಮಠಪತಿಗಳ ಕಾಲಿಗೆರಗಿ 'ಆಶೀರ್ವಾದ' ಪಡೆದುಕೊಳ್ಳಲು ಕೂಡ ಮಠಗಳಿಗೆ ಸಂಪರ್ಕ ಕಲ್ಪಿಸುವ ಸುವ್ಯವಸ್ಥಿತವಾದ ರಸ್ತೆಗಳು ಬೇಕೇ ಬೇಕಲ್ಲವೇ ?

ಕೋಮುಹಿಂಸೆ ತಡೆ....

ಪುಟ 9 ರಿಂದ

ಗಮನದಲ್ಲಿಟ್ಟುಕೊಳ್ಳಬೇಕು.

ಉ). ತಾರತಮ್ಯ: ಭಾರತದ ಅತಿ ದೊಡ್ಡ ಅಲ್ಪಸಂಖ್ಯಾತ ಸಮುದಾಯವಾದ ಮುಸ್ಲಿಮರು ವಂಚನೆ ಮತ್ತು ತಾರತಮ್ಯವನ್ನು ಅನುಭವಿಸುತ್ತಿದ್ದಾರೆ. ನ್ಯಾಯಮೂರ್ತಿ ರಾಜೇಂದ್ರ ಸಾಚಾರ್ ಸಮಿತಿ ಈ ಅಂಶವನ್ನು ಸಮಗ್ರವಾಗಿ ಬಹಿರಂಗಪಡಿಸಿದೆ. ಶಿಕ್ಷಣ, ಉದ್ಯೋಗ ಮತ್ತು ಇತರೆ ಅಭಿವೃದ್ಧಿಯ ಸವಲತ್ತುಗಳನ್ನು ಪಡೆಯುವ ವಿಚಾರದಲ್ಲಿ ಮುಸ್ಲಿಮರು ಮುಖ್ಯವಾಹಿನಿ ಜನರಿಗಿಂತ ತುಂಬಾ ಹಿಂದೆ ಬಿದ್ದಿದ್ದಾರೆ. ಸಮಾನ ಅವಕಾಶ ಆಯೋಗ ರಚನೆ ಸೇರಿದಂತೆ ಸಾಚಾರ್ ಆಯೋಗ ಮಾಡಿದ ಬಹುತೇಕ ಶಿಫಾರಸುಗಳು ಜಾರಿಯಾದೇ ಉಳಿದಿವೆ. ಅಭಿವೃದ್ಧಿ ಮತ್ತು ಸಾಮಾಜಿಕ ರಂಗದಲ್ಲಿ ಸೂಕ್ತ ಪಾಲು ದೊರಕಿಸುವ ದೃಷ್ಟಿಯಿಂದ ಅಲ್ಪ ಸಂಖ್ಯಾತರಿಗಾಗಿ ಉಪ-ಯೋಜನೆ ರೂಪಿಸ ಬೇಕೆಂದು ಸಿ.ಪಿ.ಐ. (ಎಂ) ಪ್ರತಿಪಾದಿಸುತ್ತಾ ಬಂದಿದೆ.

ಬುಡಕಟ್ಟು ಜನರಂತೂ ತೀರಾ ಅನ್ಯಾಯಕ್ಕೆ ಒಳಗಾಗಿದ್ದಾರೆ. ಗಂಭೀರವಾದ ಒಂದು ವಿಚಾರದತ್ತ ಮಾತ್ರವೇ ನಾವು ಇಲ್ಲಿ ಗಮನಸೆಳೆಯುತ್ತೇವೆ. ಸ್ವತಃ ಸರಕಾರದ ನೀತಿಯಿಂದಲೇ ಈ ಪರಿಸ್ಥಿತಿ ಉದ್ಭವಿಸಿದೆ. ಸರಕಾರದ ಗಣಿಗಾರಿಕೆ ನೀತಿ ಬುಡಕಟ್ಟು ಜನರನ್ನು ದೊಡ್ಡ ಪ್ರಮಾಣದಲ್ಲಿ ಅವರ ಜಮೀನಿನಿಂದ ಒಕ್ಕಲೆಬ್ಬಿಸುವಂತೆ ಮಾಡಿದೆ. ನಿರಾಶ್ರಿತರಾಗುವಂತೆ ಮಾಡಿದೆ. ಗಣಿಗಾರಿಕೆ ನಡೆಸಲು ಕಾರ್ಪೊರೇಟ್ ವಲಯಕ್ಕೆ ಮುಕ್ತ ಅವಕಾಶ ಕಲ್ಪಿಸಿರುವುದು ಬುಡಕಟ್ಟು ಜನತೆಯ ಜೀವನದ ಮೇಲೆ ಕಠೋರ ದಾಳಿಗೆ ರಹದಾರಿಯಾದಂತಾಗಿದೆ.

ಊ). ನಾಗರಿಕ ಗಲಭೆಗಳು: ನಾಗರಿಕ ಗಲಭೆಗಳನ್ನು ನಿಭಾಯಿಸಲು ಸರಕಾರ ವಸಾಹತು ಆಡಳಿತದ ನಿಯಮಗಳನ್ನೇ ಪಾಲಿಸುತ್ತಿದೆ. ಕಾಶ್ಮೀರ ಕಣಿವೆಯಲ್ಲಿ 2010ರಲ್ಲಿ ನಡೆದ ನಾಗರಿಕ ಅಶಾಂತಿಯನ್ನು ನಿಭಾಯಿಸಿದ ರೀತಿಯೇ ಇದಕ್ಕೆ ಸಾಕ್ಷಿ. ಆ ವರ್ಷದ ಬೇಸಿಗೆ ದಿನಗಳಲ್ಲಿ ಕಣಿವೆಯಾದ್ಯಂತ ಪೊಲೀಸ್ ಮತ್ತು ಭದ್ರತಾ ಪಡೆಗಳ ಗುಂಡಿಗೆ 120ಕ್ಕೂ ಹೆಚ್ಚು ಯುವಜನರು ಬಲಿಯಾದರು. ಕಲ್ಲು ತೂರಾಟದಲ್ಲಿ ತೊಡಗಿದ ಯುವಕರನ್ನು 'ಕೊಲ್ಲುವ ಅಥವಾ ಅಂಗವೂನ'ರನ್ನಾಗಿ ಮಾಡುವ ವಿಧಾನವನ್ನು ಅನುಸರಿಸಲಾಯಿತು. ದಂಗೆಯಂಥ ಈ ರೀತಿಯ ಸಾಮೂಹಿಕ ನಾಗರಿಕ ಅಶಾಂತಿಯನ್ನು ನಿಭಾಯಿಸುವಲ್ಲಿ ಅಮಾನವೀಯ ಧೋರಣೆ ಅಡಕವಾಗಿದೆ. ಸಾಮೂಹಿಕ ಪ್ರತಿಭಟನೆಗಳು ಮತ್ತು ನಾಗರಿಕ ಅಶಾಂತಿ ಪ್ರಕರಣಗಳನ್ನು ನಿಭಾಯಿಸುವ ದಿಸೆಯಲ್ಲಿ ಪೊಲೀಸರನ್ನು ತರಬೇತುಗೊಳಿಸುವ ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಸಾಮೂಹಿಕ ಪ್ರತಿಭಟನೆಗಳು ಮತ್ತು ಪ್ರದರ್ಶನಗಳು ತಾಳ್ಮೆಕಳೆದುಕೊಳ್ಳುತ್ತಿರುವುದನ್ನೂ ನಾವು ಹೆಚ್ಚೆಚ್ಚಾಗಿ ಕಾಣುತ್ತಿದ್ದೇವೆ. ಜನರು ಒಂದೆಡೆ ಸೇರುವ ಹಕ್ಕನ್ನು ಮೊಟಕುಗೊಳಿಸಲಾಗುತ್ತಿದೆ. ಜನರು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಹಾಗೂ ತಮ್ಮ ಬೇಡಿಕೆಗಳನ್ನು ಮಂಡಿಸಲು ಒಂದೆಡೆ ಸೇರುವ ಸ್ಥಳಗಳೂ ಒಂದರ ಹಿಂದೊಂದು ನಗರದಲ್ಲಿ ಮಾಯವಾಗುತ್ತಿವೆ. ಜನರು ಒಂದೆಡೆ ಸೇರುವ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಆಡಳಿತಗಳು ಮತ್ತು ಕೆಲವೊಮ್ಮೆ ನ್ಯಾಯಾಂಗದ ವೇದಿಕೆಗಳ ಮೂಲಕ ಕಾಯಂ ಆಗಿ ನಿಷೇಧಿಸಲಾಗುತ್ತಿದೆ. ದೇಶದ ರಾಜಧಾನಿಯಲ್ಲಿಯೂ ಭ್ರಷ್ಟಾಚಾರ ವಿರೋಧಿ ಶಾಂತಿಯುತ ಪ್ರತಿಭಟನೆಗಳನ್ನು ಸದೆಬಡಿಯಲು ಯತ್ನಿಸಲಾಯಿತು ಎನ್ನುವುದನ್ನು ಇತ್ತೀಚಿನ ದಿನಗಳಲ್ಲಿ ನಾವು ನೋಡಿದ್ದೇವೆ.

ಋ). ಯುವಜನತೆಯ ವೈಚಾರೀಕರಣ (ಸುಧಾರಣೆ): ಯುವಜನತೆಯನ್ನು ವಿಚಾರ ಪೂರ್ಣಗೊಳಿಸುವುದರಿಂದ ಅವರು ಪ್ರಗತಿಪರವಾದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಯ ದೃಷ್ಟಿಕೋನವನ್ನು ಬೆಳೆಸಿಕೊಂಡರೆ ಅದು ಉತ್ತಮ ಬೆಳವಣಿಗೆಯೇ ಸರಿ. ಆದರೆ ಅಂಥ ವಿದ್ಯಮಾನದ ಅನುಪಸ್ಥಿತಿಯಲ್ಲಿ ಯುವಜನರನ್ನು ಧಾರ್ಮಿಕ, ಕೋಮುವಾದಿ ಹಾಗೂ ಪ್ರತ್ಯೇಕತಾವಾದಿ ಅಜೆಂಡಾಗಳ ಮೇಲೆ ಸುಧಾರಣೆ ಮಾಡಲು ಹೊರಟರೆ ಅದರಿಂದ ತೀರಾ ಅಪಾಯವಾಗುತ್ತದೆ ಹಾಗೂ ಜಾತ್ಯತೀತ ಮತ್ತು ಸೌಹಾರ್ದಯುತ ಸಮಾಜ ರಚನೆಗೆ ಭಂಗ ಉಂಟಾಗುತ್ತದೆ. ಯುವಜನತೆ ಯಾಕೆ ಪ್ರತ್ಯೇಕಿತರಾಗಿದ್ದಾರೆ ಹಾಗೂ ಕೆಲವು ಉಗ್ರಗಾಮಿ ವೇದಿಕೆಗಳತ್ತ ಅವರು ಯಾಕೆ ಆಕರ್ಷಿತ ರಾಗುತ್ತಿದ್ದಾರೆ ಎನ್ನುವುದರ ಮೂಲವನ್ನು ನಾವು ಮೊದಲು ಶೋಧಿಸಬೇಕು. ಸಾಮಾಜಿಕ-ಆರ್ಥಿಕ ಅಸಮಾನತೆಗಳ ಸಮಾಜ ಹಾಗೂ ಯುವಜನತೆಯ ಮೂಲ ಅಗತ್ಯಗಳನ್ನು ಪೂರೈಸದಿರುವ ಒಂದು ಸಮಾಜದಿಂದಾಗಿ ಈ ಪ್ರವೃತ್ತಿ ಹುಟ್ಟಿಕೊಂಡಿದೆ. ನಿರುದ್ಯೋಗವೆನ್ನುವುದು ಯುವಜನತೆಯ ಭವಿಷ್ಯಕ್ಕೆ ಮಾರಕವಾಗಿದೆ. ರಾಷ್ಟ್ರೀಯ ಸ್ಯಾಂಪಲ್ ಸರ್ವೆ (ಎನ್‌ಎಸ್‌ಎಸ್) ಇತ್ತೀಚಿನ, ಅಂದರೆ 2009-10ನೇ ಸಾಲಿನ ಅಂಕೆಸಂಖ್ಯೆಗಳು ನಿರುದ್ಯೋಗ ಸಮಸ್ಯೆಯ ಅಗಾಧತೆ ಮೇಲೆ ಬೆಳಕು ಚೆಲ್ಲುತ್ತದೆ. 2000-2005 ರಲ್ಲಿ ಶೇಕಡ 2.7ರಷ್ಟಿದ್ದ ಉದ್ಯೋಗ ಬೆಳವಣಿಗೆ ವಾರ್ಷಿಕ ಪ್ರಮಾಣ 2005-2010ರಲ್ಲಿ ಕೇವಲ ಶೇಕಡ 0.8ಕ್ಕೆ ಕುಸಿದಿದೆ. ಸರಕಾರಿ ವಲಯದಲ್ಲಿ ಉದ್ಯೋಗ ಕಡಿತ ಮಾಡುವುದು ಕೇಂದ್ರ ಸರಕಾರದ ನೀತಿಯಾಗಿದೆ. 'ಮಾರುಕಟ್ಟೆಯೇ ಉದ್ಯೋಗ ಸೃಷ್ಟಿ ಮಾಡಲಿ', ಉದ್ಯೋಗ ಸೃಷ್ಟಿಯಲ್ಲಿ ಸರಕಾರದ ಪಾತ್ರ ಏನೂ ಇಲ್ಲ ಎನ್ನುವುದು ಸರಕಾರದ ಸಿದ್ಧಾಂತ ಎನ್ನುವಂತೆ ಕಾಣುತ್ತದೆ. ನಿರುದ್ಯೋಗದಿಂದ ತತ್ತರಗೊಂಡ ಹಾಗೂ ಸಾಮಾಜಿಕ ನ್ಯಾಯದಿಂದ ವಂಚಿತರಾದ ಕೆಲವು ಹತಾಶ ಯುವಜನರು ಕೋಮುವಾದ, ಪ್ರತ್ಯೇಕತಾವಾದ, ಜಾತಿ ಮತ್ತು ಪ್ರಾದೇಶಿಕವಾದದಂಥ ಛಿದ್ರಕಾರಿ ಘೋಷಣೆಗಳಿಗೆ ಬಲಿಬೀಳುತ್ತಿದ್ದಾರೆ.

ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ಯಲ್ಲಿ ತಮಗೂ ಪಾಲಿದೆ ಎಂಬ ಭರವಸೆಯನ್ನು ನಮ್ಮ ದೇಶದ ಯುವಜನತೆಗೆ ನೀಡಬೇಕಾಗಿರು ವುದು ನಮ್ಮ ಮುಂದಿರುವ ಸವಾಲಾಗಿದೆ. ಉತ್ಪಾದನೆಗೆ ಸಹಕಾರಿಯಾದ ಉದ್ಯೋಗ ದೊರಕಿಸುವ ಅವಕಾಶ ಕಲ್ಪಿಸಬೇಕಾಗಿದೆ. ಸಾಮಾಜಿಕ ನ್ಯಾಯ ಹಾಗೂ ಘನತೆಯಿಂದ ತಮ್ಮ ಜೀವನವನ್ನು ಸಾಗಿಸಲು ತಮಗೆ ಸಾಧ್ಯ ಎಂಬ ವಿಶ್ವಾಸವನ್ನು ಅವರಲ್ಲಿ ತುಂಬಬೇಕಾಗಿದೆ. ದುರಾಸೆ, ಚಮಚಾ ಬಂಡವಾಳವಾದ, ರಾಷ್ಟ್ರೀಯ ಸಂಪತ್ತಿನ ಲೂಟಿ ಮತ್ತು ಭ್ರಷ್ಟಾಚಾರವನ್ನು ಪೋಷಿಸುವ ಪ್ರಸಕ್ತ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸು ವುದರಿಂದ ಇದನ್ನು ಸಾಧಿಸಬಹು ದಾಗಿದೆ. ಈ ಬದಲಾವಣೆ ಮತ್ತು ವೈಚಾರಿಕ ದೃಷ್ಟಿಕೋನಕ್ಕೆ ದೇಶದ ಯುವ ಜನತೆ ನಿಶ್ಚಯವಾಗಿಯೂ ಪ್ರತಿಸ್ಪಂದಿಸುವರು. ●

ಭ್ರಷ್ಟಾಚಾರದ ವಿರುದ್ಧ ಹೋರಾಟದ

ಪುಟ 7 ರಿಂದ

ಅವರ ಪ್ರಕಟಣೆ.

ಆರೆಸ್ಸೆಸ್/ಬಿಜೆಪಿಯ ಆಂತರಿಕ ಕಿತ್ತಾಟ ಅದರ ಆಂತರಿಕ ವಿಷಯ. ಆದರೆ ಇದು 'ಮದುವೆಯೂ ಆಗಿರದ, ಮನೆಯೂ ಇಲ್ಲದ ವ್ಯಕ್ತಿಯೊಬ್ಬ ತನ್ನ ಮಗನ ಹೆಸರು ಘೋಷಿಸಿದ' ಎಂಬ ಒಂದು ತೆಲುಗು ಗಾದೆಯನ್ನು ನೆನಪಿಸುತ್ತದೆ. ಸದ್ಯಕ್ಕೆ ಚುನಾವಣೆಯೇನೂ ಇಲ್ಲ, ಬಿಜೆಪಿಗೆ ಭಾರೀ ಬೆಂಬಲ ಹೆಚ್ಚಳವಾಗಿದೆ ಎಂಬ ಸಂಕೇತಗಳೂ ಇಲ್ಲ. ಆದರೂ ಈ ಹುಚ್ಚು ಸ್ಪರ್ಧೆ.

ಶ್ರೀಯುತ ಅಡ್ವಾಣಿಯವರ ಯಾತ್ರೆಗೆ ಹಿಂದಿರುಗೋಣ. ಇದು ಭ್ರಷ್ಟಾಚಾರದ ವಿರುದ್ಧ ಎಂದು ಅವರು ಸಾರಿದ್ದಾರೆ. ಅಣ್ಣಾ ಹಜಾರೆಯವರ ಉಪವಾಸದಿಂದಾಗಿ ಭ್ರಷ್ಟಾಚಾರದ ವಿರುದ್ಧ ವ್ಯಾಪಕವಾಗಿ ಉದ್ದೀಪನಗೊಂಡಿರುವ ಜನರ ಭಾವನೆಗಳ ಪ್ರಯೋಜನ ಪಡೆಯುವ ಭರದಲ್ಲಿ, ಭ್ರಷ್ಟಾಚಾರ-ವಿರೋಧಿ ಆಂದೋಲನದ ಹಸ್ತಾಂತರಣ ಸಾಧ್ಯ ಎಂದು ಶ್ರೀಯುತ ಅಡ್ವಾಣಿ ನಂಬಿದಂತಿದೆ. ಶ್ರೀಯುತ ಅಡ್ವಾಣಿ ಮತ್ತು ಬಿಜೆಪಿ ತಮ್ಮೊಳಗೇ ಇಣಿಕಿ ನೋಡುವುದೊಳ್ಳೆಯದು. ಶ್ರೀಯುತ ಅಡ್ವಾಣಿ ಯಾತ್ರೆಯ ಪ್ರಕಟಣೆ ಮಾಡುತ್ತಿದ್ದಂತೆಯೇ ಛತ್ತೀಸಗಢದ ಲೋಕಾಯುಕ್ತರು ರಾಜ್ಯದ ರಮಣಸಿಂಗ್ ನೇತೃತ್ವದ ಬಿಜೆಪಿ ಸರಕಾರದ ಪ್ರತಿಯೊಂದು ಇಲಾಖೆಯಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ, ಭ್ರಷ್ಟ ಅಧಿಕಾರಿಗಳು 'ಕೊಳದಲ್ಲಿ ಹೆಚ್ಚೆಚ್ಚು ನೀರು ಕುಡಿಯಲು ಸಾಯುತ್ತಿರುವ ಮೀನುಗಳು' ಎಂದು ಕಟುವಾದ ಆರೋಪ ಮಾಡಿದ್ದಾರೆ. ಇದಕ್ಕೆ ಕೆಲವೇ ದಿನಗಳ ಮೊದಲು ಕರ್ನಾಟಕದ ಲೋಕಾಯುಕ್ತರು ಅಲ್ಲಿಯ ಬಿಜೆಪಿ ಸರಕಾರದ ಮೇಲೆ ತೀವ್ರ ಭ್ರಷ್ಟಾಚಾರದ ಆರೋಪ ಹಾಕಿದ್ದರು. ಬಹಳಷ್ಟು ಪ್ರತಿರೋಧದ ನಂತರ, ಅರೆ ಮನಸ್ಸಿನಿಂದಲೇ ಮುಖ್ಯಮಂತ್ರಿ ಯೆಡ್ಯೂರಪ್ಪ ರಾಜೀನಾಮೆ ಕೊಡುವಂತೆ ಬಿಜೆಪಿ ಕೇಳಲೇಬೇಕಾಗಿ ಬಂದಿತ್ತು. ಇದರ ಬೆನ್ನ ಹಿಂದೆಯೇ ವ್ಯಾಪಕ ಅಕ್ರಮ ಗಣಿಗಾರಿಕೆಯ ಪ್ರಶ್ನೆಯ ಮೇಲೆ ಬಿಜೆಪಿ ಮಂತ್ರಿಮಂಡಲದಲ್ಲಿದ್ದ ರೆಡ್ಡಿ ಸೋದರರ ಬಂಧನವಾಗಿದೆ. ಉತ್ತರಾಖಂಡದಲ್ಲಿ ಭ್ರಷ್ಟಾಚಾರದ ಆಪಾದನೆಗಳು ಅಲ್ಲಿಯ ಬಿಜೆಪಿ ಸರಕಾರವನ್ನು ನುಂಗಿ ಹಾಕುವ ಮೊದಲು ಬಿಜೆಪಿ ಅವಸರದಲ್ಲಿ ಮುಖ್ಯಮಂತ್ರಿಯನ್ನು ಬದಲಿಸಿದೆ. ಇದೀಗ ಭ್ರಷ್ಟಾಚಾರ ಕುರಿತಂತೆ ಬಿಜೆಪಿಯ ಸಾಧನೆಗಳು!

ಅಂದು ದುರಂತ, ಇಂದು ಪ್ರಹಸನ


ಶ್ರೀಯುತ ಅಡ್ವಾಣಿಯವರ ಯಾತ್ರೆ ವಾಜಪೇಯಿ ಸರಕಾರವನ್ನು ನಡುಗಿಸಿದ ಹಗರಣಗಳ ಸರಣಿಯನ್ನು ದೇಶ ಮತ್ತೆ ನೆನಪಿಸಿಕೊಳ್ಳುವಂತೆ ಮಾಡುವುದಂತೂ ಖಂಡಿತ. ಟೆಲಿಕಾಂ ಹಗರಣ, ಸಕ್ಕರೆ ಹಗರಣ, ಯುಟಿಐ ಅಧ್ವಾನ, ಖೇತನ್ ಪಾರೇಖ್ ಶೇರು ಮಾರುಕಟ್ಟೆ ಹಗರಣ, ತೆಹಲ್ಕಾ ಬಯಲಿಗೆಳೆದ ರಕ್ಷಣಾ ವ್ಯವಹಾರಗಳಲ್ಲಿನ ಹಗರಣಗಳು, ಶವಪೆಟ್ಟಿಗೆ ಹಗರಣ, ಬೃಹತ್ ಪೆಟ್ರೋ ಹಗರಣ, ಭೂಹಗರಣ ಇತ್ಯಾದಿ, ಇತ್ಯಾದಿ. ಈ ಹಗರಣಗಳಷ್ಟೇ ಅಲ್ಲ, ದೊಡ್ಡ ಪ್ರಮಾಣದಲ್ಲಿ ದೇಶದಲ್ಲಿನ ಕಪ್ಪು ಹಣವನ್ನು ಬಿಳಿಮಾಡಲು, ವಿದೇಶಗಳಿಗೆ ವರ್ಗಾಯಿಸಲು ಅವಕಾಶ ಕಲ್ಪಿಸಿದ ಹಣಕಾಸು ವ್ಯವಹಾರಗಳಿಗೆ ಮಾರಿಶಸ್ ಮಾರ್ಗವನ್ನು ತೆರೆದುಕೊಟ್ಟ ಕೀರ್ತಿ ಕೂಡ ಆ ಬಿಜೆಪಿ ಸರಕಾರಕ್ಕೇ ಸಲ್ಲುತ್ತದೆ.

ದೇಶ ಮತ್ತು ಜನತೆ ಶ್ರೀಯುತ ಅಡ್ವಾಣಿಯವರ ಭ್ರಷ್ಟಾಚಾರ ಕುರಿತ ರಥಯಾತ್ರೆಯ ಪ್ರಹಸನವನ್ನು ಕಾಣುವುದು ಖಂಡಿತ. ಶ್ರೀಯುತ ಅಡ್ವಾಣಿ ಮೊದಲ ಬಾರಿ ಯಾತ್ರೆ ಕೈಗೊಂಡಾಗ ಅದೊಂದು ದುರಂತವಾಯಿತು. ಎರಡನೆಯದ್ದು ಪ್ರಹಸನವಾಯಿತು. ಪ್ರಸ್ತುತ ಯಾತ್ರೆ ಆರನೇ ಮಟ್ಟದ ಪ್ರಹಸನವಾಗಲಿದೆ.

ಭ್ರಷ್ಟಾಚಾರದ ವಿರುದ್ಧ ಹೋರಾಡುವ ಮುಸುಕಿನಲ್ಲಿ ಕೋಮುವಾದೀ ಧ್ರುವೀಕರಣ ತೀಕ್ಷ್ಣಗೊಳ್ಳುವ ಪರಿಸ್ಥಿತಿಯನ್ನು ದೇಶ ಮತ್ತೆ ಕಾಣಬಾರದು. ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಹಂದರವನ್ನು ಮತ್ತೊಮ್ಮೆ ಹಾಳುಗೆಡವಲು, ಅಸ್ತವ್ಯಸ್ತಗೊಳಿಸಲು ಬಿಡಬಾರದು, ದೇಶ ಮತ್ತು ಜನತೆ ಅದಕ್ಕೆ ಸಿದ್ಧರಾಗಬೇಕು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸರಕಾರದ ವಿವಿಧ ಚಟುವಟಿಕೆಗಳ ಲೆಕ್ಕ ಪರಿಶೋಧನೆ ಯುಪಿಎ ಸರಕಾರದ ದುರಾಡಳಿತದ ಹೊಸ-ಹೊಸ ಆಯಾಮಗಳನ್ನು ಅನಾವರಣಗೊಳಿಸುತ್ತಿದೆ. ಬಹುಶಃ ಸಿಎಜಿ ಎಂದರೇ ಯುಪಿಎ-2 ಸರಕಾರಕ್ಕೆ ನಡುಕ ಹುಟ್ಟುವಂತಾಗುತ್ತಿದೆ. ಈ ವಾರ ದೇಶದ ಮುಂದೆ ಮೂರು ಸಿಎಜಿ ವರದಿಗಳು ಬಂದಿವೆ. ಅದರಲ್ಲಿ ಎರಡು ಯುಪಿಎ ಸರಕಾರದ ವಿಮಾನಯಾನ ಇಲಾಖೆ ಮತ್ತು ಪೆಟ್ರೋಲಿಯಂ ಇಲಾಖೆಯತ್ತ ಬೊಟ್ಟು ಮಾಡಿವೆ, ಮತ್ತೊಂದು ನಮ್ಮ ರಕ್ಷಣಾ ಪಡೆಗಳಲ್ಲಿ, ವಿಶೇಷವಾಗಿ ವಿಮಾನ ಪಡೆ ಮತ್ತು ನೌಕಾಪಡೆಗಳಲ್ಲಿ ಖರ್ಚಿನ ನಿರ್ವಹಣೆ ಬಹಳ ಕೆಟ್ಟದಾಗಿದೆ, ವರ್ಷದ ಕೊನೆಯ ಮೂರು ತಿಂಗಳಲ್ಲಿ ವಿಪರೀತ ಬಂಡವಾಳ ಖರ್ಚುಗಳು ನೆಗೆತ ಕಾಣುತ್ತವೆ ಎಂದು ಟೀಕಿಸಿದೆ. ಈ ನಡುವೆ ಯುಪಿಎ ಸರಕಾರದ ಎಡಬಿಡಂಗಿ ಧೋರಣೆಯ ಫಲವಾಗಿ ತೆಲಂಗಾಣ ಪ್ರಶ್ನೆಯ ಮೇಲೆ ಆಂಧ್ರಪ್ರದೇಶದಲ್ಲಿ ಜನಜೀವನ ಅಸ್ತವ್ಯಸ್ತಗೊಳ್ಳುತ್ತಿದೆ. ಅತ್ತ ಕಪ್ಪು ಹಣ ಪೇರಿಸಿಟ್ಟವರಿಗೆ 'ಕ್ಷಮಾದಾನ'ದ ಮತ್ತೊಂದು ಯೋಜನೆಯ ಬಗ್ಗೆ ಯುಪಿಎ-2 ಸರಕಾರ ಉದ್ಯಮಿಗಳ ಕೋರಿಕೆಯ ಮೇರೆಗೆ 'ಗಂಭೀರವಾಗಿ' ಯೋಚಿಸುತ್ತಿದೆಯಂತೆ. ಸುಮಾರು ಮೂರು ವರ್ಷಗಳ ನಂತರ ಕೊನೆಗೂ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ನಡೆದಿದೆ. ಆದರೆ ರಾಷ್ಟ್ರೀಯ ಸಮಗ್ರತೆ ಮತ್ತು ಕೋಮುವಾದದ ಸಮಸ್ಯೆಯನ್ನು ಎದುರಿಸುವ ಸಾಮರ್ಥ್ಯ ಅದರಲ್ಲಿಲ್ಲ ಎಂಬ ಟೀಕೆಗೆ ಉತ್ತರಿಸುವುದು ಸಾಧ್ಯವಾಗಿಲ್ಲ.



ವೇದರಾಜ ಎನ್.ಕೆ.

ಏರ್ ಇಂಡಿಯಾವನ್ನು ದುಸ್ಥಿತಿಗೆ ತಂದ ಯುಪಿಎ ಸರಕಾರ: ಸಿಎಜಿ ಟೀಕೆ

2005 ರವರೆಗೆ ಲಾಭಗಳಿಸುತ್ತಿದ್ದ ಭಾರತದ ರಾಷ್ಟ್ರೀಯ ವಿಮಾನಯಾನ ಸಂಸ್ಥೆ ಏರ್, ಇಂಡಿಯಾ 2006ರಿಂದ ನಷ್ಟ ಅನುಭವಿಸಲಾರಂಭಿಸಿದ್ದು ಅದು 20,000ಕೋಟಿ ರೂ.ಗಳಿಂದ ಈಗ 46,000 ಕೋಟಿ ರೂ.ಗಳಿಗೇರಿದೆ. ಇದಕ್ಕೆ ಯುಪಿಎ ಸರಕಾರದ ನಾಗರಿಕ ವಿಮಾನಯಾನ ಇಲಾಖೆಯೇ ಪ್ರಮುಖ ಹೊಣೆಗಾರ ಎಂದು ಕಳೆದ ವಾರ ಸಮಸತ್ತಿನಲ್ಲಿ ಮಂಡಿಸಿದ ಭಾರತದ ಮಹಾಲೆಕ್ಕ ಪರಿಶೋಧಕರ ಕಚೇರಿ(ಸಿಎಜಿ)ಯ 121 ಪುಟಗಳ ವರದಿ ಟೀಕಿಸಿದೆ.

ಏರ್ ಇಂಡಿಯಾ ವಿಮಾನಗಳನ್ನು ಖರೀದಿಸಬೇಕೆಂದು 1996ರಲ್ಲಿ ಇಟ್ಟ ಪ್ರಸ್ತಾವವನ್ನು ಮಂಜೂರು ಮಾಡಲು ಸರಕಾರಕ್ಕೆ ಎಂಟು ವರ್ಷಗಳೇ ತಗಲಿದವು. ಕೊನೆಗೂ 18+10 ವಿಮಾನಗಳ ಖರೀದಿ ಜನವರಿ 2004ರಲ್ಲಿ ಮಂಜೂರಾಯಿತು. ಇದ್ದಕ್ಕಿದ್ದಂತೆ ಈ ಸಂಖ್ಯೆಯನ್ನು 18+50 ಎಂದು ಬದಲಾಯಿಸಲಾಯಿತು. ಇದಕ್ಕೆ ಮಂಜೂರಾತಿ ಒಂದು ವರ್ಷದೊಳಗೇ ಸಿಕ್ಕಿ ಡಿಸೆಂಬರ್ 2005ರಲ್ಲಿ ಅಮೆರಿಕಾದ ಬೋಯಿಂಗ್ ಕಂಪನಿಗೆ 33197ಕೋಟಿ ರೂ.ಗಳ ಭಾರೀ ಕಾಂಟ್ರಾಕ್ಟ್ ಕೂಡ ದಕ್ಕಿತು. ಇದಾದ ಸ್ವಲ್ಪವೇ ಸಮಯದಲ್ಲಿ ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ವಿಲೀನಗೊಳಿಸಲಾಯಿತು. ಇವೆರಡು ಕ್ರಮಗಳು ಈಗ ಏರ್ ಇಂಡಿಯಾ ಭಾರೀ ಸಾಲದಲ್ಲಿ ನರಳಲು ಕಾರಣ ಎಂದು ಸಿಎಜಿಯ ವಿಶ್ಲೇಷಣೆಯಿಂದ ಕಂಡು ಬರುತ್ತಿದೆ. ಇಂಡಿಯನ್ ಏರ್ ಲೈನ್ಸ್ ವಿಷಯದಲ್ಲೂ ಇದೇ ಆಯಿತು. ವಿಮಾನಯಾನ ಇಲಾಖೆಯ ಒತ್ತಾಯದಿಂದ ಅದು ಫೆಬ್ರುವರಿ 2006ರಲ್ಲಿ ಅವಸರದಲ್ಲಿ 43 ವಿಮಾನಗಳಿಗೆ ಇನ್ನೊಂದು ಬಹುರಾಷ್ಟ್ರೀಯ ವಿಮಾನ ತಯಾರಿಕಾ ಕಂಪನಿ ಏರ್‌ಬಸ್ ಗೆ 8399 ಕೋಟಿರೂ.ಗಳ ಕಾಂಟ್ರಾಕ್ಟ್ ಕೊಡಬೇಕಾಗಿ ಬಂತು.

ಗಮನಿಸಬೇಕಾದ ಸಂಗತಿಯೆಂದರೆ ಈ ಎರಡು ಕಾಂಟ್ರಾಕ್ಟುಗಳಿಗೆ ಸಹಿ ಹಾಕಿದ ನಂತರವೇ ಈ ಎರಡು ಸಂಸ್ಥೆಗಳ ವಿಲೀನವನ್ನು ಮಾಡಲಾಯಿತು. ಇದು ಕೂಡ ಅದೇ ವಿಮಾನ ಯಾನ ಇಲಾಖೆಯ ಮುತುವರ್ಜಿಯಿಂದ. ಈ ಕಾಂಟ್ರಾಕ್ಟುಗಳನ್ನು ಈ ವಿಲೀನದ ನಂತರವಾದರೂ ಮಾಡಿದ್ದರೆ ಬಹಳಷ್ಟು ಹಣ ಉಳಿತಾಯವಾಗುತ್ತಿತ್ತು.

ದೊಡ್ಡ ಸಂಖ್ಯೆಯಲ್ಲಿ ವಿಮಾನಗಳ ಅವಸರದ ಖರೀದಿ ಆರಂಭದಿಂದಲೇ ವಿನಾಶ ತರುವ ಕ್ರಮವೆಂದಿರುವ ಸಿಎಜಿ ವರದಿ ಈ ಭಾರೀ ಖರೀದಿಯ ನಂತರವೇ ವಿಲೀನ ನಡೆಸಿರುವುದು ವಿಚಿತ್ರ, ಇಂತಹ ವಿಲೀನದ ಹಣಕಾಸು ಪ್ರಯೋಜನಗಳ ಅಸಮರ್ಪಕ ಮೌಲ್ಯಮಾಪನದಿಂದ ಕೈಗೊಂಡ ಅಕಾಲಿಕ ಕ್ರಮ ಎಂದು ಟೀಕಿಸಿದೆ.

ಇಷ್ಟೇ ಅಲ್ಲ, 2004-05ರಲ್ಲಿ ಅಂತ ರ್ರಾಷ್ಟ್ರೀಯ ವಿಮಾನಯಾನಗಳಲ್ಲಿ ದ್ವಿಪಕ್ಷೀಯ ಅರ್ಹತೆಗಳನ್ನು ಉದಾರೀಕರಿಸುವ ಧೋರಣೆ ಅಂಗೀಕರಿಸಲಾಯಿತು. ಸರಕಾರದ ನಿಲುವುಗಳಿಂದಾಗಿ ಏರ್ ಇಂಡಿಯಾಕ್ಕೆ ಇದರ ಪ್ರಯೋಜನ ದಕ್ಕಲಿಲ್ಲ, ಬದಲಾಗಿ ತೊಂದರೆಯೇ ಆಯಿತು; ಆದರೆ ಎಮಿರೇಟ್ಸ್‌ನಂತಹ ವಿದೇಶಿ ವಿಮಾನಯಾನ ಸಂಸ್ಥೆಗಳಿಗೆ ಪ್ರಯೋಜನ ಒದಗಿತು. ಇದಕ್ಕೆ ಸಂವಾದಿಯೆನ್ನುವಂತೆ ದೇಶದ ಒಳಗೂ ಸರಕಾರದ ನಿಲುವಿನಿಂದಾಗಿ ರಾಷ್ಟ್ರೀಯ ವಿಮಾನಸಂಸ್ಥೆಗಳಿಗೆ ಲಾಭಕರ ರೂಟುಗಳು ದಕ್ಕದೆ, ಜೆಟ್ ಏರ್ ವೇಸ್, ಕಿಂಗ್ ಫಿಶರ್ ಮುಂತಾದ ಖಾಸಗಿ ಕಂಪನಿಗಳ ಪಾಲಾದ್ದನ್ನು ಈ ಹಿಂದೆಯೇ ಸಾರ್ವಜನಿಕ ಘಟಕಗಳ ಸಂಸದೀಯ ಸಮಿತಿಯ ವರದಿ ಗಮನಿಸಿತ್ತು. ಏರ್ ಇಂಡಿಯಾ ಮತ್ತು ಇಂಡಿಯನ್ ಏರ್ ಲೈನ್ಸ್ ವಿಲೀನ ಸರಿಯಾಗಿ ಯೋಚಿಸದ, ತಪ್ಪು ನಿರ್ಧಾರವಾಗಿದ್ದು, ಅವೆರಡು ಸಂಸ್ಥೆಗಳು ತಾವಾಗಿಯೇ, ತಮ್ಮ ಪರಸ್ಪರ ಹಿತಗಳನ್ನು ಪರಿಗಣಿಸಿ ಕೈಗೊಂಡ ನಿರ್ಧಾರ ಅಲ್ಲ ಎಂಬುದು ಆತಂಕದ ಸಂಗತಿ ಎಂದಿತ್ತು.

ಅದು 'ಮೇಲಿನಿಂದ' ಹೇರಿದ ನಿರ್ಧಾರ ಎಂಬುದೀಗ ಸಿಎಜಿ ವರದಿಯಿಂದ ಸ್ಪಷ್ಟವಾಗಿದೆ. ಯುಪಿಎ ಸರಕಾರದ ನಾಗರಿಕ ವಿಮಾನಯಾನ ಇಲಾಖೆಯ ಧೋರಣೆಗಳು 2005 ರ ವರೆಗೆ ಲಾಭ ಗಳಿಸುತ್ತಿದ್ದ ಈ ಎರಡು ಸಂಸ್ಥೆಗಳನ್ನು ಈಗ ನಷ್ಟ ಅನುಭವಿಸುತ್ತಿರುವ, ಸಾಲಬಾಧೆಗೊಳಗಾಗಿರುವ ಸಂಸ್ಥೆಗಳನ್ನಾಗಿ ಪರಿವರ್ತಿಸಿವೆ; ಅಲ್ಲದೆ ಬೋಯಿಂಗ್, ಏರ್‌ಬಸ್, ಎಮಿರೇಟ್ಸ್‌ನಂತಹ ವಿದೇಶಿ ಕಂಪನಿಗಳಿಗೆ ಲಾಭ ತಂದಿರುವ ಧೋರಣೆಗಳು ಇವು. ಆದ್ದರಿಂದ ಈ ಬಗ್ಗೆ ಸಮಗ್ರ ಸಿಬಿಐ ತನಿಖೆಯಾಗಬೇಕು. ಇದರಲ್ಲಿ ಆಗಿನ ನಾಗರಿಕ ವಿಮಾನಯಾನ ಮಂತ್ರಿ ಮತ್ತು ಈ ಕುರಿತ

ಪುಟ 14 ಕ್ಕೆ

ಪೆಟ್ರೋಲಿಯಂ ವಲಯದಲ್ಲೂ ದುಷ್ಟಕೂಟದ ಗೋಲ್‌ಮಾಲ್

ಸಿಬಿಐ ಕೇಂದ್ರ ಸರಕಾರದ ಪೆಟ್ರೋಲಿಯಂ ಇಲಾಖೆಯ ತೈಲ-ಅನಿಲ ನಿಕ್ಷೇಪಗಳ ಶೋಧನೆಯ ನಿಯಂತ್ರಣ ವಿಭಾಗವೆನಿಸಿರುವ ಹೈಡ್ರೋ ಕಾರ್ಬನ್‌ಗಳ ಮಹಾನಿರ್ದೇಶನಾಲಯ(ಡಿಜಿಹೆಚ್)ದ ಹಿಂದಿನ ಮುಖ್ಯಸ್ಥ ವಿ.ಕೆ.ಸಿಬಾಲ್ ಮುಕೇಶ್ ಅಂಬಾನಿಯ ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಇತರ ಖಾಸಗಿ ಕುಳಗಳಿಗೆ ಅನುಕೂಲವಾಗುವಂತೆ ವರ್ತಿಸಿದ್ದಾರೆ ಎಂಬ ಬಗ್ಗೆ ಪ್ರಾಥಮಿಕ ಸಾಕ್ಷ್ಯಗಳ ಆಧಾರದಲ್ಲಿ ಆತನ ವಿಚಾರಣೆ ನಡೆಸಲಿದೆ ಎಂಬ ಸುದ್ದಿಯೊಂದಿಗೇ, ಹೈಡ್ರೋಕಾರ್ಬನ್ ಉತ್ಪಾದನಾ ಪಾಲುದಾರಿಕೆ ಕಾಂಟ್ರಾಕ್ಟುಗಳ ಲೆಕ್ಕ ಪರಿಶೋಧನೆ ನಡೆಸಿರುವ ಸಿಎಜಿ ತನ್ನ ವರದಿಯನ್ನು ಸಲ್ಲಿಸಿರುವ ಸುದ್ದಿಯೂ ಬಂದಿದೆ.

ಸಿಬಾಲ್ ಅವರು ಮುಕೇಶ್ ಅಂಬಾನಿಯ ಕಂಪನಿಗೆ ಆಂಧ್ರಪ್ರದೇಶದಲ್ಲಿ ಪೆಟ್ರೋಲಿಯಂ ನಿಕ್ಷೇಪಗಳ ಶೋಧನೆಯಲ್ಲಿ ಬಂಡವಾಳ ಖರ್ಚನ್ನು ನಾಲ್ಕು ಪಟ್ಟು ಹಿಗ್ಗಿಸಿ (240ಕೋಟಿ ಡಾಲರುಗಳ ಬದಲು 880 ಕೋಟಿ ಡಾಲರುಗಳೆಂದು) ತೋರಿಸಲು ಅನುಕೂಲ ಮಾಡಿಕೊಟ್ಟರು, ಅದಕ್ಕೆ ಅಂಬಾನಿ ಕಂಪನಿಯಿಂದ 'ಪ್ರತಿಫಲ'ವನ್ನು ಕೂಡ ಪಡೆದರು ಎಂಬ ಆಪಾದನೆಯಿದೆ. ಅತ್ತ ಸರಕಾರದ ನೀತಿ ನಿರ್ಧಾರಕರು ಮತ್ತು ದೊಡ್ಡ ಬಂಡವಾಳಿಗರ ನಡುವಿನ ದುಷ್ಟಕೂಟ ಯುಪಿಎ ಸರಕಾರದ ಅಡಿಯಲ್ಲಿ ಹೇಗೆ 'ಅರಳಿದೆ' ಎಂಬುದನ್ನು ಸಿಎಜಿ ವರದಿ ತೋರಿಸುತ್ತದೆ.

ರಿಲಯನ್ಸ್ ನಿರ್ವಹಿಸುತ್ತಿರುವ ಕೆಜಿ-ಡಿ6 ಬ್ಲಾಕ್ ಕುರಿತಂತೆ ಸಿಎಜಿ ನಡೆಸಿರುವ ಲೆಕ್ಕ ಪರಿಶೋಧನೆ(ಆಡಿಟ್)ಯಲ್ಲಿ ಸರಕಾರಕ್ಕೆ ಗಮನಾರ್ಹ ನಷ್ಟಗಳನ್ನು ಉಂಟು ಮಾಡಿರುವ ಕೆಲವು ಅನಾಚಾರಗಳು ಕಂಡು ಬಂದಿವೆ. ರಿಲಯನ್ಸ್ ಕಂಪನಿ ಈ ನಿರ್ವಹಣೆಯಲ್ಲಿ ಬೇಕಾದ ಸಾಮಗ್ರಿಗಳ ಖರೀದಿಯನ್ನು ಸ್ಪರ್ಧಾತ್ಮಕ ಹರಾಜಿನ ಮೂಲಕ ಮಾಡದೆ ತನಗೆ ಪ್ರಿಯರೆನಿಸಿದ ಖಾಸಗಿಯವರಿಗೆ ಕೊಟ್ಟಿದೆ, ಅದರ ಖರ್ಚನ್ನು 117%ದಷ್ಟು ಹಿಗ್ಗಿಸಿ ತೋರಿಸಿದೆ, ಈ ಮೂಲಕ 'ಲಾಭ'ದಲ್ಲಿ ತನಗೆ ಸಲ್ಲಬೇಕಾದ್ದಕ್ಕಿಂತ ದುಪ್ಪಟ್ಟಿನಷ್ಟು ಪಾಲು ಗಿಟ್ಟಿಸಿಕೊಂಡಿದೆ. ಅಲ್ಲದೆ ಉತ್ಪಾದನಾ ಹಂಚಿಕೆ ಕಾಂಟ್ರಾಕ್ಟಿನ ಪ್ರಕಾರ 2009ರ ನಂತರ ಅದಕ್ಕೆ ಕೊಡಮಾಡಿದ 7645 ಚದರ ಕಿ.ಮೀ ಪ್ರದೇಶದಲ್ಲಿ 5% ಮಾತ್ರ ಅದರ ಬಳಿಯಿರಬೇಕು. ಇದನ್ನು ಉಲ್ಲಂಘಿಸಿ ಸಮಸ್ತ ಶೋಧನಾ ಪ್ರದೇಶವನ್ನೂ ರಿಲಯನ್ಸ್ ಕಂಪನಿ ವಶದಲ್ಲೇ ಬಿಡಲಾಗಿದೆ. ಇದರಲ್ಲಿ ಹೈಡ್ರೋ ಕಾರ್ಬನ್ ಮಹಾನಿರ್ದೇಶನಾಲಯದ ಶಾಮೀಲೂ ಇದೆ.

ಸರಕಾರ ಅಂಗೀಕರಿಸಿದ 'ಹೊಸ ಶೋಧನಾ ಪರವಾನಿಗೆ ಧೋರಣೆ' (ಎನ್‌ಇಎಲ್‌ಪಿ)ಯ ಉದ್ದೇಶ ನಿರ್ದಿಷ್ಟ ಸಮಯಮಿತಿಯೊಳಗೆ ದೇಶದ ಹೈಡ್ರೊ ಕಾರ್ಬನ್ ಸಂಪನ್ಮೂಲಗಳ ತ್ವರಿತ ಅಭಿವೃದ್ಧಿ. ಆದರೆ ಇಂತಹ ಆಚರಣೆ ಗಳಿಂದಾಗಿ ಆ ಉದ್ದೇಶ ಸಾಧನೆಯಾಗುತ್ತಿಲ್ಲ. (ಈ ಬಗ್ಗೆ ಇದೇ ಸಂಚಿಕೆಯಲ್ಲಿ ಪ್ರಕಟ ವಾಗಿರುವ ವಿವರವಾದ ಲೇಖನವನ್ನು ನೋಡಿ).

ಪುಟ 3 ರಿಂದ

ದುಂಡು ಮೇಜಿನ ಸಭೆ...

ಪ್ರಮಾಣ ರಾಜ್ಯದ ಜನತೆಯನ್ನು ಬೆಚ್ಚಿ ಬೀಳಿಸಿದೆ.

ಲೋಕಾಯುಕ್ತ ವರದಿಯಲ್ಲಿ ತನ್ನದೆ ಸ್ವಂತ ತನಿಖೆಯಲ್ಲದೆ, ಗಣಿ ಇಲಾಖೆ, ಅರಣ್ಯ ಇಲಾಖೆ, ಕಂದಾಯ ಇಲಾಖೆ, ಸಾರಿಗೆ ಇಲಾಖೆಗಳ ಅಸಂಖ್ಯಾತ ದಾಖಲೆಗಳನ್ನು ಪರೀಶಿಲಿಸಿದೆ. ಸುಪ್ರೀಂ ಕೋರ್ಟ್ ನೇಮಿಸಿದ ಕೇಂದ್ರ ಸಮಿತಿ ಆದಾಯ ತೆರಿಗೆ ಇಲಾಖೆ, ಸಿ.ಬಿ.ಐ. ಮೊದಲಾದ ತನಿಖೆಗಳಿಂದ ಹೂರಬಿದ್ದ ಮಾಹಿತಿಯನ್ನು ಸಂಗ್ರಹಿಸಿದೆ. 4ಲಕ್ಷಕ್ಕೂ ಮೀರಿದ ಕಡತಗಳನ್ನು ಪರೀಶಿಲನೆಗೆ ಒಳಪಡಿಸಿದೆ ಯೆಂದರೆ ತನಿಖೆಯ ಪ್ರಮಾಣ ಹಾಗೂ ಖಚಿತತೆಯ ಅರಿವಾಗುತ್ತದೆ.

ಇಷ್ಟೆಲ್ಲಾ ಪರಿಶ್ರಮದೊಂದಿದೆ, ಖಚಿತ ದಾಖಲೆಯೊಂದಿಗೆ ನೀಡಿದ ಈ ವರದಿಯ ಬಗ್ಗೆ ರಾಜ್ಯ ಸರ್ಕಾರ ಕೂಡಲೇ ಕ್ರಮ ಆರಂಭಿಸಬೇಕಾಗಿತ್ತು. ವರದಿಯಲ್ಲಿ ಹೆಸರಿಸಿದ ಮುಖ್ಯಮಂತ್ರಿಗಳ ಮೇಲೆ ಎಫ್.ಐ.ಆರ್. ಗಳನ್ನು ದಾಖಲು ಮಾಡಿ ಕ್ರಿಮಿನಲ್ ಕೃತ್ಯಗಳ ಬಗ್ಗೆ ತನಿಖೆ ಮಾಡಿ ಚಾರ್ಜ್‌ಶೀಟ್ ಸಲ್ಲಿಸಬೇಕಾಗಿತ್ತು. ಲೋಕಾಯುಕ್ತರ ವರಸೆಯ ಅರ್ದಕ್ಕಿಂತ ಹೆಚ್ಚು ಭಾಗ ಜನಾರ್ಧನ ರೆಡ್ಡಿ, ಶ್ರೀರಾಮುಲು, ಕರುಣಾಕರ ರೆಡ್ಡಿ, ಅವರ ಕಂಪನಿ ಮತ್ತು ಗಣಿ ವ್ಯವಹಾರಗಳ ಭಾಗಿದಾರ ಎಂ.ಎಲ್.ಎ.ಗಳು ಮತ್ತು ಅವರ ಸಹಚರರಾದ ಖಾರಪುಡಿ ಮಹೇಶ್ ಮುಂತಾದವರ ಗಣಿ ಮಾಫಿಯಾ ಇವರ ಬಗ್ಗೆಯೇ ಇದೆ. ಜರ್ನಾದನ ರೆಡ್ಡಿ ಕಂಪನಿ ಕರ್ನಾಟಕದಲ್ಲಿ ಮಾಡಿದ ಅಕ್ರಮಗಳು, ಅವ್ಯವಹಾರಗಳು ಆಂಧ್ರಪ್ರದೇಶದಲ್ಲಿ ಅವರು ಮಾಡಿದ ಅಕ್ರಮಗಳ ಹಲವು ಪಟ್ಟು ಎಂಬುದನ್ನುಗಮನಿಸಬೇಕು.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸಾಮೂಜಿಕ ಚಳುವಳಿಗಳು, ಪ್ರಗತಿಪರ ಭ್ರಷ್ಟಾಚಾರ ವಿರೋಧಿ ಸಾಂಸ್ಕೃತಿಕ, ಸಾಹಿತ್ಯಕ ರಂಗದ ಪ್ರಮುಖರು ನಾವೆಲ್ಲಾ ಈ ಕೆಳಗಿನಂತೆ ಒತ್ತಾಯ ಮಾಡುತ್ತೇವೆ.

- ಕೂಡಲೇ ಲೋಕಾಯುಕ್ತ ಮೊದಲನೇ ಹಾಗೂ ಎರಡನೇ ವರದಿಯಲ್ಲಿ ನಮೂದಾದ ಮುಖ್ಯ ಮಂತ್ರಿಗಳು, ಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು, ಮಾಜಿ ಮಂತ್ರಿಗಳು ಇತರ ರಾಜಕಾರಣಿಗಳ ಮೇಲೆ ತಕ್ಷಣ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಬಂಧಿಸಬೇಕು. ತುರ್ತು ತನಿಖೆಮಾಡಿ ಕಠಿಣ ಶಿಕ್ಷೆ ವಿಧಿಸಬೇಕು.
- ಇವರಿಂದ ರಾಜ್ಯ ಬೊಕ್ಕಸಕ್ಕೆ ರಾಜ್ಯದ ಜನತೆಗೆ ಉಂಟಾದ ನಷ್ಟವನ್ನು ತುಂಬಿ ಕೊಳ್ಳಲು ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಬ್ಯಾಂಕ್ ಖಾತೆಗಳನ್ನು ಜಪ್ತಿಮಾಡಬೇಕು.
- ಲೋಕಾಯುಕ್ತರ ವರದಿಯಲ್ಲಿ ಸ್ಪಷ್ಟವಾಗಿ ಹೆಸರಿಸಲ್ಪಟ್ಟ ಅಧಿಕಾರಿಗಳ ಮೇಲೆ ಕೂಡ ಕೂಡಲೇ ಕ್ರಮ ಆರಂಭಿಸಿಬೇಕು.
- ಜನಾರ್ಧನರೆಡ್ಡಿ ಗಣಿ ವ್ಯವಹಾರವೇ ಅಲ್ಲದೆ ಭೂ ಅವ್ಯವಹಾರ ಮೊದಲಾದ ಅನೇಕ ಅವ್ಯವಹಾರಗಳನ್ನು ಸೇರಿಸಿ ಸಿ.ಬಿ.ಐ ತನಿಖೆಗೆ ಒಪ್ಪಿಸಬೇಕು.

✣

ಬಿಜೆಪಿ ದರ್ಬಾರ್

ಪುಟ 11 ರಿಂದ

ಉಣ್ಣುವ 'ತಿಂಗಳ ನಡಿಗೆ ಹಳ್ಳಿಯ ಕಡೆಗೆ' ಎಂಬ ಯೋಜನಾ ಕೈಂಕರ್ಯವನ್ನು ಯಶಸ್ವಿಯಾಗಿ ನೆರವೇರಿಸಿದರು. ಈ ಯೋಜನೆಯ ದಾಳಿಗೆ ಸಿಲುಕಿದ ರೈತ ಕುಟುಂಬವೊಂದರ ಗತಿ ಏನಾಗಿದೆ ಈಗ ನೋಡಿ. ಅದು ಬೀದರ್ ಜಿಲ್ಲೆಯ ಕುಂದಗೂಳ ಎಂಬ ಗ್ರಾಮ. ಬಾಬು ರಾವ್ ಮತ್ತು ಸುಶೀಲಾ ಎಂಬುವವರು ಕೃಷಿಕ ದಂಪತಿಗಳು. ಅವರು ಸಾವಯವ ಕೃಷಿಕರು.

ಯಡಿಯೂರಪ್ಪನವರು ಹೋದ ವರ್ಷ ಆಗಸ್ಟ್ 29,2011 ರಂದು ಇವರ ಮನೆಯಲ್ಲಿ ಉಳಿದು ಚೆನ್ನಾಗಿ ಉಂಡು, ಹೊಗಳಿ ಹೋದರು. ಊರಿನ ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿ ಯೋಜನೆಯನ್ನೂ ಘೊಷಿಸಿದರು.

ಸಿ.ಎಂ. ಬಂದು ಹೋದ ಹಬ್ಬ ಮುಗಿದು ವರ್ಷ ಉರುಳಿತು. ಸಿ.ಎಂ.ಗಳ ಈ ಒಂದು ಭೇಟಿಗೆ ಸು. 25 ಲಕ್ಷ ಖರ್ಚಾಗಿದೆಯಂತೆ. ಇದೊಂದೆ ಗ್ರಾಮದ ಜನರ ಭಾಗ್ಯ. ರಾಜ್ಯದ ಜನರ ಭಾಗ್ಯ. ಗ್ರಾಮಕ್ಕೆ ಶಾಲೆ ಆಸ್ಪತ್ರೆ ಇರಲಿ ನಯಾ ಪೈಸೆಯೂ ದಕ್ಕಲಿಲ್ಲ. ಸಿ.ಎಂ. ಹಬ್ಬಕ್ಕೆ ಹಾಕಲಾದ ಶಾಮಿಯಾನ ಬಾಡಿಗೆ, ತರಲಾಗಿದ್ದ ಎತ್ತಿನ ಬಂಡಿ ಇತ್ಯಾದಿಗಳ ಬಾಡಿಗೆ ಕೊಡಿ ಎಂದು ಬಾಡಿಗೆ ಕೊಟ್ಟವರು ಸಾವಯವ ಕೃಷಿಕ ಬಾಬುರಾವ್ ದಂಪತಿಗಳನ್ನು ಪೀಡಿಸುತ್ತಿದ್ದಾರೆ.

ಆದಿವಾಸಿಗಳ ಬದುಕು...

ಪುಟ 4 ರಿಂದ

ಸಾಮಾನ್ಯವಾಗಿದೆ. ಆನೆಗಳ ಆಕ್ರಮಣಕ್ಕೆ ಆದಿವಾಸಿ ಕುಟುಂಬಗಳು ಹೆಚ್ಚಾಗಿ ಪ್ರಾಣ ಕಳೆದುಕೊಳ್ಳುತ್ತಿರುವುದು ಅಂಗಾಂಗಗಳು ಕಳೆದುಕೊಳ್ಳುವುದು, ಕೃಷಿ ನಾಶ ಉಂಟಾಗುವುದು ಇವರಿಗೆ ಸರಿಯಾದ ನಷ್ಟ ಪರಿಹಾರ ನೀಡದೆ ವಂಚನೆಗೆ ಒಳಗಾಗುತ್ತಿದ್ದಾರೆ. ಜಿಲ್ಲೆಯಲ್ಲಿರುವ ಆದಿವಾಸಿಗಳ ಭೂಮಿಯನ್ನು ಖಾಸಗಿಯವರು ಒತ್ತುವರಿ ಮಾಡಿಕೊಂಡಿದ್ದು ಆದಿವಾಸಿಗಳಿಗೆ ಬದುಕಲು ನಿವೇಶನವಿಲ್ಲದೆ ವಂಚಿತರಾಗಿದ್ದಾರೆ. ಜಿಲ್ಲೆಯಲ್ಲಿರುವ ದೇವರಕಾಡು ಪೈಸಾರಿಯಲ್ಲಿ ತಲೆಮಾರುಗಳಿಂದ ಮನೆ ನಿರ್ಮಿಸಿ ಕೃಷಿ ಕಾಫಿ ತೋಟಗಳನ್ನು ಬೆಳೆಸಿಕೊಂಡು ಬರುತ್ತಿರುವ ಆದಿವಾಸಿ ಕುಟುಂಬಗಳಿಗೆ ಇತ್ತೀಚಿನ ವರ್ಷಗಳಲ್ಲಿ ಗ್ರಾಮ ಪಂಚಾಯಿತಿಯಿಂದ ಮೂಲ ಸೌಲಭ್ಯಗಳು ನೀಡದೆ ಕುಡಿಯುವ ನೀರು ರಸ್ತೆ, ಮನೆ ನಿರ್ಮಿಸುವುದಕ್ಕೆ ಅವಕಾಶಗಳು ನೀಡದೆ ಪಂಚಾಯತ್ ಆಡಳಿತ ತಡೆಹಿಡಿದಿರುವುದರಿಂದ ನೂರಾರು ಆದಿವಾಸಿ ಕುಟುಂಬಗಳು ಬೀದಿಗೆ ಬರುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬೇಡಿಕೆಗಳು:

1. ಜಿಲ್ಲೆಯ ನಿವೇಶನ ರಹಿತ ಆದಿವಾಸಿ ಕುಟುಂಬಗಳಿಗೆ ತಕ್ಷಣವೇ ನಿವೇಶನ ನೀಡಬೇಕು.
2. ಅರಣ್ಯದಲ್ಲಿ ವಾಸವಿರುವ ಅರಣ್ಯ ವಾಸಿಗಳಿಗೆ ಅರಣ್ಯ ಮಸೂದೆಯಡಿಯಲ್ಲಿ ಸಮರ್ಪಕವಾಗಿ ಭೂಮಿ ನೀಡಬೇಕು.
3. ಆದಿವಾಸಿ ಜನತಾಮನೆಗಳಲ್ಲಿ ವಾಸವಿರುವ ಮನೆಗಳನ್ನು ಹೊಸದಾಗಿ ನಿರ್ಮಿಸಿ ಕೊಡಬೇಕು.
4. ಜಿಲ್ಲೆಯಲ್ಲಿ ವಾಸವಿರುವ ಎಲ್ಲಾ ಆದಿವಾಸಿ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ನೀಡಬೇಕು.
5. ಜಿಲ್ಲೆಯ ಎಲ್ಲಾ ಆದಿವಾಸಿಗಳಿಗೆ ಜಾತಿ ಮತ್ತು ಆದಾಯ ಪ್ರಮಾಣಪತ್ರ ನೀಡಲು ಯಾವುದೇ ನಿರ್ಬಂಧಗಳು ಹಾಕಬಾರದು.
6. ಜಿಲ್ಲೆಯ ಎಲ್ಲಾ ಆದಿವಾಸಿ ಕುಟುಂಬಗಳಿಗೆ ಗುರುತಿನ ಚೀಟಿ ನೀಡಬೇಕು ಮತದಾನದ ಹಕ್ಕು ನೀಡುವಂತಾಗಬೇಕು.
7. ಜಿಲ್ಲೆಯಲ್ಲಿರುವ ಆದಿವಾಸಿ ಕುಟುಂಬಗಳ ಗಣತಿಯನ್ನು ಮಾಡಬೇಕು.
8. ಆದಿವಾಸಿಗಳ ಭೂಮಿಯ ಹಕ್ಕುಪತ್ರದಲ್ಲಿ ಎಲ್ಲಾ ಬ್ಯಾಂಕ್‌ಗಳಲ್ಲಿ ಸಾಲ ಸೌಲಭ್ಯ ನೀಡಬೇಕು.
9. ಆನೆ ಹಾವಳಿಯಿಂದ ಪ್ರಾಣ ಕಳೆದು ಕೊಳ್ಳುವ, ಅಂಗಾಂಗಗಳು ಕಳೆದು ಕೊಳ್ಳುವ, ಕೃಷಿ ನಷ್ಟಕ್ಕೆ ಸರಿಯಾದ ರೀತಿಯ ನಷ್ಟ ಪರಿಹಾರ ಕೂಡಲೇ ನೀಡಬೇಕು.
10. ದೇವರಕಾಡು ಪ್ರದೇಶದಲ್ಲಿ ವಾಸವಿರುವ ಆದಿವಾಸಿ ಕುಟುಂಬಗಳಿಗೆ ಮೂಲಭೂತ ಸೌಲಭ್ಯಗಳನ್ನು ಗ್ರಾಮ ಪಂಚಾಯತ್ ನೀಡುವಂತಾಗಬೇಕು.
11. ಆದಿವಾಸಿಗಳ ಭೂಮಿಯನ್ನು ಕೈವಶ ಮಾಡಿಕೊಂಡಿರುವುದರಿಂದ ಬಿಡಿಸಿ ಆದಿವಾಸಿಗಳಿಗೆ ನೀಡಬೇಕು.

ಪ್ರತಿಭಟನೆ

ಈ ಮೇಲ್ಕಂಡ ಬೇಡಿಕೆಗಳಿಗೆ ಆಗ್ರಹಿಸಿ ಆಗಸ್ಟ್ 25 ರಿಂದ 27 ರವರೆಗೆ ಮಡಿಕೇರಿಯ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನಾ ಧರಣ ನಡೆಸಲಾಯಿತು. ✣

ಯುಪಿಎ ದರ್ಬಾರ್

ಪುಟ 13 ರಿಂದ

ಅ[illegible] ಹೇ[illegible]ದ್ದ ಮಂತ್ರಿಗಳ ಗುಂಪಿನ ಅಧ್ಯಕ್ಷರಾಗಿದ್ದ ಆಗಿನ ಹಣಕಾಸು ಮಂತ್ರಿಯ ಪಾತ್ರಗಳ ತನಿಖೆಯಾಗಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಹಣದುಬ್ಬರ : ಎರಡಂಕಿಯ ಅಪಾಯಕಾರಕ ಸಾಮೀಪ್ಯ'

ಆಗಸ್ಟ್ ತಿಂಗಳಲ್ಲಿ ಹಣದುಬ್ಬರ ದರ 9.78% ತಲುಪಿದೆ. ಅದು ಎರಡಂಕಿಯನ್ನು 'ಅಪಾಯಕಾರಕ'ವಾಗಿ ಸಮೀಪಿಸುತ್ತಿದೆ ಎಂದು ಸ್ವತಃ ಯುಪಿಎ ಹಣಕಾಸು ಮಂತ್ರಿಗಳು ಒಪ್ಪಿಕೊಂಡಿದ್ದಾರೆ, ಇದು 'ಭಾರತಕ್ಕಷ್ಟೇ ಅಲ್ಲ, ಇಡೀ ವಿಶ್ವಕ್ಕೆ ಒತ್ತಡದ ಸಮಯ, ಸಹನೆ ಕಳಕೊಳ್ಳಬಾರದು' ಎಂದು ದೀರ್ಘ ಕಾಲದಿಂದ ಬೆಲೆಯೇರಿಕೆಗಳ ಸಂಕಟಗಳನ್ನು ಅನುಭವಿಸುತ್ತಿರುವ ಜನಸಾಮಾನ್ಯರಿಗೆ ಉಪದೇಶ ನೀಡಿದ್ದಾರೆ.

ಕಳೆದ ಒಂಭತ್ತು ತಿಂಗಳಿಂದ ಹಣದುಬ್ಬರದ ದರ ಸತತವಾಗಿ 9%ದ ಮೇಲಿದೆ. ಆಹಾರ ಸಾಮಗ್ರಿಗಳು, ಮತ್ತಿತರ ಸಾಮಗ್ರಿಗಳಲ್ಲಿ ಈ ದರ ಅದಾಗಲೇ ಎರಡಂಕಿಯನ್ನು 'ಅಪಾಯಕಾರಕವಾಗಿ' ದಾಟಿ 13%ದ ಸಮೀಪ ಬಂದಿದೆ. ಅಗಸ್ಟ್ ತಿಂಗಳೊಮದರಲ್ಲೇ ಈರುಳ್ಳಿ ಬೆಲೆ45.29%, ಹಣ್ಣು-ಹಂಪಲುಗಳ ಬೆಲೆ 22.82%, ಆಲೂಗೆಡ್ಡೆ 12.94% ಮತ್ತು ಹತ್ತಿ ಜವಳಿ 16.86% ದಷ್ಟು ಏರಿಕೆ ಕಂಡಿವೆ ಎಂದು ಸರಕಾರ ಈ ವಾರ ಪ್ರಕಟಿಸಿದ ಅಂಕಿ-ಅಂಶಗಳು ತಿಳಿಸಿವೆ. ಕಳೆದ ತಿಂಗಳಲ್ಲಿ(ಜುಲೈ) ಕೈಗಾರಿಕಾ ಉತ್ಪಾದನೆ ದರ 3.3% ಕ್ಕೆ ಇಳಿದಿದೆ. ಇದು ಕಳೆದ 21 ತಿಂಗಳಲ್ಲೇ ಅತೀ ಕಡಿಮೆ. ಇದಕ್ಕೆ ಕಾರಣ ಹಣದುಬ್ಬರ ತಡೆಯಲು ರಿಝರ್ವ್ ಬ್ಯಾಂಕ್ ಕೈಗೊಂಡ 'ಬಿಗಿ' ಕ್ರಮಗಳಿಂದಾಗಿ ಎಂದು ಉದ್ದಿಮೆ ಮಾಲಕರು ಹೇಳುತ್ತಿದ್ದಾರೆ. ಹಣದುಬ್ಬರ ತಡೆಯಲು ಕೈಗೊಂಡಿರುವ ಕ್ರಮಗಳು ಆರ್ಥಿಕ ಬೆಳವಣಿಗೆಯನ್ನು ಮಂದಗೊಳಿಸುತ್ತಿವೆ ಎಂದು ಯುಪಿಎ ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರೂ ಹೇಳಿದ್ದಾರೆ. ಇದಕ್ಕೆ 'ಕಪ್ಪು -ಬಿಳಿಪಿನ ಉತ್ತರವೇನೂ ಇಲ್ಲ' ಎಂದು ಅವರು ಕೈಯೆತ್ತಿ ಬಿಟ್ಟಿದ್ದಾರೆ.

*

ಕಾಯುವವ ಎಲ್ಲಿ?

ಕಾಯುವವ ನಾಪತ್ತೆ ಕೊಲ್ಲುವವ ಇರುವ
ಎಡೆಬಿಡದೆ ಬೆಂಬತ್ತಿ ಸಜ್ಜನರ ಇರಿವ
ಲಾಗಾಯ್ತಿನಿಂದಲೂ ಕಾಯುವವ ಬರುವ
ಅನ್ನುತ್ತಾ ಬಂದಿಹರು ಈ ಮೋಸತರವಾ?

\- ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ


ಇತ್ತೀಚೆಗೆ ಜಗತ್ತಿನಾದ್ಯಂತ ಗಮನ ಸೆಳೆದ ಒಂದು ವಿಶೇಷ ಕೃತಿ,ಟೆರಿ ಈಗಲ್‌ಟನ್ ಅವರ 'ವೈ ಮಾರ್ಕ್ಸ್ ವಾಸ್ ರೈಟ್' ಇದರಲ್ಲಿ ಅವರು ಮಾರ್ಕ್ಸ್‌ವಾದಕ್ಕೆ ತತ್ವದ ಒಳನೋಟಗಳನ್ನು ಹೊಸ ಕಾಲದ ವಿಮರ್ಶೆಗಳಿಗೆ ಅನ್ವಯಿಸಿ, ಹೊಸ ಬೆಳಕಿನಲ್ಲಿ ಇನ್ನೊಮ್ಮೆ ವಿವರಿಸಿದ್ದಾರೆ.
(ಪ್ರಜಾವಾಣಿಯಲ್ಲಿ ಪ್ರಕಟವಾದ ಈ ಕೃತಿಯ ಕುರಿತ ಲೇಖನದ ಆಯ್ದ ಭಾಗ)



ಹೊಸ ಕುಲುಮೆಯಲ್ಲಿ ಮಾರ್ಕ್ಸ್ ಚಿಂತನೆ

ಭಾಗ-2

Terry Eagleton




ಭೌತ ಲೋಕದಲ್ಲಿ ಹುಟ್ಟಿದ ಪ್ರಜ್ಞೆ ವ್ಯಕ್ತಿ ಮತ್ತು ಭೌತ ಲೋಕದ ನಡುವಿನ ಸಂಪರ್ಕದಿಂದ ಬೆಳೆಯುವಂತಹದ್ದು, ಈ ರೀತಿಯ ಪರಸ್ಪರ ಪ್ರಭಾವ ಪ್ರಜ್ಞೆಯ ಬೆಳವಣಿಗೆ ಮುಖ್ಯ. ಅಂತಹ ಬೆಳವಣಿಗೆಯ ತಲೆತಲಾಂತರಗಳ ಸಂಗ್ರಹ ಒಂದು ಚಾರಿತ್ರಿಕ ಉತ್ಪತ್ತಿ. ತನ್ನ ಹೊರಗಿನ ಇನ್ನೊಂದರ ತಿಳುವಳಿಕೆ ತನ್ನತನದ ಎಚ್ಚರವನ್ನು ಉಂಟು ಮಾಡುವಂತಹದು. ಈ ಅರ್ಥದಲ್ಲಿ 'ಅಸ್ಮಿತೆ ಕೂಡಾ ಸಾಮಾಜಿಕ ಉತ್ಪತ್ತಿ. ಮಾರ್ಕ್ಸ್, ನೀಚೆ, ಫ್ರಾಯ್ಡ್ ಮೊದಲಾದವರ ಹಿನ್ನೆಲೆಯಲ್ಲಿ ಟೆರಿ ಈಗಲ್‌ಟನ್ ಮಾಡುವ ಇಂತಹ ವ್ಯಾಖ್ಯಾನಗಳನ್ನು ನಾವು ಗಮನಿಸಬೇಕು.

ಸ್ತ್ರೀ ವಾದದ ಹಿನ್ನೆಲೆಯಲ್ಲಿ ಮಾರ್ಕ್ಸ್‌ನ 'ಕಾರ್ಮಿಕ' ಶಾಶ್ವತ ಗಂಡೆ? ಎಂಬ ಚರ್ಚೆಯನ್ನು ಟೆರಿ ಪ್ರಾರಂಭಿಸುತ್ತಾರೆ. ಗಂಡು-ಹೆಣ್ಣುಗಳ ಮೂಲಭೂತ ಆಕರ್ಷಣೆ ಸಂತಾನೋತ್ಪತ್ತಿಯಿಂದ ಪ್ರೇರೇಪಿತವಾದ ಪ್ರಾಕೃತಿಕ ಸತ್ಯ. ಆದರೆ ಅಂತಹ ಸಂಬಂಧ ಕುಟುಂಬವಾಗಿ, ಸಾಮಾಜಿಕವಾಗಿ ಸಾಧಿತವಾಗಬೇಕಾದಾಗ ಹುಟ್ಟುವ ಆಸ್ತಿಯ ಸಂಬಂಧದ ಕುರಿತಾದ ವಿಚಾರಗಳನ್ನು ಮಾರ್ಕ್ಸ್ ಹಾಗೂ ಎಂಗೆಲ್ಸ್‌ರಿಂದ ಹೆಕ್ಕಿ ತೋರಿಸಿ ಆಧುನಿಕ ಸ್ತ್ರೀ ಸಂವೇದನೆಯ ಮೂಲ ಬೇರುಗಳನ್ನು ಕಾಣಿಸುತ್ತಾರೆ. ಶ್ರಮ ಹಾಗೂ ಜೀವೋತ್ಪತ್ತಿ ಹಿನ್ನಲೆಯಲ್ಲಿ ಮಾನವ ಚರಿತ್ರೆ ಹಾಸು ಹೊಕ್ಕ ಕ್ರಮಗಳ ಮೇಲಿನ ಬೆಳಕು ಇಂದಿನ ಸ್ತ್ರೀವಾದಗಳ ವಿಸ್ತೃತ ವಿಸ್ತಾರಗಳಿಗೆ ಮಾರ್ಕ್ಸ್‌ವಾದ ಹಿನ್ನೆಲೆಯ ಒಳನೋಟ ನೀಡುತ್ತದೆ.

ಇಂದಿನ ಪರಿಸರವಾದ ಹಿನ್ನೆಲೆಯಲ್ಲಿ ಮಾರ್ಕ್ಸ್ ವಿಚಾರಗಳ ವಿಶ್ಲೇಷಣೆ ಟೆರಿ ಅವರ ವ್ಯಾಖ್ಯಾನಗಳ ಸೂಕ್ಷ್ಮ ಸಂವೇದನೆಗಳನ್ನು ಸೂಚಿಸುತ್ತದೆ. ಮಾರ್ಕ್ಸ್ ಕಾಲದಲ್ಲಿ ಪ್ರಕೃತಿಯನ್ನು ಜಯಿಸುವುದು ಮನುಷ್ಯನ ಆದರ್ಶಗಳಲ್ಲಿ ಒಂದು. 1860ರಲ್ಲಿ ಪ್ಲಾಸ್ಟಿಕ್ ಬ್ಯಾಗುಗಳು, ಕಾರ್ಬನ್ ಹಾವಳಿ ಮೊದಲಾದವುಗಳ ಬಗ್ಗೆ ಚಿಂತೆ ಇರಲಿಲ್ಲ. ರೋಗಗಳನ್ನು ಗೆಲ್ಲುವುದು, ಖನಿಜಗಳನ್ನು ಬಗೆಯುವುದು, ಪ್ರಕೃತಿಯನ್ನು ಬಳಸುವುದು ಯುರೋಪಿನ ಆಕಾಂಕ್ಷೆ. ಆದರೆ ಮಾರ್ಕ್ಸ್ ಸೂಚಿಸಿದ 'ವಸ್ತು ಮೋಹ' ಹಿನ್ನಲೆಯಲ್ಲಿ, ಟೆರಿ ಇಂದಿನ ಪರಿಸರವಾದ ಗ್ರಹಿಸಬೇಕಾದ ಬಂಡವಾಳಶಾಹಿಯ ಲಾಭಕೋರತನವನ್ನು ಸೂಚಿಸುತ್ತಾರೆ. ಪ್ರಕೃತಿಯ ಶೋಷಣೆಯಲ್ಲಿ ತಾತ್ಕಾಲಿಕ ಲಾಭಕೋರತನದಲ್ಲಿ ತೊಡಗುವ ಕ್ಯಾಪಿಟಲಿಸಂ(ನಮ್ಮ ಗಣಿಗಾರಿಕೆಯ ಕರ್ಮಕಾಂಡಗಳನ್ನು ನೆನಪಿಸಿಕೊಳ್ಳಿ) ಹಾಗೂ ದೂರಗಾಮಿತ್ವದ ನಿರಂತರ ಉತ್ಪಾದನಾ ಸಾಧ್ಯತೆಗಳ ಹಿನ್ನೆಲೆಯಲ್ಲಿ ಸಾಗಬೇಕಾದ ಮಾರ್ಗದ ಕಡೆಗೆ ಗಮನಹರಿಸುತ್ತಾರೆ.

ಟೆರಿ ಸೂಚಿಸುವ ಅನೇಕ ಪಾಂಡಿತ್ಯಪೂರ್ಣ ಒಳನೋಟಗಳ ಮಹಾಪೂರವನ್ನೇ ನಾವು ಈ ಕೃತಿಯಲ್ಲಿ ಕಾಣಬಹುದು. 'ಸಿಪಾಯಿದಂಗೆ' ಎಂದು ಬ್ರಿಟಿಷರಿಂದ ಕರೆಯಲ್ಪಟ್ಟ, ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ(1857)ದ ಬಗ್ಗೆ ಆ ಕಾಲದ ಭಾರತದ ಯಾವ ಸುಧಾರಣಾವಾದಿಗಳೂ, ಮಾರ್ಕ್ಸ್ ಮಾಡಿದಷ್ಟು ತೀವ್ರವಾದ ಭಾರತೀಯ ಸ್ವಾತಂತ್ರ್ಯಕ್ಕೆ ಪೂರಕವಾದ ಟೀಕೆಗಳನ್ನು ಮಾಡಲಿಲ್ಲ ಎಂಬುದು ಅವುಗಳಲ್ಲಿ ಒಂದು. ಆ ಸಂದರ್ಭದಲ್ಲಿ ಮಾರ್ಕ್ಸ್ ಭಾರತದ ಬಗ್ಗೆ ಹೇಳಿದ 'ವಿಲೇಜ್ ಈಡಿಯಸಿ' ಎಂಬುದೊಂದನ್ನು ತಪ್ಪು ಕಲ್ಪನೆ ಎಂಬಂತೆ ಮಾತ್ರ ಕೇಳಿಸಿಕೊಂಡವರಿಗೆ ಮಾರ್ಕ್ಸ್ ಚಿಂತನೆಯ ಅನ್ವಯಕ ಶಕ್ತಿಯ ಬಗ್ಗೆ ಅನೇಕ ಒಳನೋಟಗಳು ಇಲ್ಲಿವೆ.



ಸೋವಿಯತ್ ಒಕ್ಕೂಟದ ಪತನದ ಬಳಿಕ ಕನ್ನಡದಲ್ಲಿ ಕಮ್ಯುನಿಸ್ಟರ ಬಗ್ಗೆ ತೀವ್ರವಾದ ಆಕ್ಷೇಪದ ಟೀಕೆ ನಡೆಸಿದವರಲ್ಲಿ ಡಾ॥ ಯು.ಆರ್.ಅನಂತಮೂರ್ತಿ ಮುಖ್ಯರು. ಸ್ವತಃ ಎಡಪಂಥೀಯ ಒಲವಿನ ಅನಂತಮೂರ್ತಿಗಳು 'ಹಿಂಸೆಯ ಎಡ-ಬಲ' ಕುರಿತಾಗಿ ಮಾತನಾಡುತ್ತಾ ಹಿಂಸೆ ಬಲಪಂಥ(ನಮ್ಮ ಹಿಂದೂ ಮೂಲಭೂತವಾದ ಹಿನ್ನೆಲೆಯಲ್ಲಿ) ಇತಿಹಾಸದ ಭೂತವನ್ನು ಕೆರಳಿಸಿ ಛೂ ಬಿಡುವಂತಹದಾದರೆ, ಅದರ 'ಎಡಪಂಥ ಭವಿಷ್ಯದ ಭೂತವನ್ನು ಅವಾಹಿಸಿ ಅದಕ್ಕೆ ಅತ್ಯುಗ್ರ ನಿಷ್ಠೆಯಿಂದ ನಡೆದುಕೊಳ್ಳುವಂತಹದು. ಅದರ ಮುನ್ನಡೆಗೆ ಅಡ್ಡಿಯಾಗುವವರನ್ನೆಲ್ಲ ನಿರ್ದಯವಾಗಿ ಬಲಿಕೊಡಲೆಳಸು ವಂತಹದು' ಎಂದು ಹೇಳಿ ಚೀನಾ, ರಷ್ಯಾ ಮೊದಲಾದ ದೇಶಗಳ ಪ್ರವಾಸಗಳಲ್ಲಿ ತಮಗೆ ಎದುರಾದ ಉದಾಹರಣೆಗಳನ್ನು ನೀಡುತ್ತಾರೆ.

ನಕ್ಸಲೈಟರ ಬಗ್ಗೆ ಮಾಧ್ಯಮಗಳು ಅತಿರಂಜಿತವಾಗಿ ಬರೆಯುತ್ತಿರುವ ಕಾಲದಲ್ಲಿ ಮಾರ್ಕ್ಸ್‌ವಾದವನ್ನು ಹಿಂಸೆಯ ಹಿನ್ನೆಲೆಯಲ್ಲಿ ತಿರಸ್ಕರಿಸುವುದು ಬಹುಜನರಿಗೆ ಸುಲಭಗ್ರಾಹ್ಯ. ಅದಕ್ಕೆ ಮುಖ್ಯ ಕಾರಣ ಹಿಂಸೆಯ ಪರಿಣಾಮಗಳ ಪ್ರಭಾವ. ಅದು ಎಡ-ಬಲ ಎರಡನ್ನೂ ಒಂದೇ ತಕ್ಕಡಿಯಲ್ಲಿ ತೂಗುವಂತೆ ಪ್ರೇರೇಪಿಸುತ್ತದೆ. ಆಗ ಅವಿತು ಕೂತಿರುವ ಮಾರುಕಟ್ಟೆ ಪ್ರೇರಿತ ಬಲಪಂಥೀಯ ಹಿಂಸೆಯ ನೂರಾರು ರೂಪಗಳು ಗೋಚರಿಸುವುದಿಲ್ಲ. ಯಾರೂ ಇಂದು ಸ್ಟಾಲಿನ್ ಅಥವಾ ಮಾವೋ ನಡೆಸಿದ ಹಿಂಸೆಯನ್ನು ಸಮರ್ಥಿಸುವುದು ಸಾಧ್ಯವಿಲ್ಲ. ವಾಲ್ಟರ್ ಬೆಂಜಮಿನ್ ಒಂದು ಕಡೆ ಹೇಳಿದ ಹಾಗೆ, ಕ್ರಾಂತಿ ಎನ್ನುವುದು ನಿಯಂತ್ರಣವಿಲ್ಲದೆ ಓಡುವ ರೈಲುಗಾಡಿಯಲ್ಲ. ಅದು (ಕ್ರಾಂತಿ) ನಿಜವಾಗಿ ನಿಯಂತ್ರಿಸುವ ಎಮರ್ಜೆನ್ಸಿ, ಬ್ರೇಕುಗಳು. ನಿಜದಲ್ಲಿ ನಿಯಂತ್ರಣ ಇಲ್ಲದಿರುವುದು ಕೇವಲ ಮಾರುಕಟ್ಟೆಯ ಹಿಡಿತದಲ್ಲಿರುವ ಬಂಡವಾಳಶಾಹಿ ವ್ಯವಸ್ಥೆಗೆ.

ಹಿಂಸೆ ತನಗೆ ತಾನೆ ಸ್ವಯಂಭೂ ಅಲ್ಲ. ಅದಕ್ಕೆ ವ್ಯಕ್ತಿ, ಸಮಾಜ, ಧರ್ಮ, ಆರ್ಥಿಕ, ರಾಜಕೀಯ ಹಾಗೂ ಪ್ರಾಕೃತಿಕ ಮೊದಲಾದ ಪರಿಪ್ರೇಕ್ಷವಿರುತ್ತದೆ. ಅದರಿಂದಾಗಿ ಹಿಂಸೆಯ ಪರಿಣಾಮದ ಹೊರತಾಗಿ ಯೋಚಿಸಿದಾಗ ಎಡ-ಬಲಗಳೆರಡೂ ಹಿಂಸೆಯ ಎದುರು ಸಮಾನವಾಗಲು ಸಾಧ್ಯವೇ ಎಂಬುದು ಪ್ರಶ್ನೆ. ಈ ಹಿನ್ನೆಲೆಯಲ್ಲಿ ಹಿಂಸೆಯ ವಾಸ್ತವ ಹಾಗೂ ಪರಿಕಲ್ಪನೆಗಳ ಎದುರು ಮಾರ್ಕ್ಸ್ ತತ್ವದ ಸಮಗ್ರ ವಿಶ್ಲೇಷಣೆಗಾಗಿ ಈ ಕೃತಿಯ ಎಂಟನೇ ಅಧ್ಯಾಯವನ್ನು ಟೆರಿ. ಈಗಲ್‌ಟನ್ ಮೀಸಲಿಟ್ಟಿದ್ದಾರೆ. ಆ ಭಾಗದಲ್ಲಿ ಕ್ರಾಂತಿ, ಪಾರ್ಲಿಮೆಂಟರಿ ಡೆಮಾಕ್ರಸಿ, ಕಮ್ಯುನಿಸ್ಟ್ ಅಧಿಕಾರದಲ್ಲಿದ್ದ ಸರ್ಕಾರಗಳ ಚಾರಿತ್ರಿಕ ವಿಶ್ಲೇಷಣೆ, ಈ ಹಿಂದೆ ನಡೆದ ಮಹಾಯುದ್ಧಗಳಲ್ಲಾದ ಹಿಂಸೆ-ಹೀಗೆ ಹಿಮಸೆ ಹಾಗೂ ಮಾರ್ಕ್ಸ್‌ವಾದವನ್ನು ನಿಖರ ಅಂಕಿ ಅಂಶಗಳ ಸಹಿತ ಮುಖಾಮುಖಿಯಾಗಿಸಿ ಚರ್ಚಿಸುತ್ತಾರೆ. ಅನಂತಮೂರ್ತಿಗಳ ಶೈಲಿಯಂತೆ ಹಿಂಸೆಯ ಬಗ್ಗೆ ಎಡ ಪಂಥಗಳ ಬಗೆಗಿನ ತಾತ್ವಿಕ ಹೇಳಿಕೆ ಮೂಲಕ ಪ್ರವೇಶಿಸಿ ಬಳಿಕ ರೂಪಕನಿಷ್ಠ ಚಿಂತನೆಯಾಗಿ ಅದನ್ನು ಬೆಳೆಸಿದಾಗ ಕ್ಯಾಪಿಟಲಿಸಂನ ಮಾರುಕಟ್ಟೆ ಪ್ರೇರಿತ ಹಿಂಸೆಯನ್ನು ಗ್ರಹಿಕೆಯಾಗಿ ಮರೆಮಾಚಲು ಅನೇಕ ಸಲ ಅದು ಅಪ್ರತ್ಯಕ್ಷ ಸಹಾಯ ಮಾಡುತ್ತದೆ. ಮಾನವ ಸಂದರ್ಭಗಳಲ್ಲಿ ಇದ್ದೇ. ಟೆರಿ ನಡೆಸುವ ಹಿಂಸೆಯ ಬಗೆಗಿನ ತಾತ್ವಿಕ ಚರ್ಚೆ, ಅದೇ ಹಿಂಸೆಯ ಎದುರು ಎಡ-ಬಲಗಳು ಸಮಾನ ಎಂಬ ರೀತಿಯಲ್ಲಿ ಭಾವೋತ್ತೇಜಕ ಪ್ರಭಾವ ಬೀರುವ ರೂಪಕನಿಷ್ಠ ಚಿಂತನೆಯನ್ನು ಹೇಗೆ ಇನ್ನೊಂದು ದೃಷ್ಟಿಯಿಂದ ಸತ್ಯ ಶೋಧನೆಗಾಗಿ ಚರ್ಚಿಸಬಹುದು ಎಂಬುದನ್ನೂ ತೋರಿಸಿಕೊಡುತ್ತದೆ.

ಅಂಕಿ ಅಂಶಗಳ ಸಹಿತ, ಜಗತ್ತಿನಾದ್ಯಂತ ಇರುವ ಸ್ಲಮ್‌ಗಳು, ಬಾಡಿ ಶಾಪಿಂಗ್‌ನ ನಾನಾ ಕೆಲಸಗಳು, ಆಹಾರದ ಸಮಸ್ಯೆ, ಬಂಡವಾಳ ಹೂಡಿಕೆ ಹಿನ್ನೆಲೆಯಲ್ಲಿ ಉಂಟಾಗುವ ಮಾರುಕಟ್ಟೆ ಒತ್ತಡ, ಅದರ ರಕ್ಷಣೆಗೆ ಬರುವ ಆಡಳಿತ ನಿಯಮಾವಳಿಗಳು, ಅದರ ಹಿಂದಿರುವ ಸರ್ಕಾರ, ರಾಷ್ಟ್ರ ವ್ಯವಸ್ಥೆ ಮತ್ತು ಆ ಮೂಲಕ ನಡೆಯುವ ಯುದ್ಧ ಇವುಗಳೆಲ್ಲದರ ಮೂಲಕ ಟೆರಿ ಹಿಂಸೆಯ ಮೂಲಸ್ವರೂಪದ ಅಂತರಂಗ ದರ್ಶನಕ್ಕೆ ಪ್ರಯತ್ನಿಸುತ್ತಾರೆ. ಆ ಮೂಲಕ ಹಿಂಸೆಯ ಪರಿಣಾಮಗಳಿಗೆ ಮಾತ್ರ ನೀಡುವ ಪ್ರತಿಕ್ರಿಯೆ ಹೇಗೆ ಕಾಣಿಸಿಕೊಡುತ್ತಾರೆ.

ಟೆರಿ ಈಗಲ್‌ಟನ್‌ರ 'ವೈ ಮಾರ್ಕ್ಸ್ ವಾಸ್ ರೈಟ್' ಕೃತಿ ಮಾರ್ಕ್ಸ್‌ವಾದವನ್ನು ಪರಿಚಯಿಸುವ ಉದ್ದೇಶ ಹೊಂದಿಲ್ಲ. ಇಂದು ಮಾರ್ಕ್ಸ್‌ನನ್ನು ಅರ್ಥ ಮಾಡಿಕೊಳ್ಳಬೇಕಾದ ಆಧುನೀಕೋತ್ತರ ಕ್ರಮವನ್ನು ಸೂಚಿಸುತ್ತದೆ. ಈ ಕೃತಿ ಜಗತ್ತಿನಾದ್ಯಂತ ಚಿಂತಕರನ್ನು ಆಕರ್ಷಿಸಿ ಬೌದ್ಧಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಮಾರ್ಕ್ಸ್‌ವಾದದ ಹಿನ್ನೆಲೆಯಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ಉರುಳಿದ ಬಳಿಕವೂ ಮಾರ್ಕ್ಸ್ ನಮಗೆ ಇಂದು ಕಾಣಿಸುವ ತಾತ್ವಿಕ ನೆಲೆಗಳನ್ನು ವಿವರಿಸಿ, ವಿಶ್ಲೇಷಿಸಿ ವ್ಯಾಖ್ಯಾನಿಸುತ್ತದೆ. ಹಾಗೆಯೇ, ಈ ಕೃತಿಯನ್ನು ವಿರೋಧಿಸುವ, ಅಲ್ಲಗಳೆಯುವ ಸಾಕಷ್ಟು ಕೃತಿಗಳೂ, ಲೇಖನಗಳೂ ಮುಂದೆ ಬರಲಿರುವುದರ ಬಗ್ಗೆ ಅನುಮಾನ ಬೇಡ. ಇಂದಿನ ತಂತ್ರಜ್ಞಾನಗಳ ಆಧುನಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಮಾರುಕಟ್ಟೆ ಬಂಡವಾಳಶಾಹಿಯ ಸೂಕ್ಷ್ಮ ವಿಸ್ತರಣೆಯಂತೆ ಜಾಗತೀಕರಣ ಬಲಿಷ್ಠವಾಗಿ ಹಬ್ಬುತ್ತಿರುವ ಸಂದರ್ಭದಲ್ಲಿ ಅದರ ಎದುರಾಗಿ 'ವೈ ಮಾರ್ಕ್ಸ್‌ವಾಸ್ ರೈಟ್' ಎಂಬ ಪ್ರಖರ ತಾತ್ವಿಕ ಚಿಂತನೆಯ ಕೃತಿಯೊಂದು ಹೊರಬಂದಿದೆ ಎಂಬುದನ್ನೂ ನಾವು ನೆನಪಿಡಬೇಕು.

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಜನಸಂಸ್ಕೃತಿ ನಿರ್ವಚನೆ : ವಿಚಾರ ಸಂಕಿರಣ

"ಸ್ಥಗಿತತೆಯ ನೆಲೆಯಲ್ಲಿ ಸಂಸ್ಕೃತಿಯ ವ್ಯಾಖ್ಯಾನ ಸಲ್ಲದು"

- ಪ್ರೊ. ಕಲ್ಗುಡಿ

ವರದಿ : ವಸಂತರಾಜ ಎನ್.ಕೆ

"ಸಂಸ್ಕೃತಿ ಎನ್ನುವುದನ್ನು ಬಹು ವ್ಯಾಪಕವಾಗಿ ಸ್ಥಾವರಗೊಂಡ ಪರಿಕಲ್ಪನೆಯ ಸ್ವರೂಪದಲ್ಲಿ ವಿವರಿಸಲಾಗುತ್ತದೆ. ಸಂಸ್ಕೃತಿಯ ವ್ಯಾಖ್ಯಾನದಲ್ಲಿ ಹೀಗೆ ಸ್ಥಾವರಗೊಂಡ ವಿವರಣೆಗಳನ್ನು ಈಗ ಪ್ರಶ್ನೆ ಮಾಡಬೇಕಾದ ಪರಿಸ್ಥಿತಿ ಇದೆ. ಇಲ್ಲದಿದ್ದರೆ ಇದು 'ರೊಮ್ಯಾಂಟಿಕ್' ಆದ 'ವೈಭವೀಕರಣ'ದ ನೆಲೆಯಿಂದ, ಯಾವುದೇ ಒಂದು ವರ್ಗದ ಹಿತಾಸಕ್ತಿಯನ್ನು ಕಾಪಾಡಲು ಮುಂದಾಗುತ್ತದೆ. ಆದ್ದರಿಂದ ಸಂಸ್ಕೃತಿಯ ವ್ಯಾಖ್ಯಾನವನ್ನು ಸ್ಥಗಿತ ನೆಲೆಯಲ್ಲಿ ಮಾಡದೆ ಅದನ್ನು ಚಲನಶೀಲವೆಂದು ಗುರುತಿಸಿ ನೋಡಬೇಕು. ಜನಸಂಸ್ಕೃತಿಯ ಪರಿಕಲ್ಪನೆಯನ್ನು ಈ ಹಿನ್ನೆಲೆಯಲ್ಲೇ ವ್ಯಾಖ್ಯಾನ ಮಾಡಬೇಕಾಗಿದೆ. ಜನ ಸಮುದಾಯವನ್ನು ಏಕಘನ ಮಾದರಿಯಲ್ಲಿ ನೋಡಲು ಸಿಗುವುದಿಲ್ಲ. ಭಿನ್ನ ವರ್ಗ, ವರ್ಣಗಳಾಗಿ ರೂಪುಗೊಂಡಿರುವ ಸಮುದಾಯವು ಪರಸ್ಪರ ಇನ್ನೊಂದರ ಜೊತೆಗಿನ ಸಂಬಂಧವನ್ನು ಸಂಘರ್ಷ ಮತ್ತು ಸಂವಾದದಲ್ಲಿ ತೊಡಗಿಸಿಕೊಂಡೇ ತನ್ನ ಸ್ವರೂಪವನ್ನು, ಸಮಸ್ಯೆಗಳನ್ನೂ ಬದಲಾಯಿಸಿಕೊಳ್ಳುತ್ತ ಇರುತ್ತದೆ." ಎನ್ನುತ್ತಾ ಪ್ರೊ. ಬಸವರಾಜ ಕಲ್ಗುಡಿ ತಮ್ಮ ಆಶಯ ಭಾಷಣದ ಮೂಲಕ ಜನಸಂಸ್ಕೃತಿಯ ನಿರ್ವಚನೆಯ ವಿಚಾರ ಮಂಥನವನ್ನು ಆರಂಭಿಸಿದರು.



ವಿಚಾರಸಂಕಿರಣ ಉದ್ಘಾಟಿಸುತ್ತಿರುವ ಪ್ರೊ. ಬಸವರಾಜ ಕಲ್ಗುಡಿ

ಪ್ರೊ. ಕಲ್ಗುಡಿ ಅವರು ಸೆಪ್ಟೆಂಬರ್ 10-11 ರಂದು ಶಿರಸಿಯಲ್ಲಿ ಜನಸಂಸ್ಕೃತಿಯ ನಿರ್ವಚನೆಯ ಬಗ್ಗೆ ಸಮುದಾಯ ಮತ್ತು ಚಿಂತನ ಉತ್ತರ ಕನ್ನಡ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಮತ್ತು ಕಾರ್ಯಾಗಾರವನ್ನು ಉದ್ಘಾಟಿಸುತ್ತಿದ್ದರು. ವಿಚಾರ ಸಂಕಿರಣ ಮತ್ತು ಕಾರ್ಯಾಗಾರದಲ್ಲಿ ಸಮುದಾಯ ಘಟಕಗಳ ಪ್ರತಿನಿಧಿಗಳಲ್ಲದೆ, ಹಲವು ಪ್ರಗತಿಪರ ಲೇಖಕರು, ಕಲಾವಿದರು, ಚಿಂತಕರು ಭಾಗವಹಿಸಿದ್ದರು. ಜನಸಂಸ್ಕತಿ ಮತ್ತು ಇತರ ಸಂಸ್ಕೃತಿಯ ಪರಿಕಲ್ಪನೆಗಳ ನಡುವೆ ಸಂಬಂಧ, ಪೋಸ್ಟ್ ಮಾಡರ್ನಿಸಂ (ಆಧುನಿಕೋತ್ತರ 'ವಾದ)ನ ಸೈದ್ಧಾಂತಿಕ ಸವಾಲು, ಹೊಸ ಸಾಹಿತ್ಯ ಚಳುವಳಿಯ ಅಗತ್ಯ ಮುಂತಾದ ಹಲವು ವಿಷಯಗಳ ಬಗೆಗೂ ಅವರು ಬೆಳಕು ಚೆಲ್ಲಿದರು. ಹೊಸ ಆರ್ಥಿಕ-ರಾಜಕೀಯ ನೀತಿಗಾಗಿ ನಡೆಸುವ ಚಳುವಳಿಗಳೇ ಅತ್ಯಂತ ಸೂಕ್ಷ್ಮ ಹಂತದಲ್ಲಿ ಸಾಂಸ್ಕೃತಿಕ ಚಳುವಳಿಯಾಗಿಯೂ ಪರಿವರ್ತಿತವಾಗುತ್ತವೆ ಎಂದು ಅವರು ಪ್ರತಿಪಾದಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪ್ರೊ.ಎಸ್.ಜಿ.ಸಿದ್ಧರಾಮಯ್ಯ ಅವರು ಇದು ಜನಸಂಸ್ಕೃತಿ-ವಿರೋಧಿ ಚಳುವಳಿಗಳ ಯುಗ ಎನ್ನುತ್ತಾ ಇತ್ತೀಚಿನ ಅಣ್ಣಾ ಹಜಾರೆ ಚಳುವಳಿಯ ಹಿಂದಿರುವ ಪ್ರಜಾಪ್ರಭುತ್ವ-ವಿರೋಧಿ ಹುನ್ನಾರಗಳನ್ನು ಬಿಚ್ಚಿಟ್ಟರು. ಬೆತ್ತಲೆ ಸೇವೆ ಮಡೆಸ್ನಾನಗಳನ್ನು ಸಮರ್ಥಿಸುವ, ಮಲ ಸುರಿದುಕೊಳ್ಳುವ ಸವಣೂರು ದಲಿತರ ಹತಾಶೆಗೆ ಯಾವುದೇ ಸ್ಪಂದನೆ ತೋರದ ಕ್ರೂರ ಸಾಂಸ್ಕೃತಿಕ ವಾಸ್ತವದ ಬಗ್ಗೆ ಅವರು ಗಮನ ಸೆಳೆದರು. ಇಬ್ಬರೂ ಭಾಷಣಕಾರರ ವಿಚಾರಗಳ ಬಗ್ಗೆ ಚರ್ಚೆಯ ನಂತರ, ಅಧ್ಯಕ್ಷತೆ ವಹಿಸಿದ್ದ ಸಮುದಾಯದ ರಾಜ್ಯ ಅಧ್ಯಕ್ಷರೂ ಆದ ಪ್ರೊ. ಹುಡಗಿ ಅವರ ಮಾತುಗಳೊಂದಿಗೆ ಉದ್ಘಾಟನಾ ಅಧಿವೇಶನ ಮುಕ್ತಾಯವಾಯಿತು. ಈ ಮೊದಲು ಪ್ರಸ್ತಾವನೆಯನ್ನು ಪ್ರಧಾನ ಕಾರ್ಯದರ್ಶಿ ಟಿ.ಸುರೇಂದ್ರ ರಾವ್ ಮಾಡಿದರು ಡಾ. ವಿಠ್ಠಲ ಭಂಡಾರಿ ಅವರು ಸ್ವಾಗತ ಕೋರಿದರು. ಉದ್ಘಾಟನಾ ಅಧಿವೇಶನದ ನಿರ್ವಹಣೆ ಮಾಡಿದವರು ಡಾ. ಮಾಧವಿ ಭಂಡಾರಿ.



ವಿಚಾರಸಂಕಿರಣ ಪ್ರಕಾಶ್ ಬೆಳವಾಡಿ

ಜನಸಂಸ್ಕೃತಿಯ ಹಲವುಆಯಾಮಗಳು

ಜನಸಂಸ್ಕೃತಿಯ ನಿರ್ವಚನೆಯ ಹಲವು ಆಯಾಮಗಳನ್ನು ಅನಾವರಣಗೊಳಿಸುವ ಮುಖ್ಯ ಅಧಿವೇಶನದ ಅಧ್ಯಕ್ಷತೆಯನ್ನು ಖ್ಯಾತ ಬಂಡಾಯ ವಿಮರ್ಶಕ ಶಿವಾನಂದ ಸಾಸ್ವೆಹಳ್ಳಿ ಯವರು ವಹಿಸಿದ್ದರು. "ಮಹಿಳೆಯರು, ದಲಿತರು ಮತ್ತು ಕೃಷಿ ಕಾರ್ಮಿಕರ ದೃಷ್ಟಿಯಲ್ಲಿ ಜನಸಂಸ್ಕೃತಿ" ಬಗ್ಗೆ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ನೀಲಾ ಕೆ. ಮಾತನಾಡಿದರು.

ತಾಯಿಯೇ ಸಂಸ್ಕೃತಿಯ ಜನನಿ. ದುಡಿಮೆಗೆ ಇನ್ನೊಂದು ಹೆಸರು. ಈ ಮೂವರಿಗೂ ಸಮಾನವಾದದ್ದು ದುಡಿಮೆ ಎನ್ನುತ್ತಾ, ಅವರ ಶ್ರಮ ಸಂಸ್ಕೃತಿ ಮತ್ತು ಯಜಮಾನ ಸಂಸ್ಕೃತಿಗಳ ನಡುವೆ ಸತತ ಸಂಘರ್ಷದ ಹಲವು ಉದಾಹರಣೆಗಳನ್ನು ಅವರು ನೀಡಿದರು.

"ಸಿನಿಮಾ, ಟಿವಿ ಮತ್ತು ಜನಸಂಸ್ಕೃತಿ" ಬಗ್ಗೆ ಮಾತನಾಡುತ್ತಾ ಖ್ಯಾತ ಪತ್ರಕರ್ತ, ದೃಶ್ಯ ಮಾಧ್ಯಮ ತಜ್ಞ ಪ್ರಕಾಶ ಬೆಳವಾಡಿ ನಮ್ಮ ಮಾಧ್ಯಮಗಳ ಒಡೆತನದ ಸ್ವರೂಪ ಮತ್ತು ಅದರ ಜನ-ವಿರೋಧಿ ಹುನ್ನಾರಗಳನ್ನು ಬಯಲಿಗೆಳೆದರು. ದೃಶ್ಯ ಮಾಧ್ಯಮ ಇತರ ಮಾಧ್ಯಮಗಳಿಗಿಂತ ಭಿನ್ನವಾಗಿ ತನ್ನ ವಿಶಿಷ್ಟ ಪರಿಣಾಮಗಳನ್ನು ಬೀರುವ ಬಗೆಯನ್ನು ಹಲವು ಉದಾಹರಣೆಗಳೊಂದಿಗೆ ಮನ ತಟ್ಟುವಂತೆ ವಿವರಿಸಿದರು. ಜನಪರ ಸಾಂಸ್ಕೃತಿಕ ಚಳುವಳಿಗಳು ದೃಶ್ಯ ಮಾಧ್ಯಮದ ಮೇಲೆ ಹಿಡಿತ ಸಾಧಿಸುವುದರ ಮತ್ತು ರೇಡಿಯೋ-ಟಿವಿ-ಇಂಟರ್ನೆಟ್ ಮುಂತಾದ ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಭಾಗವಹಿಸುವ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು.



ಪುಸ್ತಕ ಬಿಡುಗಡೆ



ನೆರೆದ ಜನಸಮುದಾಯ

ಹೊಸ ಸಾಂಸ್ಕೃತಿಕ ಚಳುವಳಿಯ ಆವಶ್ಯಕತೆ

ನಮ್ಮ ದೇಶದ ಸಾಂಸ್ಕೃತಿಕ ಚಳುವಳಿಗಳಲ್ಲಿ ಪ್ರಮುಖವಾದ ಇಪ್ಟಾ (ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಶನ್) ಬಗ್ಗೆ

ಪುಟ 10 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor : S.Y.GURUSHANTH